# ಮೈಸೂರು ವಿಶ್ವವಿದ್ಯಾನಿಲಯ

**ದಿನಾಂಕ 07-07-2017ರಂದು ಸಂಜೆ 4.00 ಗಂಟೆಗೆ ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ಜರುಗಿದ ವಿಶೇಷ ಸಿಂಡಿಕೇಟಿನ ಸಾಮಾನ್ಯ ಸಭೆಯ ನಡೆವಳಿಗಳು.**

**ಹಾಜರಿದ್ದ ಸದಸ್ಯರು:**

| | | |
|---|---|---|
| 1. ಪ್ರೊ. ದಯಾನಂದ ಮಾನೆ | – | ಕುಲಪತಿಗಳು(ಪ್ರಭಾರ) ಹಾಗೂ ಅಧ್ಯಕ್ಷರು |
| 2. ಡಾ. ನಿಂಗಮ್ಮ ಸಿ.ಬೆಟ್ಸೂರ್ | – | ಸದಸ್ಯರು |
| 3. ಶ್ರೀ ಪುಷ್ಪಕುಮಾರ್ ಎಂ.ವಿ. | – | ಸದಸ್ಯರು |
| 4. ಡಾ. ಎಂ.ಸಿ.ನಟರಾಜ | – | ಸದಸ್ಯರು |
| 5. ಶ್ರೀ ಕೆ.ಎಂ.ಕಾಳೇಗೌಡ | – | ಸದಸ್ಯರು |
| 6. ಶ್ರೀಮತಿ ಶೃತಿತರುಣ್‌ಗಿರಿ | – | ಸದಸ್ಯರು |
| 7. ಪ್ರೊ. ಡಿ. ನಂಜುಂಡಯ್ಯ | – | ಸದಸ್ಯರು |
| 8. ಶ್ರೀ ಲಯನ್ ಹೆಚ್. ರಮೇಶ್ | – | ಸದಸ್ಯರು |
| 9. ಶ್ರೀ ಮಹಮದ್‌ಅಬ್ದುಸ್ಸಲಾಂ | – | ಸದಸ್ಯರು |
| 10. ಶ್ರೀ ಕುಮಾರ್ | – | ಸದಸ್ಯರು |
| 11. ಶ್ರೀಮತಿ ಎಂ.ಎನ್.ಪೊನ್ನಮ್ಮ | – | ಸದಸ್ಯರು |
| 12. ಶ್ರೀ ಎಂ.ಎಸ್.ಎಸ್. ಕುಮಾರ್ | – | ಸದಸ್ಯರು |
| 13. ಪ್ರೊ. ಜೆ. ಸೋಮಶೇಖರ್ | – | ಸದಸ್ಯರು |
| ಕುಲಸಚಿವ(ಪರೀಕ್ಷಾಂಗ) | – | ಸದಸ್ಯರು |
| 14. ಶ್ರೀಮತಿ ಡಿ. ಭಾರತಿ, ಕೆ.ಎ.ಎಸ್ ಕುಲಸಚಿವ | – | ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು |

**ಹಾಜರಾಗದ ಸದಸ್ಯರು:**

1. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
3. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
4. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
5. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ

ಮೊದಲಿಗೆ ಸನ್ಮಾನ್ಯ ಕುಲಪತಿಗಳು ಸಿಂಡಿಕೇಟ್‌ನ ವಿಶೇಷ ಸಾಮಾನ್ಯ ಸಭೆಗೆ ಆಗಮಿಸಿದ್ದ ಎಲ್ಲಾ ಸದಸ್ಯರುಗಳನ್ನು ಹೃತ್ಪೂರ್ವಕವಾಗಿ ಆಹ್ವಾನಿಸಿದರು.

ನಂತರ, ಕುಲಸಚಿವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳನ್ನು ಸ್ವಾಗತಿಸಿ, ಸಭೆಯ ಕಾರ್ಯಸೂಚಿಯನ್ನು ಕೈಗೆತ್ತಿಕೊಂಡರು.

| ಕ್ರಮ ಸಂಖ್ಯೆ | ವಿಷಯ ಸಂಕ್ಷಿಪ್ತವಾಗಿ |
|---|---|
| Spl Syn 2017/7.1 | ಶ್ರೀ ಬಿ.ಲಕ್ಷ್ಮೀಕಾಂತ್, ಮುಖ್ಯ ಲೆಕ್ಕಾಧಿಕಾರಿಗಳು, ಮೈಸೂರು ಮಹಾನಗರ ಪಾಲಿಕೆ, ಮೈಸೂರು ಇವರನ್ನು ಮೈಸೂರು ವಿಶ್ವವಿದ್ಯಾನಿಲಯದ ಹಣಕಾಸು ಅಧಿಕಾರಿಯಾಗಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವ ಬಗ್ಗೆ. |
| | ಶ್ರೀ.ಬಿ.ಲಕ್ಷ್ಮೀಕಾಂತ್, ಮುಖ್ಯ ಲೆಕ್ಕಾಧಿಕಾರಿಗಳು, ಮೈಸೂರು ಮಹಾನಗರ ಪಾಲಿಕೆ, ಮೈಸೂರು ಇವರನ್ನು ಮೈಸೂರು ವಿಶ್ವವಿದ್ಯಾನಿಲಯದ ಹಣಕಾಸು ಅಧಿಕಾರಿಯಾಗಿ ಸರ್ಕಾರವು ನೇಮಕ ಮಾಡಿದ್ದು, ಸದರಿ ಅಧಿಕಾರಿಯವರು ಕರ್ತವ್ಯಕ್ಕೆ ವರದಿ |

| | |
|---|---|
| | ಮಾಡಿಕೊಳ್ಳಲು ಸಿಂಡಿಕೇಟಿನ ಅನುಮೋದನೆಯನ್ನು ಪಡೆಯಬೇಕಾಗಿರುತ್ತದೆ. ಮೈಸೂರು ವಿಶ್ವವಿದ್ಯಾನಿಲಯದ ಅಧಿನಿಯಮ 2000 ಪ್ರಕರಣ 19 (1) ರಲ್ಲಿ **"ಹಣಕಾಸು ಅಧಿಕಾರಿಯು, ಕುಲಪತಿಯು ಸಿಂಡಿಕೇಟಿಗೆ ಶಿಫಾರಸ್ಸು ಮಾಡಿದ, ಲೆಕ್ಕ ಪರಿಶೋಧನೆ, ಲೆಕ್ಕಪತ್ರ ಮತ್ತು ಹಣಕಾಸು ಆಡಳಿತದಲ್ಲಿ ಅನುಭವವಿರುವ ರಾಜ್ಯ ಲೆಕ್ಕಪತ್ರಗಳ ಇಲಾಖೆಯ ಜಂಟಿ ನಿಯಂತ್ರಕ ಕೇಡರ್‌ನಲ್ಲಿನ ಅಧಿಕಾರಿಗಳು ಅಥವಾ ಉಪಮಹಾಲೇಖಾಪಾಲ ದರ್ಜೆಯ ಒಬ್ಬ ಅಧಿಕಾರಿಯು ಇರುವ ಮೂರು ವ್ಯಕ್ತಿಗಳಿಗಿಂತ ಕಡಿಮೆಯಾಗಿರುವ ಹೆಸರುಗಳ ಪಟ್ಟಿಯಿಂದ ಸಿಂಡಿಕೇಟಿನ ಅನುಮೋದನೆಯೊಂದಿಗೆ, ಕುಲಪತಿಯಿಂದ ನೇಮಕ ಮಾಡಲಾಗುವ ವಿಶ್ವವಿದ್ಯಾನಿಲಯದ ಒಬ್ಬ ಪೂರ್ಣಕಾಲಿಕ ಅಧಿಕಾರಿಯಾಗಿರತಕ್ಕದು. ಪರಿನಿಯಮಗಳ ಮೂಲಕ ನಿಯಮಿಸಲಾದ ಸಮಯದೊಳಗೆ ಪಟ್ಟಿಯಲ್ಲಿನ ಯಾರ ಹೆಸರೂ ಸಿಂಡಿಕೇಟಿನಿಂದ ಅನುಮೋದಿತವಾಗಿರದಿದ್ದರೆ, ಕುಲಾಧಿಪತಿಯು, ಕುಲಪತಿಯೊಂದಿಗೆ ಸಮಾಲೋಚಿಸಿ, ಹಣಕಾಸು ಅಧಿಕಾರಿ ಆಗಿರಲು ಸೂಕ್ತವೆಂದು ಅವನು ಭಾವಿಸುವಂಥ ಇತರ ವ್ಯಕ್ತಿಯನ್ನು ನೇಮಕ ಮಾಡಬಹುದು"** ಎಂದು ಸೂಚಿಸಿರುವ ಅನ್ವಯ, ಸದರಿ ಅಧಿಕಾರಿಯನ್ನು ನೇಮಕ ಮಾಡಿಕೊಳ್ಳಬೇಕೆ ಅಥವಾ ಬೇಡವೇ ಎಂಬುದರ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳಬೇಕೆಂದು ಸಭೆಯನ್ನು ಕೋರಿದರು. |
| **ತೀರ್ಮಾನ** | ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸಲಾಗಿ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000, ಪ್ರಕರಣ 19(1)ರ ಪ್ರಕಾರ, ಸರ್ಕಾರಕ್ಕೆ ಹಣಕಾಸು ಅಧಿಕಾರಿಯ ನೇಮಕ ಪ್ರಕ್ರಿಯೆಗೆ ಸಿಂಡಿಕೇಟ್‌ನಿಂದ 3 ಹೆಸರುಗಳ ಪಟ್ಟಿಯನ್ನು ಕಳುಹಿಸಿರುವುದಿಲ್ಲ. ಅಲ್ಲದೆ, ಹಣಕಾಸು ಅಧಿಕಾರಿಯ ನೇಮಕಾತಿ ಕುರಿತು ಕುಲಾಧಿಪತಿಯು, ಕುಲಪತಿಯೊಂದಿಗೆ ಸಮಾಲೋಚಿಸಿ, ಹಣಕಾಸು ಅಧಿಕಾರಿಯ ನೇಮಕದ ಬಗ್ಗೆ ನಿರ್ಣಯವನ್ನು ತೆಗೆದುಕೊಂಡಿರುವುದಿಲ್ಲ. ಅಷ್ಟೇ ಅಲ್ಲದೇ 3 ತಿಂಗಳೊಳಗೆ ಆಡಿಟ್‌ನ ಆಕ್ಷೇಪಣೆಗಳಿಗೆ ಉತ್ತರಗಳನ್ನು ಒದಗಿಸಬೇಕಾಗಿರುವ ಅಂಶಗಳೊಂದಿಗೆ ಸುದೀರ್ಘವಾಗಿ ಚರ್ಚಿಸಿದ ಸಭೆಯು ಒಮ್ಮತದಿಂದ ವಿಶ್ವವಿದ್ಯಾನಿಲಯದಲ್ಲಿ ಹಣಕಾಸು ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿರುವ ಪ್ರೊ. ಬಿ. ಮಹದೇವಪ್ಪರವರನ್ನು ಮುಂದುವರೆಸುವುದು ಹಾಗೂ ಶ್ರೀ ಬಿ.ಲಕ್ಷ್ಮೀಕಾಂತ್, ಮುಖ್ಯ ಲೆಕ್ಕಾಧಿಕಾರಿಗಳು, ಮೈಸೂರು ಮಹಾನಗರ ಪಾಲಿಕೆ, ಮೈಸೂರು ಇವರ ನೇಮಕಾತಿಯನ್ನು ಹಿಂಪಡೆಯಲು ಕೋರಿ ಸರ್ಕಾರಕ್ಕೆ ಪತ್ರ ಬರೆಯಲು ಸಿಂಡಿಕೇಟ್ ತೀರ್ಮಾನಿಸಿತು. |
| Spl Syn 2017/7.2 | ಮೈಸೂರು ವಿಶ್ವವಿದ್ಯಾನಿಲಯಕ್ಕೆ ನಿವೃತ್ತ ನ್ಯಾಯಾಧೀಶರೊಬ್ಬರನ್ನು ವಿಶ್ವವಿದ್ಯಾನಿಲಯದ ಕಾನೂನು ಸಲಹೆಗಾರರನ್ನಾಗಿ ಪೂರ್ಣಕಾಲಿಕವಾಗಿ ನೇಮಕ ಮಾಡಿಕೊಳ್ಳುವ ಸಂಬಂಧ |
| **ತೀರ್ಮಾನ** | ಶ್ರೀಮತಿ ವಿ.ಶಾರದ, ವಕೀಲರು, ಮೈಸೂರು ಇವರು ವಕೀಲ ವೃತ್ತಿಯ ಜೊತೆಗೆ ಮೈಸೂರು ವಿಶ್ವವಿದ್ಯನಿಲಯದಲ್ಲಿ ಕಾನೂನು ಸಲಹೆಗಾರರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಕಾರಣ, ಸಕಾಲದಲ್ಲಿ ಸೂಕ್ತ ನಿರ್ಣಯಗಳನ್ನು ಕೈಗೊಳ್ಳಲು ಸಾಧ್ಯವಿಲ್ಲದಿರುವುದರಿಂದ ಮತ್ತು ನ್ಯಾಯಾಲಯಗಳಲ್ಲಿ ವಿಶ್ವವಿದ್ಯಾನಿಲಯದ ಪ್ರಕರಣಗಳು ಹೆಚ್ಚಾಗಿ ಬಾಕಿ ಉಳಿದು ಅವುಗಳಿಗೆ ಖಂಡಿಕೆವಾರು ಉತ್ತರಗಳನ್ನು ತಯಾರುಮಾಡಬೇಕಾಗಿರುವುದರಿಂದ ಹಾಗೂ ಕೆಲವೊಂದು ತುರ್ತು ಆಡಳಿತಾತ್ಮಕ ವಿಷಯಗಳಿಗೆ ಸಂಬಂಧಿಸಿದಂತೆ ಕಾನೂನು ಅಭಿಪ್ರಾಯ ಪಡೆಯುವ ದೃಷ್ಟಿಯಿಂದ, ಸರ್ಕಾರದ ಇತರೆ ಕಾರ್ಯಾಲಯಗಳಲ್ಲಿ ನಿವೃತ್ತ ನ್ಯಾಯಾಧೀಶರೊಬ್ಬರನ್ನು ನೇಮಕ ಮಾಡಿಕೊಂಡಿರುವಂತೆ ನಿವೃತ್ತ ನ್ಯಾಯಾಧೀಶರೊಬ್ಬರನ್ನು ವಿಶ್ವವಿದ್ಯಾನಿಲಯದ ಕಾನೂನು ಸಲಹೆಗಾರರನ್ನಾಗಿ ನೇಮಕ ಮಾಡಿಕೊಳ್ಳುವ ಬಗ್ಗೆ ಪತ್ರಿಕೆಯಲ್ಲಿ ಜಾಹೀರಾತು ನೀಡಿ, ಸ್ವೀಕರಿಸಲಾಗುವ ಅರ್ಜಿಗಳನ್ನು ಪಟ್ಟಿಮಾಡಿ ನ್ಯಾಯಾಧೀಶರನ್ನು ನೇಮಕಮಾಡಿಕೊಳ್ಳುವ ಮತ್ತು ಮಾಸಿಕ ಗೌರವ ಸಂಭಾವನೆಯನ್ನು ನಿಗದಿಪಡಿಸುವ ವಿಷಯವನ್ನು ಮುಂದಿನ ಸಿಂಡಿಕೇಟ್‌ಗೆ ಮಂಡಿಸಲು ಕೂಡಲೇ ಅಗತ್ಯಕ್ರಮವಹಿಸುವಂತೆ ಸಭೆಯು ತೀರ್ಮಾನಿಸಿತು. |

| | |
|---|---|
| Spl Syn 2017/7.3 | ಡಾ. ಬಿ.ನಾಗರಾಜ ಮೂರ್ತಿ, ಸಹ ಪ್ರಾಧ್ಯಾಪಕರು, ಮಹಾರಾಜ ಕಾಲೇಜು, ಮೈಸೂರು ಇವರು ಕಾಲೇಜಿನ ಪ್ರಾಂಶುಪಾಲರಾಗಿದ್ದ ಸಂದರ್ಭದಲ್ಲಿ ಅವರ ವಿರುದ್ಧ ಮಾಡಿರುವ ದೂರಿನ ಸಂಬಂಧ ಹಾಗೂ ಉಚ್ಚನ್ಯಾಯಾಲಯವು ನೀಡಿರುವ ತೀರ್ಪಿನಂತೆ ಕ್ರಮವಹಿಸಲು ಸರ್ಕಾರವು ನಿರ್ದೇಶಿಸಿರುವುದನ್ನು ಕ್ರಮಕೈಗೊಂಡು ಸರ್ಕಾರಕ್ಕೆ ಮಾಹಿತಿಯನ್ನು ಕಳುಹಿಸುವ ಬಗ್ಗೆ. |
| | ಡಾ.ಬಿ.ನಾಗರಾಜ ಮೂರ್ತಿ, ಸಹ ಪ್ರಾಧ್ಯಾಪಕರು, ಮಹಾರಾಜ ಕಾಲೇಜು, ಮೈಸೂರು ಇವರು ಕಾಲೇಜಿನ ಪ್ರಾಂಶುಪಾಲರಾಗಿದ್ದ ಸಂದರ್ಭದಲ್ಲಿ ಅವರ ವಿರುದ್ಧ ಕೆಲವು ದೂರುಗಳು ಬಂದಿದ್ದ ಹಿನ್ನೆಲೆಯಲ್ಲಿ ಪ್ರಾಂಶುಪಾಲರ ಹುದ್ದೆಯಿಂದ ಬಿಡುಗಡೆಗೊಳಿಸಿದುದರ ವಿರುದ್ಧ ಸದರಿಯವರು ಹೂಡಿದ್ದ ಮೊಕದ್ದಮ್ಮೆಯಲ್ಲಿ ಉಚ್ಚ ನ್ಯಾಯಾಲಯವು ದಿನಾಂಕ 03-11-2011 ರಂದು ನೀಡಿರುವ ತೀರ್ಪನ್ನು "Therefore looking to the peculiar facts of the case this court directs university to issue a show-cause notice to the petitioner, and to grant him ample opportunities to clear his name against the allegation and imputation made in the impugned order.<br><br>For the reasons stated above, this court is not inclined to set aside the impugned order and to direct that the petitioner should be reinstated on the post of the Principal of the Maharaja College" ಅವಲೋಕಿಸಿದ ಸಭೆಯು ಡಾ. ಹೆಚ್.ಆರ್.ಮೀನಾ ಕುಮಾರಿಯವರು ದೂರು ಸಲ್ಲಿಸಿದ ತಕ್ಷಣ, ಅದನ್ನು ಮಹಿಳಾ ದೌರ್ಜನ್ಯ ಸಮಿತಿಗೆ ಕಳುಹಿಸಿ ತನಿಖೆ ನಡೆಸದೇ ಏಕಾಏಕೀ ಪ್ರಾಂಶುಪಾಲರ ಹುದ್ದೆಯಿಂದ ತೆಗೆದಿರುವುದು ಕಾನೂನಿನ ಪ್ರಕಾರ ಸರಿಯಾದ ಕ್ರಮವಾಗಿಲ್ಲವೆಂದು ಮತ್ತು ಸರ್ಕಾರದಿಂದ ಬಂದ ಪತ್ರದಂತೆ ಕ್ರಮಕೈಗೊಳ್ಳುವುದು ಅಗತ್ಯವೆಂದು ಸಭೆಯು ಅಭಿಪ್ರಾಯಿಸಿತು. |
| ತೀರ್ಮಾನ: | ಸರ್ಕಾರದ ಪತ್ರ ದಿನಾಂಕ 26-5-2017ರ ನಿರ್ದೇಶನದಂತೆ ಮತ್ತು ಉಚ್ಚನ್ಯಾಯಾಲಯದ ಆದೇಶದಂತೆ ವಿಶ್ವವಿದ್ಯಾನಿಲಯವು ದಿನಾಂಕ 10-1-2017ರಂದು ಜಾರಿ ಮಾಡಿದ್ದ ಕಾರಣ ಕೇಳುವ ನೋಟಿಸ್‌ಗೆ ದಿನಾಂಕ 23-01-2017ರಂದು ಡಾ. ಬಿ.ನಾಗರಾಜಮೂರ್ತಿ ಅವರು ಸಲ್ಲಿಸಿರುವ ಉತ್ತರವನ್ನು ಪರಿಶೀಲಿಸಿ ಸುದೀರ್ಘವಾಗಿ ಚರ್ಚಿಸಿದ ಸಭೆಯು ಮಹಾರಾಜ ಕಾಲೇಜಿನ ಪ್ರಾಂಶುಪಾಲರನ್ನಾಗಿ ಡಾ. ಬಿ.ನಾಗರಾಜಮೂರ್ತಿ, ಸಹ ಪ್ರಾಧ್ಯಾಪಕರು, ಮಹಾರಾಜ ಕಾಲೇಜು, ಮೈಸೂರು ಇವರನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ಪುನಃ ನೇಮಕಮಾಡಲು ಸಿಂಡಿಕೇಟ್ ಅನುಮೋದಿಸಿತು ಹಾಗೂ ಸರ್ಕಾರದ ನಿರ್ದೇಶನದಂತೆ ಕ್ರಮಕೈಗೊಂಡ ಬಗೆಗಿನ ವರದಿಯನ್ನು ಸರ್ಕಾರಕ್ಕೆ ಕಳುಹಿಸಿಕೊಡಲು ತೀರ್ಮಾನಿಸಿತು. |
| Spl Syn 2017/7.4 | ಡಾ. ಎಸ್.ಆನಂದ, ಪ್ರಾಧ್ಯಾಪಕರು ಮತ್ತು ಅಧ್ಯಕ್ಷರು, ರಸಾಯನಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ವಿದೇಶಗಳಿಗೆ ತೆರಳಲು ಅನುಮತಿ ನೀಡುವಂತೆ ಕೋರಿರುವ ಬಗ್ಗೆ. |
| ತೀರ್ಮಾನ: | ಅನಿವಾರ್ಯ ಕಾರಣಗಳಿಂದಾಗಿ ವಿದೇಶಿ ಭೇಟಿಯ ದಿನಾಂಕವನ್ನು ಮುಂದೂಡಿರುವ ಬಗೆಗೆ ಡಾ. ಎಸ್.ಆನಂದ, ಪ್ರಾಧ್ಯಾಪಕರು ಮತ್ತು ಅಧ್ಯಕ್ಷರು, ರಸಾಯನಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ಸಲ್ಲಿಸಿರುವ ಮನವಿಯನ್ನು ಪರಿಗಣಿಸಿ ವಿದೇಶ ಭೇಟಿಗೆ ಅನುಮತಿ ಕೋರಿರುವ ವಿಷಯವನ್ನು ಕೈಬಿಡಲು ಸಿಂಡಿಕೇಟ್ ತೀರ್ಮಾನಿಸಿತು. |
| Spl Syn 2017/7.5 | ಡಾ. ಪುಲಿಕೇಶಿ ವೈ. ಶೆಟ್ಟಪ್ಪನವರ್, ಉಪ ನಿರ್ದೇಶಕರು, ದೈಹಿಕ ಶಿಕ್ಷಣ ಸಂಸ್ಥೆ, ಮೈಸೂರು ಇವರು ತಮ್ಮನ್ನು ನಿರ್ದೇಶಖರನ್ನಾಗಿ ನೇಮಿಸುವಂತೆ ಮನವಿ ಸಲ್ಲಿಸಿರುವ ಬಗ್ಗೆ. |
| ತೀರ್ಮಾನ: | ಸುದೀರ್ಘ ಚರ್ಚೆಯ ನಂತರ, ಮೈಸೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗದಲ್ಲಿ ಖಾಲಿ ಇರುವ ಒಂದು ನಿರ್ದೇಶಕರ ಹುದ್ದೆಗೆ ಸಂದರ್ಶನೇರ್ಪಡಿಸಿ ನೇರ ನೇಮಕಾತಿಯ ಮೂಲಕ ಆಯ್ಕೆಗೊಳ್ಳಬೇಕಿದ್ದು, ಸರದಿಯ ಮೇಲೆ ನಿರ್ದೇಶಕರ ಹುದ್ದೆಗೆ ನೇಮಿಸಲು |

| | |
|---|---|
| | ಅವಕಾಶ ವಿರುವುದಿಲ್ಲ. ಆದ್ದರಿಂದ ಈಗಾಗಲೇ ನಿರ್ದೇಶಕರ ಹುದ್ದೆಗೆ ಭರ್ತಿ ಮಾಡುವ ಸಲುವಾಗಿ ಪ್ರಕಟಣೆ ಹೊರಡಿಸಿ, ಅರ್ಜಿಗಳನ್ನು ಸ್ವೀಕರಿಸಿರುವುದರಿಂದ ನಿಯಮಾನುಸಾರ ನೇಮಕಾತಿ ಪ್ರಕ್ರಿಯೆಗೆ ಚಾಲನೆ ನೀಡಲು ಸಿಂಡಿಕೇಟ್ ತೀರ್ಮಾನಿಸಿತ್ತಲ್ಲದೇ, ಅದುವರೆವಿಗೂ ಪ್ರಸ್ತುತ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿರುವವರನ್ನು ಮುಂದುವರೆಸಲು ಸಿಂಡಿಕೇಟ್ ತೀರ್ಮಾನಿಸಿತು. |
| Spl Syn 2017/7.6 | ಸ್ನಾತಕೋತ್ತರ ಕೇಂದ್ರದಲ್ಲಿರುವ ಬೋಧಕ ವರ್ಗದವರನ್ನು ಮಾನಸಗಂಗೋತ್ರಿಯಲ್ಲಿರುವ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ಪರಿಗಣಿಸುವಂತೆ ಹಾಸನ ಪಿ.ಜಿ.ಕೇಂದ್ರದ ನಿರ್ದೇಶಕರು ಮನವಿ ಸಲ್ಲಿಸಿರುವ ಬಗ್ಗೆ. |
| ತೀರ್ಮಾನ: | ವಿಶ್ವವಿದ್ಯಾನಿಲಯದಲ್ಲಿ ಸೇವೆ ಸಲ್ಲಿಸುತ್ತಿರುವ ಎಲ್ಲಾ ಅಧ್ಯಾಪಕರುಗಳ/ಅಧ್ಯಾಪಕೇತರ ಉದ್ಯೋಗಿಗಳ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಿ, ಯಾವುದಾದರೂ ಆಕ್ಷೇಪಣೆಗಳಿದ್ದಲ್ಲಿ ಸುತ್ತೋಲೆಯ ಮೂಲಕ ಆಹ್ವಾನಿಸಿ, ಹಿರಿತನ ಆಧಾರದ ಮೇಲೆ ಎಲ್ಲಾ ವಿಭಾಗಗಳು/ ಕೇಂದ್ರಗಳಿಗೆ ಅಧ್ಯಕ್ಷ/ನಿದೇಶಕರ ಹುದ್ದೆಗೆ ನಿಯಮಾನುಸಾರ ನೇಮಕ ಮಾಡಲು ಸಿಂಡಿಕೇಟ್ ತೀರ್ಮಾನಿಸಿತು. |

**ಇತರೆ ವಿಷಯಗಳು:**

1. ಕೆ.ಸೆಟ್ ಕೇಂದ್ರದಲ್ಲಿನ ಕಾರ್ಯವೈಖರಿಯ ಬಗ್ಗೆ ಹಲವು ಆರೋಪಗಳಿರುವ ಹಿನ್ನೆಲೆಯಲ್ಲಿ ಒಂದು ಪ್ರಾಥಮಿಕ ಆಂತರೀಕ ವರದಿಯನ್ನು ಸರ್ಕಾರಕ್ಕೆ ಕಳುಹಿಸಲು ಸಿಂಡಿಕೇಟ್ ತೀರ್ಮಾನಿಸಿತು.
2. ದಿನಾಂಕ 22-06-2017 ರಂದು ನಡೆದ ಸಿಂಡಿಕೇಟ್ ಸಭೆಯ ಕಾರ್ಯಸೂಚಿ ಸಂಖ್ಯೆ. 6.45 ರಲ್ಲಿ ವಿಶ್ವವಿದ್ಯಾನಿಲಯದ ಆಡಳಿತದಲ್ಲಿ ಸೇವೆ ಸಲ್ಲಿಸುತ್ತಿರುವ ಅಧ್ಯಾಪಕರ ಸೇವಾ ಅವಧಿ 3 ವರ್ಷ ಮುಗಿದಿರುವ ಕೆಲವರ ಹೆಸರುಗಳು ಮಾತ್ರ ಇರುವುದರಿಂದ ವಿವಿಧ ವಿಭಾಗ/ ಕೇಂದ್ರಗಳಲ್ಲಿ ಸೇವೆ ಸಲ್ಲಿಸುತ್ತಿದ್ದು ಬಿಟ್ಟುಹೋಗಿರುವವರ ಎಲ್ಲಾ ಹೆಸರುಗಳನ್ನು ಪಟ್ಟಿ ಮಾಡಿ, ಅಂತಹವರನ್ನು ಅವರವರುಗಳ ಮಾತೃ ಇಲಾಖೆಗೆ ವರ್ಗಾಯಿಸಲು ತಿದ್ದುಪಡಿ ಮಾಡಿ ಕಳುಹಿಸಿ ಕೊಡಲು ಸಿಂಡಿಕೇಟ್ ತೀರ್ಮಾನಿಸಿತು.
3. ಹಲವಾರು ವರ್ಷಗಳಿಂದ ಬೋಧಕ ವರ್ಗದವರಿಗೆ **ವೃತ್ತಿ ಪದೋನ್ನತಿ ಯೋಜನೆಯಡಿ** (CAS Scheme) ಪದೋನ್ನತಿ ನೀಡದೇ ಇರುವುದರಿಂದ ಹಾಗೂ ಕುಲಾಧಿಪತಿಗಳಿಂದ ನಾಮನಿರ್ದೇಶಿತಗೊಂಡಿದ್ದ ಪಟ್ಟಿಯು 3 ವರ್ಷಗಳಿಗಿಂತ ಜಾಸ್ತಿಯಾಗಿರುವುದರಿಂದ ತಕ್ಷಣವೇ ರಾಜ್ಯದ ಬೇರೆ ವಿಶ್ವವಿದ್ಯಾನಿಲಯಗಳಲ್ಲಿ ಕುಲಾಧಿಪತಿಗಳಿಂದ ನಾಮಾಂಕಿತಗೊಂಡಿರುವ ವಿಷಯ ಪರಿಣಿತರ ಹೆಸರುಗಳನ್ನು ಪಡೆದು ಆಯ್ಕೆಸಮಿತಿಯನ್ನು ರಚಿಸಿಕೊಳ್ಳುವುದರ ಜೊತೆಗೆ ಬೋಧಕ ವರ್ಗದವರಿಗೆ ಪದೋನ್ನತಿ ನೀಡುವುದರ ಬಗ್ಗೆ ಎಲ್ಲಾ ಪ್ರಕ್ರಿಯೆಗಳನ್ನು ಕೂಡಲೇ ಕೈಗೊಳ್ಳಲು ಸಿಂಡಿಕೇಟ್ ತೀರ್ಮಾನಿಸಿತು.

ಕೊನೆಯಲ್ಲಿ ಮಾನ್ಯ ಕುಲಪತಿಗಳು ಮಾತನಾಡುತ್ತಾ, ಕುಲಪತಿಗಳ ಹುದ್ದೆಗೆ ಆಯ್ಕೆ ಸಮಿತಿ ಸಭೆಯು ನಡೆದಿದ್ದು, ಇಷ್ಟರಲ್ಲೇ ಕುಲಪತಿಯಾಗಿ ಹೊಸಬರು ನೇಮಕಗೊಳ್ಳಲಿದ್ದಾರೆಂಬ ವಿಷಯವನ್ನು ಸಭೆಯ ಗಮನಕ್ಕೆ ತಂದರು, ಹಾಗೂ ವಿಶೇಷ ಸಿಂಡಿಕೇಟ್ ಸಭೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಉಪಯುಕ್ತ ಸಲಹೆ ಸೂಚನೆಗಳನ್ನು ನೀಡಿ ತೀರ್ಮಾನ ಕೈಗೊಳ್ಳಲು ಸಹಕರಿಸಿದ ಎಲ್ಲಾ ಸದಸ್ಯರುಗಳಿಗೂ ವಂದನೆ ಸಲ್ಲಿಸಿ, ನಂತರ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ಕುಲಸಚಿವ ಮತ್ತು ಸದಸ್ಯ ಕಾರ್ಯದರ್ಶಿ** **ಕುಲಪತಿ ಮತ್ತು ಅಧ್ಯಕ್ಷರು**

# ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ದಿನಾಂಕ 03-08-2017ರಂದು ಪೂರ್ವಾಹ್ನ 11-00 ಗಂಟೆಗೆ ಜರುಗಿದ ಸಿಂಡಿಕೇಟಿನ ಐದನೇ ಸಾಮಾನ್ಯ ಸಭೆಯ ನಡೆವಳಿಗಳು.

**ಹಾಜರಿದ್ದ ಸದಸ್ಯರು:**

| | | | |
|---|---|---|---|
| 1. | ಪ್ರೊ. ದಯಾನಂದ ಮಾನೆ | – | ಕುಲಪತಿಗಳು(ಪ್ರಭಾರ) ಹಾಗೂ ಅಧ್ಯಕ್ಷರು |
| 2. | ಡಾ. ನಿಂಗಮ್ಮ ಸಿ.ಬೆಟ್ಸೂರ್ | – | ಸದಸ್ಯರು |
| 3. | ಶ್ರೀ ಪುಷ್ಪಕುಮಾರ್ ಎಂ.ವಿ. | – | ಸದಸ್ಯರು |
| 4. | ಡಾ. ಎಂ.ಸಿ.ನಟರಾಜ | – | ಸದಸ್ಯರು |
| 5. | ಶ್ರೀ ಕೆ.ಎಂ.ಕಾಳೇಗೌಡ | – | ಸದಸ್ಯರು |
| 6. | ಪ್ರೊ. ಡಿ. ನಂಜುಂಡಯ್ಯ | – | ಸದಸ್ಯರು |
| 7. | ಶ್ರೀ ಮಹಮದ್‌ಅಬ್ದುಸ್ಸಲಾಂ | – | ಸದಸ್ಯರು |
| 8. | ಶ್ರೀ ಕುಮಾರ್ | – | ಸದಸ್ಯರು |
| 9. | ಶ್ರೀಮತಿ ಎಂ.ಎನ್.ಪೊನ್ನಮ್ಮ | – | ಸದಸ್ಯರು |
| 10. | ಶ್ರೀಮತಿ ಶೃತಿತರುಣ್‌ಗಿರಿ | – | ಸದಸ್ಯರು |
| 11. | ಶ್ರೀ ಎಂ.ಎಸ್.ಎಸ್. ಕುಮಾರ್ | – | ಸದಸ್ಯರು |
| 12. | ಪ್ರೊ. ಜೆ. ಸೋಮಶೇಖರ್ | – | ಸದಸ್ಯರು |
| | ಕುಲಸಚಿವ(ಪರೀಕ್ಷಾಂಗ) | – | ಸದಸ್ಯರು |
| 13. | ಶ್ರೀಮತಿ ಡಿ.ಭಾರತಿ, ಕೆ.ಎ.ಎಸ್ | – | ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು |

**ಹಾಜರಾಗದ ಸದಸ್ಯರು:**

1. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
3. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
4. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
5. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
6. ಶ್ರೀ ಲಯನ್ ಹೆಚ್. ರಮೇಶ್, ಸಿಂಡಿಕೇಟ್ ಸದಸ್ಯರು.

ಮೊದಲಿಗೆ ಸನ್ಮಾನ್ಯ ಕುಲಪತಿಗಳು ಸಿಂಡಿಕೇಟ್‌ನ ವಿಶೇಷ ಸಭೆಗೆ ಆಗಮಿಸಿದ್ದ ಎಲ್ಲಾ ಸದಸ್ಯರುಗಳನ್ನು ಆಹ್ವಾನಿಸುತ್ತಾ ಹಿರಿಯ ರಾಜಕಾರಣಿ, ರಾಜಕೀಯ ಮುತ್ಸದ್ದಿ, ಕರ್ನಾಟಕ ರಾಜ್ಯ ಸರ್ಕಾರದ ಮಾಜಿ ಮುಖ್ಯ ಮಂತ್ರಿಗಳು ಆಗಿದ್ದ ಶ್ರೀಯುತ ಧರ್ಮಸಿಂಗ್‌ರವರು ಹಾಗೂ ಇಸ್ರೋದ ಮಾಜಿ ಅಧ್ಯಕ್ಷರು, ಪ್ರಖ್ಯಾತ ವಿಜ್ಞಾನಿಗಳಾದ ಪ್ರೊ.ಯು.ಆರ್.ರಾವ್‌ರವರು ನಿಧನರಾದ ವಿಷಯವನ್ನು ಸಿಂಡಿಕೇಟ್ ಗಮನಕ್ಕೆ ತಂದು ಅವರ ಗೌರವಾರ್ಥ ಸಭೆಯಲ್ಲಿ ಎರಡು ನಿಮಿಷಗಳ ಮೌನ ಆಚರಣೆಯೊಂದಿಗೆ ಮೃತರ ಆತ್ಮಕ್ಕೆ ಶಾಂತಿ ಕೋರಲಾಯಿತು.

**ದಿನಾಂಕ 22-6-2017ರಂದು ನಡೆದ ಸಿಂಡಿಕೇಟ್ ಸಭೆಯು ಇತರೆ ವಿಷಯಗಳಡಿ** ಈ ಹಿಂದೆ ಕುಲಸಚಿವರಾಗಿದ್ದ ಡಾ.ಬಸವರಾಜು ಇವರ ಅನುಪಸ್ಥಿತಿಯ ಅವಧಿಯಲ್ಲಿ ಕುಲಸಚಿವರು (ಪರೀಕ್ಷಾಂಗ) ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಡಾ. ಆರ್.ರಾಜಣ್ಣ ಇವರು ಪ್ರಭಾರ ಕುಲಸಚಿವರಾಗಿ

ವಿಶ್ವವಿದ್ಯಾನಿಲಯದಲ್ಲಿ ನಡೆದ ಭಾರತೀಯ ವಿಜ್ಞಾನ ಕಾಂಗ್ರೆಸ್ ಕಾರ್ಯಕ್ರಮಕ್ಕೆ ಹೆಚ್ಚುವರಿಯಾಗಿ ರೂ. 9,15,45,000/-ಗಳಿಗೆ ಸಹಿ ಮಾಡಿ, ಆದೇಶ ನೀಡಿರುವ ಬಗ್ಗೆ ಚರ್ಚಿಸಿ, ವಿಶ್ವವಿದ್ಯಾನಿಲಯವು ಏಳು ದಿವಸಗಳೊಳಗಾಗಿ ಉತ್ತರವನ್ನು ನೀಡುವಂತೆ ಪ್ರೊ. ಆರ್.ರಾಜಣ್ಣರವರಿಗೆ ದಿನಾಂಕ 24-07-2017ರಂದು ಷೋಕಾಸ್ ನೋಟೀಸ್ ಜಾರಿ ಮಾಡಿತ್ತು, ಅದರಂತೆ ಪ್ರೊ.ಆರ್.ರಾಜಣ್ಣರವರು ದಿನಾಂಕ 31-07-2017ರಂದು ಕುಲಸಚಿವರಿಗೆ ಸಲ್ಲಿಸಿರುವ ಪತ್ರದಲ್ಲಿ ವಿಜ್ಞಾನ ಕಾಂಗ್ರೆಸ್ ಕಾರ್ಯಕ್ರಮಕ್ಕೆ ಹೆಚ್ಚುವರಿಯಾಗಿ ಹಣ ಬಿಡುಗಡೆ ಮಾಡುವ ಬಗ್ಗೆ ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆ ಪಡೆದಿದ್ದು, ಕುಲಪತಿಗಳು ಹಾಗೂ ಕುಲಸಚಿವರಾಗಿದ್ದ ಡಾ. ಬಸವರಾಜುರವರು ಸಂಬಂಧಪಟ್ಟ ಕಡತಕ್ಕೆ ಸಹಿ ಮಾಡಿರುವುದರಿಂದ ಅಂತಿಮ ಆದೇಶ ಪತ್ರಕ್ಕೆ (ಶುದ್ಧ ಪ್ರತಿ) ಸಹಿ ಮಾಡಬೇಕಾಯಿತು ಎಂದು ತಿಳಿಸಿರುವುದನ್ನು ಸಭೆಯು ಗಮನಿಸಿತ್ತಲ್ಲದೇ ಪ್ರೊ. ರಾಜಣ್ಣ.ಆರ್ ಅವರ ಹೇಳಿಕೆಯು ಅಸಮಂಜಸವಾಗಿದೆಯೆಂದು ಪರಿಗಣಿಸಿ, ಈ 2 ದಿನಗಳ ಗೈರು ಹಾಜರಿಯಲ್ಲಿ ತುರ್ತಾಗಿ ಇಷ್ಟು ಬೃಹತ್ ಮೊತ್ತದ ಹಣ ಮಂಜೂರು ಮಾಡುವ ಅವಶ್ಯಕತೆ ಏನಿತ್ತು ಎಂಬುದರ ಬಗ್ಗೆ ಅನುಮಾನಗಳು ಇರುವುದರಿಂದ ಸದರಿ ಪ್ರಕರಣದ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿ ಸರ್ಕಾರದ ನಿರ್ದೇಶನ ಕೋರಲು ಸಿಂಡಿಕೇಟ್ ತೀರ್ಮಾನಿಸಿತು.

ನಂತರ ಕಾರ್ಯಸೂಚಿಯನ್ನು ಕೈಗೆತ್ತಿಗೊಳ್ಳಲಾಯಿತು.

| ವಿಷಯ ಸಂಖ್ಯೆ | ವಿಷಯ ಸಂಕ್ಷಿಪ್ತವಾಗಿ |
|---|---|
| I | ದಿನಾಂಕ 25-03-2017ರಂದು ನಡೆದ ಸಿಂಡಿಕೇಟಿನ ಮೂರನೇ ಸಾಮಾನ್ಯ ಸಭೆಯ ನಡಾವಳಿಗಳನ್ನು ದೃಢೀಕರಿಸುವ ಬಗ್ಗೆ. |
| ತೀರ್ಮಾನ : | 2017/3.24ರ ವಿಷಯಕ್ಕೆ ಸಂಬಂಧಿಸಿದಂತೆ ಸಿಂಡಿಕೇಟ್ ಈ ಹಿಂದಿನ ತೀರ್ಮಾನವನ್ನು ಮತ್ತೊಮ್ಮೆ **ಪರಿಶೀಲಿಸಿ ಕೆಳಗಿನತಿದ್ದುಪಡಿಯೊಂದಿಗೆ ತೀರ್ಮಾನವನ್ನು ದಾಖಲಿಸಿ**ದಿನಾಂಕ 25-03-2017ರಂದು ನಡೆದ ಸಿಂಡಿಕೇಟಿನ ಮೂರನೇ ಸಾಮಾನ್ಯ ಸಭೆಯ ನಡಾವಳಿಗಳನ್ನು ದೃಢೀಕರಿಸಲಾಯಿತು.<br>**ಡಾ. ಜಿ.ವೆಂಕಟೇಶ್ ಕುಮಾರ್, ಪ್ರಾಧ್ಯಾಪಕರು, ಮನೋವಿಜ್ಞಾನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಸಲ್ಲಿಸಿರುವ ಉತ್ತರವನ್ನು ಪರಿಶೀಲಿಸಿದ ಸಿಂಡಿಕೇಟ್ ಸದರಿಯವರ ವಿರುದ್ಧ ಸಲ್ಲಿಸಿರುವ ದೂರುಗಳು ನಿರಾಧಾರವಾಗಿರು-ವುದರಿಂದ ಮತ್ತು ಪ್ರಾಧ್ಯಾಪಕರು ನೀಡಿರುವ ಉತ್ತರಗಳನ್ನು ಸಮಂಜಸವೆಂದು ಪರಿಗಣಿಸಿತು ಮತ್ತು ಈ ಪ್ರಕರಣವನ್ನು ಇಲ್ಲಿಗೆ ಮುಕ್ತಾಯಗೊಳಿಸಿ ಮುಂದೆ ಇಂತಹ ಆರೋಪಗಳಿಗೆ ಆಸ್ಪದ ನೀಡದಂತೆ ಡಾ. ಜಿ.ವೆಂಕಟೇಶ್‌ಕುಮಾರ್‌ರವರಿಗೆ ತಿಳಿಸಲು ಹಾಗೂ ಅವರನ್ನು ವಿಭಾಗದ ಅಧ್ಯಕ್ಷರನ್ನಾಗಿ ಮರುನೇಮಕ ಮಾಡಲು ಸಿಂಡಿಕೇಟ್ ತೀರ್ಮಾನಿಸಿತು.** |
| II | ದಿನಾಂಕ 25-03-2017ರಂದು ನಡೆದ ಸಿಂಡಿಕೇಟಿನ ಮೂರನೇ ಸಾಮಾನ್ಯ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನಗಳ ಬಗ್ಗೆ ಕ್ರಮ ಕೈಗೊಂಡ ವರದಿ. |
| ತೀರ್ಮಾನ : | ಗಮನಿಸಲಾಯಿತು. |
| III | ದಿನಾಂಕ 25-05-2017ರಂದು ನಡೆದ ಸಿಂಡಿಕೇಟಿನ ಮೂರನೇ ಸಾಮಾನ್ಯ ಸಭೆಯ ನಡಾವಳಿಗಳನ್ನು ದೃಢೀಕರಿಸುವ ಬಗ್ಗೆ |
| ತೀರ್ಮಾನ : | ದೃಢೀಕರಿಸಲಾಯಿತು. |
| IV | ದಿನಾಂಕ 25-05-2017ರಂದು ನಡೆದ ಸಿಂಡಿಕೇಟಿನ ವಿಶೇಷ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನಗಳ ಬಗ್ಗೆ ಕ್ರಮ ಕೈಗೊಂಡ ವರದಿ. |
| ತೀರ್ಮಾನ : | ಗಮನಿಸಲಾಯಿತು. |

| | |
|---|---|
| **V** | ದಿನಾಂಕ 02–06–2017ರಂದು ನಡೆದ ಸಿಂಡಿಕೇಟಿನ ವಿಶೇಷ ಸಭೆಯಲ್ಲಿ ತೆಗೆದುಕೊಂಡನಡಾವಳಿಗಳನ್ನು ದೃಢೀಕರಿಸುವ ಬಗ್ಗೆ. |
| ತೀರ್ಮಾನ : | ದೃಢೀಕರಿಸಲಾಯಿತು. |
| **VI** | ದಿನಾಂಕ 02–06–2017ರಂದು ನಡೆದ ಸಿಂಡಿಕೇಟಿನ ವಿಶೇಷ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನಗಳ ಬಗ್ಗೆ ಕ್ರಮಕೈಗೊಂಡ ವರದಿ. |
| ತೀರ್ಮಾನ : | ಗಮನಿಸಲಾಯಿತು. |
| **VII** | ದಿನಾಂಕ 22–06–2017ರಂದು ನಡೆದ ಸಿಂಡಿಕೇಟಿನ ನಾಲ್ಕನೇ ಸಾಮಾನ್ಯ ಸಭೆಯ ನಡಾವಳಿಗಳನ್ನು ದೃಢೀಕರಿಸುವ ಬಗ್ಗೆ. |
| ತೀರ್ಮಾನ : | 2017/6.9ರ ಮತ್ತು 2017/6.12ರ ವಿಷಯಗಳಿಗೆ ಸಂಬಂಧಿಸಿದಂತೆ ಕುಲಸಚಿವ (ಪರೀಕ್ಷಾಂಗ) ಅವರು ದಿನಾಂಕ 14–07–2017ರಂದು ಪತ್ರ ಬರೆದು ಆಕ್ಷೇಪಣೆ ಸಲ್ಲಿಸಿರುವುದನ್ನು ಗಮನಿಸಿದ ಸಿಂಡಿಕೇಟ್ ಈ ಕೆಳಗಿನ ತಿದ್ದುಪಡಿಯೊಂದಿಗೆ ತೀರ್ಮಾನವನ್ನು ದಾಖಲಿಸಿ ದಿನಾಂಕ 22–06–2017ರಂದು ನಡೆದ ಸಿಂಡಿಕೇಟಿನ ನಾಲ್ಕನೇ ಸಾಮಾನ್ಯ ಸಭೆಯ ನಡಾವಳಿಗಳನ್ನು ದೃಢೀಕರಿಸಲಾಯಿತು.<br><br>2017/6.9 **ಕು.ರವೀನಾ ಆರ್ ವಿದ್ಯಾರ್ಥಿಯ ಮೊದಲನೇ ಮೌಲ್ಯಮಾಪನ ಅಂಕಗಳನ್ನು (09) ಹೊರತುಪಡಿಸಿ ಉಳಿದ ಎರಡು ಮರು ಮೌಲ್ಯಮಾಪನಗಳ ಅಂಕಗಳ ಸರಾಸರಿ ಅಂಕಗಳನ್ನು (30+19=49, 49/2=24.5 ಅಥವಾ 25) ಪರಿಗಣಿಸಿ ಫಲಿತಾಂಶ ಪ್ರಕಟಿಸುವಂತೆ ಸಿಂಡಿಕೇಟ್ ತೀರ್ಮಾನಿಸಿತು.**<br><br>2017/6.12 **ಹಾಲಿ ಪರೀಕ್ಷಾ ಕಾರ್ಯ ಚಟುವಟಿಕೆಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ನಿರ್ವಹಿಸುತ್ತಿರುವ ಮೆ: ಇನ್ಸ್‌ಟ್ಯೂಟ್ ಆಫ್ ಇಂಜಿನಿಯರಿಂಗ್ ಅಂಡ್ ಮ್ಯಾನೇಜ್‌ಮೆಂಟ್ ಥಾಣೆ, ಮಹಾರಾಷ್ಟ್ರ ಇವರ 3 ವರ್ಷಗಳ ಗುತ್ತಿಗೆ ಅವಧಿಯು ಮೇ/ಜೂನ್ 2017ರ ಪರೀಕ್ಷಾ ಕಾರ್ಯ ಚಟುವಟಿಕೆಗಳೊಂದಿಗೆ ಮುಕ್ತಾಯವಾಗಲಿರುವ ಹಿನ್ನೆಲೆಯಲ್ಲಿ ನವೆಂಬರ್/ಡಿಸೆಂಬರ್ 2017 ರಿಂದ ಜಾರಿಗೆ ಬಂದಂತೆ (ಟೆಂಡರ್ ಪ್ರಕಟಣೆಯ ಭಾಗ–2 ರಲ್ಲಿ ನಮೂದಿಸಿರುವಂತೆ ನವೆಂಬರ್/ಡಿಸೆಂಬರ್ 2017 ರಿಂದ ಮೇ/ ಜೂನ್ 2020ರವರೆಗಿನ ಪರೀಕ್ಷೆಗಳು (6 rounds of Examinations)ಪರೀಕ್ಷಾ ಕಾರ್ಯಗಳನ್ನು ನಿರ್ವಹಣೆ ಮಾಡಲು ಇ–ಪೋರ್ಟಲ್ ಮೂಲಕ ಅರ್ಹ ಬಿಡ್‌ದಾರರಿಂದ ಬೂಟ್ ಮಾದರಿ ಯಲ್ಲಿ ಸಾಫ್ಟ್‌ವೇರ್ ಅಭಿವೃದ್ದಿ ಪಡಿಸಿ, ವಿಶ್ವವಿದ್ಯಾನಿಲಯದ ಉದ್ಯೋಗಿಗಳಿಗೆ ತರಬೇತಿ ನೀಡಿ ಅವಧಿ ಮುಗಿದ ನಂತರ ಅಭಿವೃದ್ದಿಪಡಿಸಿದ ಸಾಫ್ಟ್‌ವೇರ್ ಅನ್ನು ಯಥಾವತ್ತಾಗಿ ವಿಶ್ವವಿದ್ಯಾ ನಿಲಯಕ್ಕೆ ವರ್ಗಾಹಿಸಬೇಕೆನ್ನುವ ಷರತ್ತಿನೊಡನೆ ಟೆಂಡರ್ ಆಹ್ವಾನಿಸಲು ಸಿಂಡಿಕೇಟ್ ಒಮ್ಮತದಿಂದ ತೀರ್ಮಾನಿಸಿತು.** |
| **VIII** | ದಿನಾಂಕ 22–06–2017ರಂದು ನಡೆದ ಸಿಂಡಿಕೇಟಿನ ನಾಲ್ಕನೇ ಸಾಮಾನ್ಯ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನಗಳ ಬಗ್ಗೆ ಕ್ರಮಕೈಗೊಂಡ ವರದಿ. |
| ತೀರ್ಮಾನ : | ಗಮನಿಸಲಾಯಿತು. |
| **IX** | ದಿನಾಂಕ 07–07–2017ರಂದು ನಡೆದ ಸಿಂಡಿಕೇಟಿನ ವಿಶೇಷ ಸಭೆಯ ನಡಾವಳಿಗಳನ್ನು ದೃಢೀಕರಿಸುವ ಬಗ್ಗೆ. |
| ತೀರ್ಮಾನ : | ದೃಢೀಕರಿಸಲಾಯಿತು. |
| **X** | ದಿನಾಂಕ 07–07–2017ರಂದು ನಡೆದ ಸಿಂಡಿಕೇಟಿನ ವಿಶೇಷ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನಗಳ ಬಗ್ಗೆ ಕ್ರಮಕೈಗೊಂಡ ವರದಿ. |
| ತೀರ್ಮಾನ : | ಗಮನಿಸಲಾಯಿತು. |

| | |
|---|---|
| **2017/8.1** | ಪ್ರೊ. ಎನ್.ಬಿ. ರಾಮಚಂದ್ರ ಅವರನ್ನು ಜೆನೆಟಿಕ್ಸ್ ಅಂಡ್ ಜೀನೋಮಿಕ್ಸ್ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನಾಗಿ ನೇಮಿಸಿರುವ ಬಗ್ಗೆ – ಅನುಸಮರ್ಥನೆಗಾಗಿ |
| **ತೀರ್ಮಾನ:** | ಜೆನೆಟಿಕ್ಸ್ ಅಂಡ್ ಜೀನೋಮಿಕ್ಸ್ ವಿಷಯವನ್ನು ಬೋಧಿಸುವ ಖಾಯಂ ಅಧ್ಯಾಪಕರು ಪ್ರೊ.ಎನ್.ಬಿ.ರಾಮಚಂದ್ರ ಅವರು ಒಬ್ಬರೇ ಆಗಿರುವುದರಿಂದ, ವಿಭಾಗದಲ್ಲಿನ ದೈನಂದಿನ ಕಾರ್ಯಚಟುವಟಿಕೆಗಳು ಸುಲಲಿತವಾಗಿ ನಡೆಯಲು ಮತ್ತು ಶೈಕ್ಷಣಿಕ ಹಾಗೂ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಜೆನೆಟಿಕ್ಸ್ ಅಂಡ್ ಜೀನೋಮಿಕ್ಸ್ ಅಧ್ಯಯನ ವಿಭಾಗಕ್ಕೆ ಪ್ರೊ.ಎನ್.ಬಿ.ರಾಮಚಂದ್ರ ಅವರನ್ನು ಮತ್ತೊಂದು ಅವಧಿಗೆ ವಿಭಾಗದ ಅಧ್ಯಕ್ಷರನ್ನಾಗಿ ನೇಮಿಸಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ಸಿಂಡಿಕೇಟ್ ಅನುಸಮರ್ಥಿಸಿತು. |
| **2017/8.2** | ಪ್ರೊ. ಎಸ್. ಶಶಿಕಾಂತ್ ಅವರನ್ನು ಆರ್ಗ್ಯಾನಿಕ್ ಕೆಮಿಸ್ಟ್ರಿ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ನೇಮಿಸಿರುವ ಬಗ್ಗೆ – ಅನುಸಮರ್ಥನೆಗಾಗಿ. |
| **ತೀರ್ಮಾನ:** | ಆರ್ಗ್ಯಾನಿಕ್ ಕೆಮಿಸ್ಟ್ರಿ ಬೋಧಿಸುವ ಖಾಯಂ ಅಧ್ಯಾಪಕರು ವಿಭಾಗದಲ್ಲಿ ಪ್ರೊ.ಎಸ್.ಶಶಿಕಾಂತ್ ಅವರು ಒಬ್ಬರೇ ಆಗಿರುವುದರಿಂದ, ವಿಭಾಗದಲ್ಲಿನ ದೈನಂದಿನ ಕಾರ್ಯಚಟುವಟಿಕೆಗಳು ಸುಲಲಿತವಾಗಿ ನಡೆಯಲು ಮತ್ತು ಶೈಕ್ಷಣಿಕ ಹಾಗೂ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಆರ್ಗ್ಯಾನಿಕ್ ಕೆಮಿಸ್ಟ್ರಿ ಅಧ್ಯಯನ ವಿಭಾಗಕ್ಕೆ ಪ್ರೊ.ಎಸ್.ಶಶಿಕಾಂತ್ ಅವರನ್ನು ಮತ್ತೊಂದು ಅವಧಿಗೆ ವಿಭಾಗದ ಅಧ್ಯಕ್ಷರನ್ನಾಗಿ ನೇಮಿಸಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ಸಿಂಡಿಕೇಟ್ ಅನುಸಮರ್ಥಿಸಿತು. |
| **2017/8.3** | ದಿನಾಂಕ 20-06-2017 ಮತ್ತು 01-07-2017ರಂದು ನಡೆದ ವಿದ್ಯಾರ್ಥಿ ಕ್ಷೇಮಪಾಲನಾ ಕಛೇರಿಗೆ ಸಂಬಂಧಿಸಿದ 2017–2018ನೇ ಶೈಕ್ಷಣಿಕ ಸಾಲಿನ ವಿದ್ಯಾರ್ಥಿನಿಲಯಗಳ ಆಡಳಿತ, ನಿರ್ವಹಣೆ ಹಾಗೂ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ಸಲಹಾ ಸಮಿತಿ ಸಭೆಯ ಶಿಫಾರಸ್ಸಿನ ನಡಾವಳಿಗಳಿಗೆ ಸಿಂಡಿಕೇಟ್ ಸಭೆಯ ಅನುಮೋದನೆ ಪಡೆಯುವುದರ ಬಗ್ಗೆ– ಅನುಸಮರ್ಥನೆಗಾಗಿ |
| **ತೀರ್ಮಾನ:** | ಸ್ನಾತಕಪೂರ್ವ/ಸ್ನಾತಕೋತ್ತರ ಪದವಿ ಹಾಗೂ ಡಿಪ್ಲೊಮಾ ವಿದ್ಯಾರ್ಥಿಗಳು ಮತ್ತು ಸಂಶೋಧನಾ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯಗಳಲ್ಲಿ 2017–18ನೇ ಸಾಲಿನ ಪ್ರವೇಶಾತಿ ನೀಡುವ ಬಗ್ಗೆ ಪ್ರವೇಶಾತಿ ಶುಲ್ಕಗಳ ಬಗ್ಗೆ ಅಧಿಸೂಚನೆಯನ್ನು ಹೊರಡಿಸಿದ್ದು, ವಿಶ್ವವಿದ್ಯಾನಿಲಯಗಳಲ್ಲಿ ಮೆಸ್ ವ್ಯವಸ್ಥೆಯನ್ನು ಖಾಸಗಿ ಗುತ್ತಿಗೆದಾರರಿಗೆ ನೀಡುವ ಬದಲು ಆಯಾ ವಿದ್ಯಾರ್ಥಿನಿಲಯಗಳ ಶಿಕ್ಷಕ ಸಲಹೆಗಾರರ/ ವಾರ್ಡನ್ ಅವರುಗಳ ನೇತೃತ್ವದಲ್ಲಿ ಮೆಸ್ ನಡೆಸಲು ವಿದ್ಯಾರ್ಥಿನಿಲಯಗಳ ಸಲಹಾ ಸಮಿತಿ ಸಭೆಯಲ್ಲಿ ತೀರ್ಮಾನಿಸಿದಂತೆ ಮತ್ತು ವಿದ್ಯಾರ್ಥಿಗಳಿಂದ ದೂರುಗಳು ಬರದಂತೆ ಶುದ್ಧ ಆಹಾರವನ್ನು ಒದಗಿಸುವ ದೃಷ್ಟಿಯಿಂದ ಮತ್ತು ಸ್ನಾತಕ ತರಗತಿಗಳು ಅದಾಗಲೇ ಪ್ರಾರಂಭವಾಗಿದ್ದರಿಂದ ಯುವರಾಜ ಮತ್ತು ಮಹಾರಾಜ ಕಾಲೇಜಿನ ಮಹಿಳಾ ವಿದ್ಯಾರ್ಥಿನಿಲಯದಲ್ಲಿ ಪ್ರಾಯೋಗಿಕವಾಗಿ 2017–18ನೇ ಸಾಲಿನ ಪ್ರಾರಂಭದಲ್ಲೇ ಶಿಕ್ಷಕ ಸಲಹೆಗಾರರ ಮೂಲಕ ಭೋಜನ ವ್ಯವಸ್ಥೆಯನ್ನು ಕಲ್ಪಿಸಲು ಹಾಗೂ ಉಳಿದ ವಿದ್ಯಾರ್ಥಿನಿಲಯಗಳಿಗೆ ಪೂರ್ವಸಿದ್ಧತೆಯನ್ನು ಮಾಡಿಕೊಂಡು ಇದೇ ವ್ಯವಸ್ಥೆಯನ್ನು ಮುಂದಿನ ಚಾತುರ್ಮಾಸ ತರಗತಿಗಳು ಪ್ರಾರಂಭವಾಗುವ ದಿನದಿಂದ ಜಾರಿಗೆ ತರಲು ಅದುವರೆಗೆ ಸಿಂಡಿಕೇಟ್ ನಿರ್ಣಯವನ್ನು ಕಾಯ್ದಿರಿಸಿ, ಮುಂದಿನ ಚಾತುರ್ಮಾಸದವರಗೆ ಸೀಮಿತವಾದಂತೆ, ಹಿಂದೆ ನಡೆಸುತ್ತಿದ್ದ ಮೆಸ್ ಗುತ್ತಿಗೆದಾರರಿಗೆ ತಾತ್ಕಾಲಿಕ ಆದೇಶ ನೀಡಿ ಭೋಜನ ವ್ಯವಸ್ಥೆಯನ್ನು ಕಲ್ಪಿಸಲು ವಿಶ್ವವಿದ್ಯಾನಿಲಯವು ತೆಗೆದುಕೊಂಡ ಕ್ರಮವನ್ನು ಸಿಂಡಿಕೇಟ್ ಅನುಸಮರ್ಥಿಸಿತು. |
| **2017/8.4** | ಡಾ. ಸುಧಾ ಬಿ.ಎಸ್. ಸಹ ಪ್ರಾಧ್ಯಾಪಕರು, ರಸಾಯನಶಾಸ್ತ್ರ ವಿಭಾಗ, ಯುವರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರಿಗೆ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕ ದೇಶಕ್ಕೆ ಹೋಗಿಬರಲು ಅನುಮತಿ ನೀಡಿದ್ದ ಬಗ್ಗೆ – ಅನುಸಮರ್ಥನೆಗಾಗಿ. |
| **ತೀರ್ಮಾನ:** | ಡಾ. ಸುಧಾ ಬಿ.ಎಸ್. ಸಹ ಪ್ರಾಧ್ಯಾಪಕರು, ರಸಾಯನಶಾಸ್ತ್ರ ವಿಭಾಗ, ಯುವರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ತಮ್ಮ ಸ್ವಂತ ಕೆಲಸದ ನಿಮಿತ್ತ, ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊಣೆ ಇಲ್ಲದಂತೆ ದಿನಾಂಕ 07-06-2017 ರಿಂದ 24-06-207 ರವರೆಗೆ ಅವರ ರಜಾ ಅವಧಿಯಲ್ಲಿ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ದೇಶಕ್ಕೆ ಭೇಟಿ ನೀಡಲು ವಿಶ್ವವಿದ್ಯಾನಿಲಯವು ಅನುಮತಿ ನೀಡಿರುವ ಕ್ರಮವನ್ನು ಸಿಂಡಿಕೇಟ್ ಅನುಸಮರ್ಥಿಸಿತು. |
| **2017/8.5** | ಡಾ. ಸುಮಂಗಲ ಸಿ, ಮುಖ್ಯಸ್ಥರು ಬಿಬಿಎ/ಎಂಬಿಎ ವಿಭಾಗ, ಯುವರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಇವರಿಗೆ ಯುಎಸ್ಎ ಮತ್ತು ಯುಕೆ ದೇಶಗಳಿಗೆ ಹೋಗಿಬರಲು ಅನುಮತಿ ನೀಡಿದ್ದ ಬಗ್ಗೆ – ಅನುಸಮರ್ಥನೆಗಾಗಿ. |
| **ತೀರ್ಮಾನ:** | ಡಾ. ಸುಮಂಗಲ ಸಿ, ಮುಖ್ಯಸ್ಥರು ಬಿಬಿಎ/ಎಂಬಿಎ ವಿಭಾಗ, ಯುವರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು,ಇವರು ತಮ್ಮ ಸ್ವಂತ ಕೆಲಸದ ನಿಮಿತ್ತ, ಅವರ 25 ದಿನಗಳ ಗಳಿಕೆ ರಜೆ |

ಹಾಗೂ 41 ದಿನಗಳ ಬೇಸಿಗೆ ರಜೆಯನ್ನು ಉಪಯೋಗಿಸಿಕೊಂಡು, ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊಣೆ ಇಲ್ಲದಂತೆ, ದಿನಾಂಕ 26-04-2017 ರಿಂದ 30-06-2017ರವರೆಗೆ ಯುಎಸ್ಎ ಮತ್ತು ಯುಕೆ ದೇಶಗಳಿಗೆ ಭೇಟಿ ನೀಡಲುಮಾನ್ಯ ಕುಲಪತಿಯವರ ಅನುಮೋದನೆ ಮೇರೆಗೆ ವಿಶ್ವವಿದ್ಯಾನಿಲಯವು ಅನುಮತಿ ನೀಡಿರುವ ಕ್ರಮವನ್ನು ಸಿಂಡಿಕೇಟ್ ಅನುಸಮರ್ಥಿಸಿತು.

**2017/8.6** ಡಾ. ಲತಾ. ಎಸ್, ಪ್ರಾಧ್ಯಾಪಕರು, ಗಣಿತಶಾಸ್ತ್ರ ಅಧ್ಯಯನ ವಿಭಾಗ, ಯುವರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಇವರಿಗೆ ಕ್ಯಾಲಿಫೋರ್ನಿಯ ಯುನೈಟೆಡ್ ಸ್ಟೇಟ್ಸ್ ದೇಶಕ್ಕೆ ಹೋಗಿಬರಲು ಅನುಮತಿ ನೀಡಿದ್ದ ಬಗ್ಗೆ – ಅನುಸಮರ್ಥನೆಗಾಗಿ.

**ತೀರ್ಮಾನ:** ಡಾ. ಲತಾ. ಎಸ್, ಪ್ರಾಧ್ಯಾಪಕರು, ಗಣಿತಶಾಸ್ತ್ರ ಅಧ್ಯಯನ ವಿಭಾಗ, ಯುವರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಸ್ವಂತ ಕೆಲಸದ ನಿಮಿತ್ತ ಬೇಸಿಗೆ ರಜೆಯನ್ನು ಉಪಯೋಗಿಸಿಕೊಂಡು ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊಣೆ ಇಲ್ಲದಂತೆಬೇಸಿಗೆ ರಜೆ ಅವಧಿಯಲ್ಲಿ ದಿನಾಂಕ 22-05-2017ರಿಂದ 08-07-2017ರವರೆಗೆ ಕ್ಯಾಲಿಫೋರ್ನಿಯ ಯುನೈಟೆಡ್ ಸ್ಟೇಟ್ಸ್ ದೇಶಕ್ಕೆ ಭೇಟಿ ನೀಡಲು ವಿಶ್ವವಿದ್ಯಾನಿಲಯವು ಅನುಮತಿ ನೀಡಿರುವ ಕ್ರಮವನ್ನು ಸಿಂಡಿಕೇಟ್ ಅನುಸಮರ್ಥಿಸಿತು.

**2017/8.7** ಅಧಿಕಾರಿ/ಅಧ್ಯಾಪಕೇತರ ಉದ್ಯೋಗಿಗಳು ವಿದೇಶಕ್ಕೆ ತೆರಳಲು/ ಹೋಗಿಬಂದಿರುವುದಕ್ಕೆ ಅನುಮತಿ ನೀಡಿದ್ದ ಬಗ್ಗೆ – ಅನುಸಮರ್ಥನೆಗಾಗಿ

**ತೀರ್ಮಾನ:** ಮೈಸೂರು ವಿಶ್ವವಿದ್ಯಾನಿಲಯದ ಈ ಕೆಳಕಂಡ ಅಧಿಕಾರಿ ಮತ್ತು ಉದ್ಯೋಗಿಗಳು ವೈಯಕ್ತಿಕವಾಗಿ ಅವರುಗಳ ಹಕ್ಕಿನಲ್ಲಿರುವ ರಜೆಗಳನ್ನು ಉಪಯೋಗಿಸಿಕೊಂಡು, ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊಣೆಗಾರಿಕೆ ಇಲ್ಲದಂತೆ ವಿದೇಶಕ್ಕೆ ಭೇಟಿ ನೀಡಲು ವಿಶ್ವವಿದ್ಯಾನಿಲಯವು ಅನುಮತಿ ನೀಡಿರುವ ಕ್ರಮವನ್ನು ಸಿಂಡಿಕೇಟ್ ಅನುಸಮರ್ಥಿಸಿತು.

| ಕ್ರಸಂ | ಉದ್ಯೋಗಿಯ ಹೆಸರು ಮತ್ತು ಹುದ್ದೆ | ಕಾರ್ಯನಿರ್ವಹಿಸುತ್ತಿರುವ ಕಛೇರಿ/ ವಿಭಾಗ | ಉಪಯೋಗಿಸಿದ ರಜೆ ಅವಧಿ |
|---|---|---|---|
| 1 | ಡಾ.ಎಸ್.ಮಹದೇವಮೂರ್ತಿ, ಉಪಕುಲಸಚಿವ | ಪ.ಜಾತಿ/ಪ.ವರ್ಗ ವಿಶೇಷ ಘಟಕ, ಮೈವಿವಿ., ಮೈಸೂರು | ದಿ.18.05.2017 ರಿಂದ 23.05.2017ರವರೆಗೆ |
| 2 | ಶ್ರೀಮತಿ ಅನುಪಮ ಡಿ., ಬೆರಳಚ್ಚುಗಾರರು ಹಾಗೂ ಗುಮಾಸ್ತರು | ವಾಣಿಜ್ಯ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು. | ದಿ.27.06.2017 ರಿಂದ 05.07.2017ರವರೆಗೆ |

**2017/8.8** ಲೇ. ಶ್ರೀ ಅಭಿಜಿತ್ ಜೈನ್ ಚಿನ್ನದ ಪದಕ ಸ್ಥಾಪನೆ ಮಾಡುವ ಬಗ್ಗೆ.

**ತೀರ್ಮಾನ:** ದಾನಿಗಳು ದತ್ತಿಯ ನಿಬಂಧನೆಯಲ್ಲಿ ಕೋರಿರುವಂತೆ ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢೀಕೃತವಾಗುವ ಬಡ್ಡಿಯ ಹಣದಲ್ಲಿ ಶೇ. 20ರಷ್ಟನ್ನು ದತ್ತಿಯ ಮೂಲ ಧನಕ್ಕೆ ಸೇರಿಸಿ, ಉಳಿದ ಶೇ. 80ರಷ್ಟು ಹಣವನ್ನು M.B.A ಸ್ನಾತಕೋತ್ತರ ಪದವಿಯ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದು ಪ್ರಥಮ ಬಾರಿಗೆ ತೇರ್ಗಡೆಯಾಗುವ ವಿದ್ಯಾರ್ಥಿಗೆ ಚಿನ್ನದ ಪದಕವನ್ನು ನೀಡುವ ಸಂಬಂಧ **"ಲೇ. ಶ್ರೀ ಅಭಿಜಿತ್ ಜೈನ್ ಚಿನ್ನದ ಪದಕ"** ದತ್ತಿ ಸ್ಥಾಪನೆ ಮಾಡಲು ಸಿಂಡಿಕೇಟ್ ಅನುಮೋದಿಸಿತು.

**2017/8.9** ಶ್ರೀಮತಿ ಜಯಮ್ಮ ಮಲ್ಲಿಕಾರ್ಜುನಸ್ವಾಮಿ ಚಿನ್ನದ ಪದಕ ದತ್ತಿ ಸ್ಥಾಪನೆ ಮಾಡುವ ಬಗ್ಗೆ.

**ತೀರ್ಮಾನ:** ದಾನಿಗಳು ದತ್ತಿಯ ನಿಬಂಧನೆಯಲ್ಲಿ ಕೋರಿರುವಂತೆ ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢೀಕೃತವಾಗುವ ಬಡ್ಡಿಯ ಹಣದಲ್ಲಿ ಶೇ. 20ರಷ್ಟನ್ನು ದತ್ತಿಯ ಮೂಲ ಧನಕ್ಕೆ ಸೇರಿಸಿ, ಉಳಿದ ಶೇ. 80ರಷ್ಟು ಹಣವನ್ನು B.A ಪದವಿಯ Public Administration ಪತ್ರಿಕೆಯಲ್ಲಿ ಅತಿ ಹೆಚ್ಚು ಅಂಕ ಪಡೆದು ಪ್ರಥಮ ಬಾರಿಗೆ ತೇರ್ಗಡೆಯಾಗುವ **ವಿದ್ಯಾರ್ಥಿನಿಗೆ** ಚಿನ್ನದ ಪದಕವನ್ನು ನೀಡುವ ಸಂಬಂಧ **"ಶ್ರೀಮತಿ ಜಯಮ್ಮ ಮಲ್ಲಿಕಾರ್ಜುನಸ್ವಾಮಿ ಚಿನ್ನದ ಪದಕ"** ದತ್ತಿ ಸ್ಥಾಪನೆ ಮಾಡಲು ಸಿಂಡಿಕೇಟ್ ಅನುಮೋದಿಸಿತು.

**2017/8.10** 2017–18ನೇ ಸಾಲಿನ ವಿಶ್ವವಿದ್ಯಾನಿಲಯದ ಕ್ರೀಡಾ ಸಮಿತಿ ಮೊದಲನೇ ಸಭೆಯ ನಡಾವಳಿಯನ್ನು ಅನುಮೋದಿಸುವ ಬಗ್ಗೆ.

**ತೀರ್ಮಾನ:** 2017–18ನೇ ಸಾಲಿನ ವಿಶ್ವವಿದ್ಯಾನಿಲಯದ ಕ್ರೀಡಾ ಸಮಿತಿ ಮೊದಲನೇ ಸಭೆಯ ನಡಾವಳಿಯನ್ನು ಸಿಂಡಿಕೇಟ್ ಅನುಮೋದಿಸಿತು.

| | |
|---|---|
| **2017/8.11** | ದಿನಾಂಕ 24-08-2017ರ "ಸ್ವರ್ಣ ಗೌರಿ" ಹಬ್ಬದ ದಿನವನ್ನು ಮೈಸೂರು ವಿಶ್ವವಿದ್ಯಾನಿಲಯವು 'ಸ್ಥಳೀಯ ರಜೆ' ಎಂದು ಘೋಷಿಸುವ ಬಗ್ಗೆ. |
| **ತೀರ್ಮಾನ:** | ಮೈಸೂರು ವಿಶ್ವವಿದ್ಯಾನಿಲಯದ ಉದ್ಯೋಗಿಗಳು ದಿನಾಂಕ 24-08-2017 ರಂದು ನಡೆಯುವ "ಸ್ವರ್ಣ ಗೌರಿ" ಹಬ್ಬದ ದಿನವನ್ನು ಸ್ಥಳೀಯ ರಜೆ ಎಂದು ಪರಿಗಣಿಸುವಂತೆ ಕೋರಿರುವ ಮನವಿಯನ್ನು ಪರಿಶೀಲಿಸಿದ ಸಿಂಡಿಕೇಟ್ ಈಗಾಗಲೇ ಕ್ಯಾಲೆಂಡರ್ ವರ್ಷದಲ್ಲಿ ಹಲವಾರು ರಜಾ ದಿನಗಳಿರುವುದರಿಂದ ಸರ್ಕಾರದ ನಿಯಮದಂತೆ "ಸ್ವರ್ಣ ಗೌರಿ" ಹಬ್ಬದ ದಿನವನ್ನು ನಿರ್ಬಂಧಿತ ರಜೆಯೆಂದು ಮಾತ್ರ ಪರಿಗಣಿಸಲು ಸಿಂಡಿಕೇಟ್ ತೀರ್ಮಾನಿಸಿತು. |
| **2017/8.12** | ಯುವರಾಜ ಕಾಲೇಜು ಹಾಗೂ ಪ್ರಾಯೋಜಿತ ಕಾರ್ಯಕ್ರಮಗಳ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ತಾತ್ಕಾಲಿಕ ನೌಕರರುಗಳ ವೇತನವನ್ನು ಸಾಮಾನ್ಯ ರೆವಿನ್ಯೂ ಖಾತೆಯ "ತಾತ್ಕಾಲಿಕ ಅಧ್ಯಾಪಕೇತರ ನೌಕರರ ವೇತನ" ಶೀರ್ಷಿಕೆಯಿಂದ ಪಾವತಿಸದಿರುವ ಬಗ್ಗೆ. |
| **ತೀರ್ಮಾನ:** | ಯುವರಾಜ ಕಾಲೇಜು ಹಾಗೂ ವಿಶ್ವವಿದ್ಯಾನಿಲಯದ ವಿವಿಧ ಪ್ರಾಯೋಜಿತ ಕಾರ್ಯಕ್ರಮಗಳ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ತಾತ್ಕಾಲಿಕ ನೌಕರರುಗಳ ವೇತನವನ್ನು ಸಾಮಾನ್ಯ ರೆವಿನ್ಯೂ ಖಾತೆಯ "ತಾತ್ಕಾಲಿಕ ಅಧ್ಯಾಪಕೇತರ ನೌಕರರ ವೇತನ" ಶೀರ್ಷಿಕೆಯಲ್ಲಿ ನೀಡುವುದರ ಬಗೆಗೆ ಸುದೀರ್ಘವಾಗಿ ಚರ್ಚಿಸಿದ ಸಿಂಡಿಕೇಟ್, ಯುವರಾಜ ಕಾಲೇಜು ಸ್ವಾಯತ್ತ ಕಾಲೇಜಾಗಿದ್ದು ತನ್ನದೇ ಆದ ಆಡಳಿತ ಮಂಡಳಿ, ಶಿಕ್ಷಣ ಮಂಡಳಿ, ಹಣಕಾಸು ಸಮಿತಿಗಳನ್ನು ಹೊಂದಿದ್ದು ಆ ಕಾಲೇಜಿಗೆ ಬರುವ ಆದಾಯಕ್ಕನುಗುಣವಾಗಿ ಆಯವ್ಯಯವನ್ನು ತಯಾರಿಸಿಕೊಂಡು ವೇತನ ನೀಡಬಹುದಾದ್ದರಿಂದ ಅಲ್ಲಿ ಕಾರ್ಯನಿರ್ವಹಿಸುತ್ತಿರುವ ಉದ್ಯೋಗಿಗಳಿಗೆ ಕಾಲೇಜಿನ ವತಿಯಿಂದಲೇ ಹಾಗೂ ಅದೇ ರೀತಿ ವಿಶ್ವವಿದ್ಯಾನಿಲಯದ ವಿವಿಧ ಪ್ರಾಯೋಜಿತ ಕಾರ್ಯಕ್ರಮಗಳು ನಿರ್ದಿಷ್ಟ ಅವಧಿಗೆ ನಿರ್ದಿಷ್ಟ ಕಾರ್ಯಕ್ಕಾಗಿ ಮಂಜೂರಾಗಿದ್ದು, ಯುಜಿಸಿ/ಇತರೆ ಅನುದಾನಿತ ಸಂಸ್ಥೆಗಳಿಂದ ಹಣ ಸಹಾಯ ಪಡೆದಿರುವ ಯೋಜನೆಗಳಾಗಿರುವುದರಿಂದ ಸರ್ಕಾರದ ಅನುಮತಿ, ನಿರ್ದಿಷ್ಟ ಹಣಕಾಸು ವ್ಯವಸ್ಥೆ, ಸ್ಪಷ್ಟವಾಗಿ ಹುದ್ದೆಗಳನ್ನು ಸೃಜಿಸದೇ ಇರುವುದರಿಂದ ಇಂತಹ ತಾತ್ಕಾಲಿಕ ಹುದ್ದೆಗಳಿಗೆ ವಿಶ್ವವಿದ್ಯಾನಿಲಯದ ಸಾಮಾನ್ಯ ರೆವಿನ್ಯೂ ಖಾತೆಯಿಂದ ವೇತನ ನೀಡಲು ಸಾಧ್ಯವಾಗುವುದಿಲ್ಲವಾದ್ದರಿಂದ ಯೋಜನೆಗಳ ಅನುದಾನದಿಂದಲೇ ಯೋಜನಾ ಅವಧಿಗೆ ಸೀಮಿತವಾದಂತೆ, ಯೋಜನೆಯ ಮಾರ್ಗಸೂಚಿಗಳನ್ವಯ ವೇತನವನ್ನು ಭರಿಸಲು ತೀರ್ಮಾನಿಸಿತು. |
| **2017/8.13** | ಪ್ರೊ. ಬಿ. ಶಿವರಾಜ್, ಪ್ರಾಧ್ಯಾಪಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರಿಗೆ ಕಡ್ಡಾಯ ನಿವೃತ್ತಿ ಅವಧಿಯನ್ನು ಏನೆಂದು ಪರಿಗಣಿಸಬೇಕು ಹಾಗೂ ಸದರಿ ಅವಧಿಗೆ ವೇತನ ನೀಡುವ ಬಗ್ಗೆ. |
| **ತೀರ್ಮಾನ:** | ಪ್ರೊ.ಬಿ.ಶಿವರಾಜ್‌ರವರನ್ನು ಕರ್ತವ್ಯಕ್ಕೆ ಹಾಜರುಪಡಿಸಿಕೊಳ್ಳಲು ಕ್ರಮಕೈಗೊಳ್ಳುವಂತೆ ಸರ್ಕಾರವು ನೀಡಿರುವ ಆದೇಶ ಹಾಗೂ ಕಡ್ಡಾಯ ನಿವೃತ್ತಿಯ ಅವಧಿಯನ್ನು ಕರ್ತವ್ಯವೆಂದು ಪರಿಗಣಿಸಿ ವೇತನ ಬಿಡುಗಡೆ ಮಾಡುವ ಬಗ್ಗೆ ನೀಡಿರುವ ಹಣಕಾಸು ಅಧಿಕಾರಿಗಳ ಅಭಿಪ್ರಾಯವನ್ನು ಪರಿಶೀಲಿಸಿದ ಸಿಂಡಿಕೇಟ್ ಕಡ್ಡಾಯ ನಿವೃತ್ತಿ ಮತ್ತು ಪುನಃ ಕೆಲಸಕ್ಕೆ ತೆಗೆದುಕೊಂಡ ಅವಧಿಯನ್ನು ಕೆಲಸದ ಮೇಲಿದ್ದ ಹಾಗೆ ಪರಿಗಣಿಸಬೇಕೆ ಅಥವಾ ಬೇಡವೇ ಎಂಬ ಬಗ್ಗೆ ಸರ್ಕಾರ ಸ್ಪಷ್ಟವಾಗಿ ಆದೇಶಿಸಿರುವುದಿಲ್ಲವಾದ್ದರಿಂದ ಈ ಅಂಶಗಳನ್ನು ಪರಿಗಣಿಸಿ ಸರ್ಕಾರಕ್ಕೆ ಪತ್ರ ಬರೆದು ಸರ್ಕಾರದ ನಿರ್ದೇಶನದಂತೆ ಕ್ರಮಕೈಗೊಳ್ಳಲು ಸಿಂಡಿಕೇಟ್ ನಿರ್ಣಯಿಸಿತು. |
| **2017/8.14** | ವಿಶ್ವವಿದ್ಯಾನಿಲಯದಲ್ಲಿ ಸೇವೆಯಲ್ಲಿರುವಾಗಲೇ ನಿಧನರಾದ ಉದ್ಯೋಗಿಯ ಕುಟುಂಬದ ಅವಲಂಬಿತರೊಬ್ಬರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ ಬಗ್ಗೆ. |
| **ತೀರ್ಮಾನ:** | ದಿವಂಗತ ಭಾಗ್ಯಮ್ಮ, ನಿಲಯ ಸಹಾಯಕಿ, ಸ್ನಾತಕೋತ್ತರ ಮಹಿಳಾ ವಿದ್ಯಾರ್ಥಿನಿಲಯ, ಬ್ಲಾಕ್-1, ಮಾನಸಗಂಗೋತ್ರಿ, ಮೈಸೂರು ಇವರು ದಿ.13-02-2017 ರಂದು ವಿಶ್ವವಿದ್ಯಾನಿಲಯದ ಸೇವೆಯಲ್ಲಿದ್ದಾಗಲೇ ನಿಧನ ಹೊಂದಿರುವುದರಿಂದ, ಇವರ ಮಗನಾದ ಶ್ರೀ ಕೆ.ಬಸವರಾಜು, ಇವರು 5ನೇ ತರಗತಿಯಲ್ಲಿ ಉತ್ತೀರ್ಣರಾಗಿದ್ದು, ವಿ.ವಿ.ಅಧಿನಿಯಮದ ಪ್ರಕಾರ, ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ ಸಂಬಂಧ, ರಚಿಸಿರುವ ಅಧಿನಿಯಮದ ಪ್ರಕರಣ 6(ಬಿ) ಪ್ರಕಾರ ನಾಲ್ಕನೇ ತರಗತಿಯಲ್ಲಿ ತೇರ್ಗಡೆಯಾಗಿದ್ದರೂ ಸಹ ನಾಲ್ಕನೇ ದರ್ಜೆ ನೌಕರರ ಹುದ್ದೆಗೆ ಪರಿಗಣಿಸಲು ಅವಕಾಶವಿರುವುದರಿಂದ, ಸದರಿಯವರನ್ನು ನಿಯಮಾನುಸಾರ ವಿದ್ಯಾರ್ಥಿನಿಲಯದಲ್ಲಿ ಖಾಲಿ ಇರುವ ನಿಲಯ ಸಹಾಯಕರ ಹುದ್ದೆಗೆ ಅನುಕಂಪದ ಆಧಾರದ ಮೇಲೆ ನೇಮಕ ಮಾಡಲು ಸಿಂಡಿಕೇಟ್ ಅನುಮೋದಿಸಿತು. |

| | |
|---|---|
| **2017/8.15** | ಶ್ರೀ ಎಂ.ಎಂ. ಶ್ರೀಕಂಠಸ್ವಾಮಿ, ಪ್ರಥಮ ದರ್ಜೆ ಗುಮಾಸ್ತರು, ಹಣಕಾಸು ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ಅನಧಿಕೃತ ಗೈರುಹಾಜರಿಯ ಹಿನ್ನೆಲೆಯಲ್ಲಿ ಶಿಸ್ತು ಕ್ರಮ ಜರುಗಿಸುವ ಬಗ್ಗೆ. |
| **ತೀರ್ಮಾನ:** | ಶ್ರೀ ಎಂ.ಎಂ. ಶ್ರೀಕಂಠಸ್ವಾಮಿ, ಪ್ರಥಮ ದರ್ಜೆ ಗುಮಾಸ್ತರು, ಹಣಕಾಸು ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರುಇವರು ಕಛೇರಿಗೆ ದಿನಾಂಕ 22-11-2015 ರಿಂದ 21-07-2016ರವರೆಗೆ ಒಟ್ಟು 243 ದಿನಗಳು ಹಾಗೂ 06-05-2017ರಿಂದ ಇದುವರೆಗೂ ಅನಧಿಕೃತವಾಗಿ ಗೈರು ಹಾಜರಾಗಿದ್ದು ವಿಶ್ವವಿದ್ಯಾನಿಲಯವು ನೀಡಿರುವ ಮೆಮೋಗಳಿಗೆ ಉತ್ತರವನ್ನು ನೀಡದೇ ಬೇಜವಾಬ್ದಾರಿಯನ್ನು ತೋರಿಸಿರುವ ಕ್ರಮವನ್ನು ಸಿಂಡಿಕೇಟ್ ಆಕ್ಷೇಪಿಸಿ, ಇವರ ಈ ವರ್ತನೆಯು ಶಿಕ್ಷಾರ್ಹ ಅಪರಾಧವಾಗಿದ್ದು, ಮೈಸೂರು ವಿಶ್ವವಿದ್ಯಾನಿಲಯದ ಉದ್ಯೋಗಿಗಳ ಸಿ.ಸಿ.ಎ ಅಧಿನಿಯಮ 1983ರ ಪ್ರಕಾರ ಇವರ ವಿರುದ್ಧ ಶಿಸ್ತು ಕ್ರಮ ಜರುಗಿಸುವ ಸಲುವಾಗಿ ಸಿದ್ಧಪಡಿಸಿರುವ ಆರೋಪಣಾ ಪಟ್ಟಿ ಮತ್ತು ದೋಷಾರೋಪಣ ಪಟ್ಟಿಯನ್ನು ಸಿಂಡಿಕೇಟ್ ಅನುಮೋದಿಸಿತು ಹಾಗೂ ನಿಯಮಾನುಸಾರ ಇಲಾಖಾ ವಿಚಾರಣೆ ನಡೆಸಲು ತೀರ್ಮಾನಿಸಿತು. |
| **2017/8.16** | ಕು. ಕಾವ್ಯಶ್ರೀ ಹೆಚ್.ಎನ್., ತಾತ್ಕಾಲಿಕ ಬೆರಳಚ್ಚುಗಾರರು ಹಾಗೂ ಗುಮಾಸ್ತರು, ಸರ್.ಎಂ. ವಿಶ್ವೇಶ್ವರಯ್ಯ ಸ್ನಾತಕೋತ್ತರ ಕೇಂದ್ರ, ಮಂಡ್ಯ ಇವರು ಸಲ್ಲಿಸಿರುವ ದೂರಿನ ಬಗ್ಗೆ. |
| **ತೀರ್ಮಾನ:** | ಕು. ಕಾವ್ಯಶ್ರೀ ಹೆಚ್.ಎನ್.,ಇವರು ಮಂಡ್ಯದಸರ್.ಎಂ. ವಿಶ್ವೇಶ್ವರಯ್ಯ ಸ್ನಾತಕೋತ್ತರ ಕೇಂದ್ರದಲ್ಲಿ ನಿರ್ದೇಶಕರಾಗಿದ್ದ ಪ್ರೊ. ಚಂದ್ರಾಜುಇವರ ವಿರುದ್ಧದೂರು ಸಲ್ಲಿಸಿದ್ದ ಹಿನ್ನೆಲೆಯಲ್ಲಿ ಸದರಿಯವರ ವಿರುದ್ಧ ವಿಶ್ವವಿದ್ಯಾನಿಲಯ ದೂರು ಸಮಿತಿಯು ವಿಚಾರಣೆಯನ್ನು ನಡೆಸಿ ವರದಿಯಲ್ಲಿ ಶಿಫಾರಸ್ಸು ಮಾಡಿರುವಂತೆ ಡಾ.ಚಂದ್ರಾಜು ಅವರ ಮೇಲೆ ವಿಶ್ವವಿದ್ಯಾನಿಲಯವು ಯಾವುದೇ ರೀತಿಯ ಕ್ರಮವನ್ನು ಕೈಗೊಂಡಿರುವುದಿಲ್ಲವಾದ್ದರಿಂದ ಕು. ಕಾವ್ಯಶ್ರೀ ಹೆಚ್.ಎನ್., ಅವರಿಗೆ ಕೆಲಸದಿಂದ ತೆಗೆದುಹಾಕಲಾಗಿದ್ದ (ಅಕ್ಟೋಬರ್ 2014) ಮತ್ತು ಮರುನೇಮಕಗೊಳಿಸಿದ (23-04-2016ರವರೆಗೆ) ಅವಧಿಯಲ್ಲಿ ಉಂಟಾಗಿರುವ ಆರ್ಥಿಕ ವೇತನ ನಷ್ಟವನ್ನು ಲೆಕ್ಕಹಾಕಿ ಡಾ. ಚಂದ್ರಾಜು ಅವರಿಗೆ ನೀಡಬೇಕಾಗಿರುವ ನಿವೃತ್ತಿ ಸೌಲಭ್ಯದ ಹಣದಲ್ಲಿ ಕಟಾವುಗೊಳಿಸಿ ಕು. ಕಾವ್ಯಶ್ರೀ ಹೆಚ್.ಎನ್., ಅವರಿಗೆ ನೀಡಲು ಸಿಂಡಿಕೇಟ್ ತೀರ್ಮಾನಿಸಿತು.<br>ಮುಂದುವರೆದು, ಕೇಂದ್ರದಲ್ಲಿ ದಿನಾಂಕ 16-3-2017ರಂದು ನಡೆದ ಘಟನೆಯ ಬಗ್ಗೆ ಶ್ರೀವಿ.ಎಸ್.ಉಗ್ರಪ್ಪರವರು ತಮ್ಮ ಪತ್ರದಲ್ಲಿ ಕು.ಕಾವ್ಯಶ್ರೀ.ಹೆಚ್.ಎನ್. ಅವರು ದಾಖಲಿಸಿರುವ ದೂರಿಗೆ ಕೂಡಲೇ ತನಿಖೆಯನ್ನು ಚುರುಕುಗೊಳಿಸಿ, ತಪ್ಪಿತಸ್ಥ ಅಪರಾಧಿಗಳನ್ನು ಪತ್ತೆ ಮಾಡಿ, ಕ್ರಮ ಕೈಗೊಳ್ಳುವಂತೆ ಕೋರಿರುವ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯದ ವತಿಯಿಂದ ಅಗತ್ಯ ಕ್ರಮ ಕೈಗೊಳ್ಳಲು ಸಿಂಡಿಕೇಟ್ ನಿರ್ಧರಿಸಿತು. |
| **2017/8.17** | 2017-18ನೇ ಶೈಕ್ಷಣಿಕ ಸಾಲಿನಿಂದ ಮೈಸೂರಿನ ಮಹರ್ಷಿ ಪ್ರಥಮ ದರ್ಜೆ ಕಾಲೇಜನ್ನು ಮುಚ್ಚುವ ಬಗ್ಗೆ. |
| **ತೀರ್ಮಾನ:** | ಮೈಸೂರಿನ ಮಹರ್ಷಿ ಪ್ರಥಮ ದರ್ಜೆ ಕಾಲೇಜಿನವರು 2017-18ನೇ ಶೈಕ್ಷಣಿಕ ಸಾಲಿನಿಂದ ಕಾಲೇಜನ್ನು ಮುಚ್ಚಲು ಬೋಧಕ ಮತ್ತು ಬೋಧಕೇತರ ನೌಕರರ ಆಕ್ಷೇಪಣೆ ಇರುವುದಿಲ್ಲವೆಂದು ನೀಡಿರುವ ಪತ್ರ ಮತ್ತು ಕಾಲೇಜಿನಆಡಳಿತ ಮಂಡಳಿಯು ನಿರ್ಣಯಿಸಿರುವ ದಾಖಲೆಗಳ ಪ್ರತಿಗಳನ್ನು ಪರಿಶೀಲಿಸಿದ ಸಿಂಡಿಕೇಟ್ ವಿಶ್ವವಿದ್ಯಾನಿಲಯ ಅಧಿನಿಯಮ 2000 ಪ್ರಕರಣ 65(2)&(3)ರಂತೆ ಸಂಯೋಜನೆಯನ್ನು ಹಿಂತೆಗೆದುಕೊಂಡು ಕಾಲೇಜನ್ನು ಮುಚ್ಚಲು ನಿಯಮಾನುಸಾರ ಅಗತ್ಯ ಕ್ರಮವಹಿಸಲು ಸಿಂಡಿಕೇಟ್ ಅನುಮೋದಿಸಿತು. |
| **2017/8.18** | 2017-18ನೇ ಶೈಕ್ಷಣಿಕ ಸಾಲಿನಿಂದ ಹಾಸನದ ಶ್ರೀರಂಗ ಪ್ರಥಮ ದರ್ಜೆ ಕಾಲೇಜನ್ನು ಮುಚ್ಚುವ ಬಗ್ಗೆ. |
| **ತೀರ್ಮಾನ:** | ಹಾಸನದ ಶ್ರೀರಂಗ ಪ್ರಥಮ ದರ್ಜೆ ಕಾಲೇಜನ್ನು 2017-18ನೇ ಶೈಕ್ಷಣಿಕ ಸಾಲಿನಿಂದ ಕಾಲೇಜನ್ನು ಮುಚ್ಚಲು ಬೋಧಕ ಮತ್ತು ಬೋಧಕೇತರ ನೌಕರರ ಆಕ್ಷೇಪಣೆ ಇರುವುದಿಲ್ಲವೆಂಬ ಪತ್ರ ಮತ್ತು ಕಾಲೇಜಿನಆಡಳಿತ ಮಂಡಳಿಯು ನಿರ್ಣಯಿಸಿರುವ ದಾಖಲೆಗಳ ಪ್ರತಿಗಳನ್ನು ಪರಿಶೀಲಿಸಿದ ಸಿಂಡಿಕೇಟ್ ವಿಶ್ವವಿದ್ಯಾನಿಲಯ ಅಧಿನಿಯಮ 2000 ಪ್ರಕರಣ 65(2)&(3)ರಂತೆ ಸಂಯೋಜನೆಯನ್ನು ಹಿಂತೆಗೆದುಕೊಂಡು ಕಾಲೇಜನ್ನು ಮುಚ್ಚಲು ನಿಯಮಾನುಸಾರ ಅಗತ್ಯ ಕ್ರಮವಹಿಸಲು ಸಿಂಡಿಕೇಟ್ ಅನುಮೋದಿಸಿತು. |
| **2017/8.19** | ಡಾ. ಸೆಯೆಧದಿ ಮರ್ಜೈ, ಸಹಾಯಕ ಪ್ರಾಧ್ಯಾಪಕರು, ಉನ್ನತ ಶಿಕ್ಷಣ ಸಂಶೋಧನಾ ಮತ್ತು ಯೋಜನಾ ಸಂಸ್ಥೆ (IRPHE), ತೆಹ್ರಾನ್, ಇರಾನ್ ಇವರಿಗೆ ಸಬ್ಬಾಟಿಕಲ್ ರಜೆ ಅವಧಿಯಲ್ಲಿ |

| | |
|---|---|
| | ತೃತೀಯ ಕ್ಷೇತ್ರ ಸಂಶೋಧನಾ ಸಂಪನ್ಮೂಲ ಕೇಂದ್ರದಲ್ಲಿ ಸಂಶೋಧನೆ ಕೈಗೊಳ್ಳಲು ಅನುಮತಿ ನೀಡುವುದರ ಬಗ್ಗೆ. |
| **ತೀರ್ಮಾನ:** | ಡಾ. ಸೆಯೆಧದಿ ಮರ್'ಜ್ಯೆ, ಸಹಾಯಕ ಪ್ರಾಧ್ಯಾಪಕರು, ಉನ್ನತ ಶಿಕ್ಷಣ ಸಂಶೋಧನಾ ಮತ್ತು ಯೋಜನಾ ಸಂಸ್ಥೆ (IRPHE), ತೆಹ್ರಾನ್, ಇರಾನ್ ಇವರು ತೃತೀಯ ಕ್ಷೇತ್ರ ಸಂಶೋಧನಾ ಸಂಪನ್ಮೂಲ ಕೇಂದ್ರದಲ್ಲಿ ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊಣೆಗಾರಿಕೆ ಇಲ್ಲದಂತೆ ತಮ್ಮ ಸಬ್ಬಾಟಿಕಲ್ ರಜೆಯ ಅವಧಿಯಲ್ಲಿ ಈ ಕೆಳಕಂಡ ಷರತ್ತುಗಳೊಡನೆ ಸಂಶೋಧನೆ ಕೈಗೊಳ್ಳಲು ಸಿಂಡಿಕೇಟ್ ಸಮ್ಮತಿಸಿತು.<br>1. ವಿಶ್ವವಿದ್ಯಾನಿಲಯದ ಗ್ರಂಥಾಲಯಗಳನ್ನು ಉಪಯೋಗಿಸಿಕೊಳ್ಳಲು ನಿಯಮಾನುಸಾರ ಶುಲ್ಕಗಳನ್ನು ಪಾವತಿಸುವುದು.<br>2. ಸಂಶೋಧನಾ ಅವಧಿಯಲ್ಲಿ ಸಂಬಂಧಪಟ್ಟ ವಿಭಾಗ/ಕೇಂದ್ರಗಳಲ್ಲಿ ಯಾವುದೇ ರೀತಿಯ ಆರ್ಥಿಕ ಹೊಣೆಗಾರಿಕೆ ಇಲ್ಲದಂತೆ 2-3 ಉಪನ್ಯಾಸ ನೀಡಲು ತೃತೀಯ ಕ್ಷೇತ್ರ ಸಂಶೋಧನಾ ಸಂಪನ್ಮೂಲ ಕೇಂದ್ರದ ಸಂಯೋಜಕರಾದ ಪ್ರೊ. ಯಶವಂತ ಡೋಂಗ್ರೆ ಅವರು ಆಯೋಜಿಸುವುದು.<br>3. ಸಂಶೋಧನ ವರದಿಯ ಪ್ರತಿಯನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುವುದು. ಈ ಅವಧಿಯಲ್ಲಿ ಯಾವುದಾದರು ಪುಸ್ತಕ/ಲೇಖನ ಪ್ರಕಟಿಸಿದ್ದಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸಂಶೋಧನೆ ನಡೆಸಿದ ಮಾಹಿತಿಯನ್ನು ನಮೂದಿಸುವುದು. |
| **2017/8.20** | ಡಾ. ಗೋಪಾಲ್ ಮರಾತೆ, ಸಹ ಪ್ರಾಧ್ಯಾಪಕರು, ಜೀವರಸಾಯನಶಾಸ್ತ್ರ ಅಧ್ಯಯನ ವಿಭಾಗ ಮಾನಸಗಂಗೋತ್ರಿ, ಮೈಸೂರು ಇವರು ಆಫ್ರಿಕಾದ ಮದಗಸ್ಕರ್ ದೇಶಕ್ಕೆ ತೆರಳಲು ಅನುಮತಿ ನೀಡುವಂತೆ ಕೋರಿರುವ ಬಗ್ಗೆ. |
| **ತೀರ್ಮಾನ:** | ಡಾ. ಗೋಪಾಲ್ ಮರಾತೆ ಕೆ., ಸಹ ಪ್ರಾಧ್ಯಾಪಕರು, ಜೀವರಸಾಯನಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ಖಾಸಗಿ ಕಾರಣಗಳಿಗಾಗಿ ದಿನಾಂಕ 22-08-2017ರಿಂದ 04-09-2017ರವರೆಗೆ ಅವರ ಹಕ್ಕಿನ ರಜೆಯನ್ನು ಉಪಯೋಗಿಸಿಕೊಂಡು, ವಿಶ್ವವಿದ್ಯಾನಿಲಯದ ಮೇಲೆ ಯಾವುದೇ ಆರ್ಥಿಕ ಹೊಣೆಗಾರಿಕೆಯಿಲ್ಲದಂತೆ ಆಫ್ರಿಕಾದ ಮದಗಸ್ಕರ್ ದೇಶಕ್ಕೆ ಭೇಟಿ ನೀಡಲು ಸಿಂಡಿಕೇಟ್ ಅನುಮೋದಿಸಿತು. |
| **2017/8.21** | ಕರ್ನಾಟಕ ರಾಜ್ಯ ಉಚ್ಚ ನ್ಯಾಯಲಯದ ಮೊರೆ ಹೋಗಿರುವ ಸ್ನಾತಕ ಮತ್ತು ಸ್ನಾತಕೊತ್ತರ ವಿಭಾಗಗಳ ಅತಿಥಿ ಉಪನ್ಯಾಸಕರುಗಳು ಬೇಸಿಗೆ ರಜೆಯಲ್ಲಿ ವೇತನ ನೀಡುವಂತೆ ಕೋರಿರುವ ಬಗ್ಗೆ. |
| **ತೀರ್ಮಾನ:** | ವಿಶ್ವವಿದ್ಯಾನಿಲಯದ ಘಟಕ ಕಾಲೇಜು/ಸ್ನಾತಕೋತ್ತರ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳು ಬೇಸಿಗೆ ರಜೆ ಅವಧಿಯಲ್ಲಿ ವೇತನವನ್ನು ಕೊಡಿಸುವಂತೆ ಕೋರಿ ಉಚ್ಚನ್ಯಾಯಾಲಯದಲ್ಲಿ ಖಾಯಂಗೊಳಿಸುವ ಸಂಬಂಧ WP No.10178-199/2015 (s-REG)ಯಲ್ಲಿ ಮೊಕದ್ದಮೆ ದಾಖಲಿಸಿದ್ದು, ಇದು ಇನ್ನು ಇತ್ಯರ್ಥವಾಗದೇ ಇರುವುದರಿಂದ ಹಾಗೂ ವಿಶ್ವವಿದ್ಯಾನಿಲಯದಲ್ಲಿ ಅತಿಥಿ ಉಪನ್ಯಾಸಕರಾಗಿ ಕಾರ್ಯನಿರ್ವಹಿಸುತ್ತಿರುವವರಿಗೆ ರಜೆ ಅವಧಿಗೆ ವೇತನ ಪಾವತಿಸದಿರುವಂತೆಯೇ ಇವರಿಗೂ ರಜೆ ಅವಧಿಗೆ ವೇತನವನ್ನು ನೀಡಲು ಸಾಧ್ಯವಿಲ್ಲವೆಂದು ಸಿಂಡಿಕೇಟ್ ನಿರ್ಣಯಿಸಿತು. |
| **2017/8.22** | ಎನ್.ಸಿ.ಹೆಚ್.ಎಸ್. ಯೋಜನೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ನೌಕರರನ್ನು ವಿಶ್ವವಿದ್ಯಾನಿಲಯದಲ್ಲಿ ತಾತ್ಕಾಲಿಕ ಆಧಾರದ ಮೇಲೆ ನೇಮಕ ಮಾಡಿಕೊಳ್ಳುವ ಕುರಿತು. |
| **ತೀರ್ಮಾನ:** | ವಿಶ್ವವಿದ್ಯಾನಿಲಯದ ಯೋಜನೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವವರನ್ನು ವಿಶ್ವವಿದ್ಯಾನಿಲಯದ ಸೇವೆಯಲ್ಲಿ ಮುಂದುವರೆಸಲು ನಿಯಮಾನುಸಾರ ಅವಕಾಶವಿರುವುದಿಲ್ಲವಾದ್ದರಿಂದ ಎನ್.ಸಿ.ಹೆಚ್.ಎಸ್. ಯೋಜನೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ನೌಕರರನ್ನು ವಿಶ್ವವಿದ್ಯಾನಿಲಯದಲ್ಲಿ ತಾತ್ಕಾಲಿಕ ಆಧಾರದ ಮೇಲೆ ಮರುನೇಮಕ ಮಾಡಿಕೊಳ್ಳಲು ಪ್ರಸ್ತುತದಲ್ಲಿ ಸಾಧ್ಯವಿಲ್ಲವೆಂದು ಸಿಂಡಿಕೇಟ್ ತೀರ್ಮಾನಿಸಿತು. |

**2017/8.23** ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಚಾಲ್ತಿಯಲ್ಲಿರುವ ವಿವಿಧ ಅಧ್ಯಯನ ಪೀಠಗಳಲ್ಲಿ ಖಾಲಿ ಇರುವ ಸಂದರ್ಶಕ ಪ್ರಾಧ್ಯಾಪಕರುಗಳ ನೇಮಕಾತಿ ಮಾಡುವ ಬಗ್ಗೆ.

**ತೀರ್ಮಾನ:** ವಿಶ್ವವಿದ್ಯಾನಿಲಯದಲ್ಲಿನ ವಿವಿಧ ಪೀಠಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸಂದರ್ಶಕ ಪ್ರಾಧ್ಯಾಪಕರುಗಳ ಸೇವೆಯು ಪೂರ್ಣಗೊಂಡಿದ್ದು, ಸಂದರ್ಶಕ ಪ್ರಾಧ್ಯಾಪಕರ ನೇಮಕಾತಿ ಸಂಬಂಧ, ಈ ಕೆಳಕಂಡ ಪೀಠಗಳಿಗೆ ಸಂದರ್ಶಕ ಪ್ರಾಧ್ಯಾಪಕರನ್ನು ಅಧಿನಿಯಮಾನುಸಾರ ಒಂದು ವರ್ಷದ ಅವಧಿಗೆ ರೂ.8,000/-ಗಳ ಮಾಸಿಕ ಗೌರವಧನದೊಂದಿಗೆ ನೇಮಕ ಮಾಡಲು ಸಿಂಡಿಕೇಟ್ ನಿರ್ಣಯಿಸಿತು.

| ಕ್ರಸಂ | ಅಧ್ಯಯನ ಪೀಠಗಳ ಹೆಸರು | ಸಂದರ್ಶಕ ಪ್ರಾಧ್ಯಾಪಕರ ಹೆಸರು |
|---|---|---|
| 1 | ಸ್ವಾಮಿ ವಿವೇಕಾನಂದ ಅಧ್ಯಯನ ಪೀಠ | ಪ್ರೊ.ಬಿ.ಎನ್.ಶೇಷಗಿರಿರಾವ್ |
| 2 | ಡಾ.ಬಾಬು ಜಗಜೀವನರಾಂ ಅಧ್ಯಯನ ಪೀಠ | ಪ್ರೊ.ರಾಮರತನ್ |
| 3 | ನಾಲ್ವಡಿ ಕೃಷ್ಣರಾಜ ಒಡೆಯರ್ ಅಧ್ಯಯನ ಪೀಠ | ಪ್ರೊ.ಸುಗೀತ ಸುವರ್ಣ |
| 4 | ಕುವೆಂಪು ಕಾವ್ಯಾಧ್ಯಯನ ಪೀಠ | ಪ್ರೊ.ಸಿ.ಪಿ.ಸಿದ್ದಾಶ್ರಮ |
| 5 | ಗುಬ್ಬಿ ವೀರಣ್ಣ ಅಧ್ಯಯನ ಪೀಠ | ಶ್ರೀಮತಿ ಬಿ.ಜಯಶ್ರೀ |
| **6** | **ಟಿಪ್ಪು ಸುಲ್ತಾನ್ ಪೀಠ** | **ಪ್ರೊ. ಸೆಬಾಸ್ಟಿಯನ್ ಜೋಸೆಫ್** ನಿವೃತ ಪ್ರಾಧ್ಯಾಪಕರು ಇತಿಹಾಸ ಅಧ್ಯಯನ ವಿಭಾಗ |
| 7 | ಆರ್.ಎಂ.ವಿಶ್ವೇಶ್ವರಯ್ಯ ಪೀಠ | ಪ್ರೊ.ಎ.ಎಂ.ಎ.ಖಾದರ್ |
| 8 | ಡಾ.ಬಿ.ಆರ್.ಅಂಬೇಡ್ಕರ್ ಪೀಠ | ಶ್ರೀಎನ್.ವೆಂಕಟೇಶ್ |

ಮುಂದುವರೆದು, ಪ್ಲಾನಿಂಗ್ ಕಮೀಷನ್ ಅಧ್ಯಯನ ಪೀಠದಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುವ ಸಲುವಾಗಿ ಆಯ್ಕೆ ಮಾಡಲು ಮೂವರು ತಜ್ಞರ ಪಟ್ಟಿಯೊಂದಿಗೆ ಮರುಮಂಡಿಸಲು ಸಿಂಡಿಕೇಟ್ ತೀರ್ಮಾನಿಸಿತು.

**2017/8.24** ಕರ್ನಾಟಕ ರಾಜ್ಯ ಸಹಕಾರಿ ಮೀನುಗಾರಿಕೆ ಮಹಾಮಂಡಳಿ (ನಿ) ಮೈಸೂರು ಇವರು ಕುಕ್ಕರಹಳ್ಳಿ ಕೆರೆಯ ಮೀನು ಪಾಶುವಾರು ಗುತ್ತಿಗೆ ಹಕ್ಕನ್ನು ಬೇರೆಯವರಿಗೆ ಮರುಗುತ್ತಿಗೆ ನೀಡಿರುವ ಬಗ್ಗೆ.

**ತೀರ್ಮಾನ:** ಕರ್ನಾಟಕ ರಾಜ್ಯ ಸಹಕಾರಿ ಮೀನುಗಾರಿಕೆ ಮಹಾಮಂಡಳಿ (ನಿ), ಮೈಸೂರು ಇವರಿಗೆ ದಿನಾಂಕ 01-07-2014ರಿಂದ 30-06-2019ರವರೆಗೆ ಒಟ್ಟು 05 ವರ್ಷಗಳ ಅವಧಿಗೆ ನೀಡಿರುವ ಗುತ್ತಿಗೆಯನ್ನು ಮರುಗುತ್ತಿಗೆ ಮಾಡಲು ಬರುವುದಿಲ್ಲವಾದರೂ ಬೇರೊಬ್ಬರಿಗೆ ನೀಡಿರುವ ಕ್ರಮವನ್ನು ಹಾಗೂ ಈ ಬಗ್ಗೆ ಲೆಕ್ಕ ತನಿಖೆಯ ವೇಳೆಯಲ್ಲಿ ಆಡಿಟ್ ಆಕ್ಷೇಪಣೆಗೊಳಪಟ್ಟಿರುವುದನ್ನು ಗಮನಿಸಿದ ಸಿಂಡಿಕೇಟ್ ಸದರಿ ಒಪ್ಪಂದವನ್ನು ಅನೂರ್ಜಿತಗೊಳಿಸಲು ಹಾಗೂ ನಿಯಮಾನುಸಾರ ಕ್ರಮಕೈಗೊಳ್ಳಲು ತೀರ್ಮಾನಿಸಿತು.

ಮತ್ತು ಕುಕ್ಕರಹಳ್ಳಿ ಕೆರೆಯಲ್ಲಿ ಸಾಕಷ್ಟು ನೀರಿದ್ದು ಕೆರೆಯು ಒಣಗಿ ಬರಿದಾಗದೇ ಇರುವುದರಿಂದ 2016-17ನೇ ಸಾಲಿನ ಲೈಸೆನ್ಸ್ ಫೀ ಮನ್ನಾ ಮಾಡುವಂತೆ ಕೋರಿರುವ ಅವರ ಮನವಿಯನ್ನು ಸಹ ತಿರಸ್ಕರಿಸಲು ಸಿಂಡಿಕೇಟ್ ತೀರ್ಮಾನಿಸಿತು.

**2017/8.25** ಬಿ.ಎನ್. ಬಹದ್ದೂರ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸೈನ್ಸ್ ಅಧ್ಯಯನ ವಿಭಾಗಕ್ಕೆ ಶೈಕ್ಷಣಿಕ ಸ್ವಾಯತ್ತತೆಯನ್ನು ನೀಡುವ ಬಗ್ಗೆ.

**ತೀರ್ಮಾನ:** ಬಿ.ಎನ್. ಬಹದ್ದೂರ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸೈನ್ಸ್ ಅಧ್ಯಯನ ವಿಭಾಗಕ್ಕೆ ಶೈಕ್ಷಣಿಕ ಸ್ವಾಯತ್ತತೆಯನ್ನು ನೀಡುವ ಬಗ್ಗೆ ದಿನಾಂಕ 29-12-2016 ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಅನುಮೋದಿಸಿದ ಕರಡು ಅಧಿನಿಯಮವನ್ನು ಅನುಮೋದಿಸದೇ ವಿದ್ಯಾವಿಷಯಕ ಪರಿಷತ್ತು ಸಿಂಡಿಕೇಟ್‌ನ ಮರುಪರಿಶೀಲನೆಗೆ ಸಲ್ಲಿಸಲು ತೀರ್ಮಾನಿಸಿರುವ ಹಿನ್ನೆಲೆಯಲ್ಲಿ ಬಿ.ಎನ್. ಬಹದ್ದೂರ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸೈನ್ಸ್ ಅಧ್ಯಯನ ವಿಭಾಗಕ್ಕೆ ಶೈಕ್ಷಣಿಕ

| | |
|---|---|
| | ಸ್ವಾಯತ್ತತೆಯನ್ನು ನೀಡದಿರಲು ತೀರ್ಮಾನಿಸಿತು. ಹಾಗೂ ಸ್ವಾಯತ್ತತೆಯನ್ನು ನೀಡುವುದರಿಂದ ಶೈಕ್ಷಣಿಕವಾಗಿ ಉಂಟಾಗುವ ಅನುಕೂಲಗಳನ್ನು ಗಮನದಲ್ಲಿಟ್ಟುಕೊಂಡು ವಿಭಾಗೀಯ ಮಂಡಳಿಯಲ್ಲಿ (Departmental Council)ಚರ್ಚಿಸಿ ಒಂದು ಕ್ರಿಯಾಯೋಜನೆಯನ್ನು ರೂಪಿಸಿಕೊಂಡು ಅದರಂತೆ ಕ್ರಿಯಾಶೀಲವಾಗುವಂತೆ ವಿಭಾಗದ ಅಧ್ಯಕ್ಷರಿಗೆ ತಿಳಿಸಲು ಸಿಂಡಿಕೇಟ್ ನಿರ್ಣಯಿಸಿತು. |
| **2017/8.26** | ಯುಪಿಇ ಯೋಜನೆಯಲ್ಲಿ ಸಂಯೋಜಕರಾಗಿ ಕಾರ್ಯನಿರ್ವಹಿಸುತ್ತಿರುವ ಮೂರು ಜನ ಪ್ರಾಧ್ಯಾಪಕರುಗಳು British Library and Museum, London, UK ಇಲ್ಲಿಗೆ ಭೇಟಿ ನೀಡಲು ಅನುಮತಿ ನೀಡುವ ಬಗ್ಗೆ. |
| **ತೀರ್ಮಾನ:** | ಯುಪಿಇ ಯೋಜನೆಯಲ್ಲಿ ಸಂಯೋಜಕರಾಗಿ ಕಾರ್ಯನಿರ್ವಹಿಸುತ್ತಿರುವ ಮೂರು ಜನ ಪ್ರಾಧ್ಯಾಪಕರುಗಳು British Library and Museum, London, UKಇಲ್ಲಿಗೆ ಭೇಟಿ 10 ದಿನಗಳ ಕಾಲ ಭೇಟಿ ನೀಡುವ ಸಲುವಾಗಿ ತಲಾ ಒಬ್ಬರು ಪ್ರಾಧ್ಯಾಪಕರಿಗೆ ರೂ.1,75,000/–ರಂತೆ ಹಣಕಾಸಿನ ನೆರವನ್ನು ಕೋರಿ, ಸದರಿ ವೆಚ್ಚವನ್ನು ಯುಪಿಇ ಯೋಜನೆಯ "ನಿರ್ದಿಷ್ಟ ಸಂಶೋಧನಾ ಕ್ಷೇತ್ರ–2ರ ಒಟ್ಟಾರೆ ಅನುದಾನ ರೂ.500 ಕೋಟಿಗಳಲ್ಲಿ ಭರಿಸಲು ಅನುಮತಿಯನ್ನು ಕೋರಿರುವುದರ ಬಗ್ಗೆ ಸಭೆಯು ಚರ್ಚಿಸಿ, ಒಂದು ವಿಭಾಗಕ್ಕೆಆರ್ಥಿಕ ಸಹಾಯ ನೀಡಿದರೆ, ಯುಪಿಇ ಯೋಜನೆಯಡಿ ಇತರೆ ವಿಭಾಗಗಳಲ್ಲೂ ಸಹ ಹಣಕಾಸಿನ ನೆರವನ್ನು ಕೋರುವ ಸಂಭವವಿರುವುದರಿಂದ ಸದರಿರವರ ಕೋರಿಕೆಯನ್ನು **ಸಿಂಡಿಕೇಟ್ ತಿರಸ್ಕರಿಸಲು ತೀರ್ಮಾನಿಸಿತು.** |
| **2017/8.27** | ಮೈಸೂರು ವಿಶ್ವವಿದ್ಯಾನಿಲಯ ಮತ್ತು ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್ ನಡುವೆ ಆಗಿರುವ ಒಡಂಬಡಿಕೆಗಳ ಬಗ್ಗೆ. |
| **ತೀರ್ಮಾನ:** | ಮೈಸೂರು ವಿಶ್ವವಿದ್ಯಾನಿಲಯ ಮತ್ತು ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್ ನಡುವೆ ಮೈಸೂರು ವಿಶ್ವವಿದ್ಯಾನಿಲಯ ಅಮೃತ ಮಹೋತ್ಸವ ಕ್ರಿಕೆಟ್ ಕ್ರೀಡಾಂಗಣವನ್ನು ದಿನಾಂಕ 7–7–2011ರಂದು ಮೂಲ ಒಡಂಬಡಿಕೆಗೆ 23 ವರ್ಷಗಳಿಗೆ ಸಹಿ ಹಾಕಲಾಗಿದ್ದು ಒಡಂಬಡಿಕೆಯಲ್ಲಿನ 9ನೇ ಅಂಶವಾದ Events and Related Earningsನಲ್ಲಿ ವಿಧಿಸಿರುವ ಷರತ್ತುಗಳನ್ನು ಸ್ಪಷ್ಟವಾಗಿ ಉಲ್ಲಂಘನೆ ಮಾಡಿರುವುದಲ್ಲದೆ ವಿಶ್ವವಿದ್ಯಾನಿಲಯವನ್ನು ಈ ಎಲ್ಲಾ ಮಾಹಿತಿಗಳಿಂದ ಕತ್ತಲಲ್ಲಿಡಲಾಗಿರುವುದನ್ನು ಗಮನಿಸಿದ ಸಿಂಡಿಕೇಟ್ ಕಾನೂನು ಅಭಿಪ್ರಾಯ ಪಡೆದು ಲೀಗಲ್ ನೋಟಿಸ್ ನೀಡಿ ಒಪ್ಪಂದವನ್ನು ರದ್ದುಗೊಳಿಸಲು ಕ್ರಮಕೈಗೊಳ್ಳುವುದು ಹಾಗೂ ಯಾವುದೇ ವಾಣಿಜ್ಯಕರಣ ಆಸಕ್ತಿ ಇರುವ ಸಂಸ್ಥೆಗಳ ಜೊತೆ ವಿಶ್ವವಿದ್ಯಾನಿಲಯವು ಒಡಂಬಡಿಕೆಯನ್ನು ಮಾಡಿಕೊಳ್ಳುವಂತಿಲ್ಲವಾದ್ದರಿಂದ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ಪ್ರಕರಣ 3(4)ರ ಅನ್ವಯ ಉಲ್ಲಂಘನೆಯಾಗಿರುವುದರಿಂದ ಸರ್ಕಾರಕ್ಕೆ ಈ ಬಗೆಗೆ ನಿರ್ದೇಶನ ಕೋರಿ ಪತ್ರ ಬರೆಯಲು ಅದುವರೆಗೆ ಸೆಪ್ಟೆಂಬರ್ ಮೊದಲ ವಾರದಲ್ಲಿ ಹಮ್ಮಿಕೊಳ್ಳಲಾಗಿರುವ ಕೆಪಿಎಲ್ ಪಂದ್ಯಗಳಿಗೆ ಅನುಮತಿ ನೀಡಲು ಸಿಂಡಿಕೇಟ್ ತೀರ್ಮಾನಿಸಿತು.<br>ಮುಂದುವರೆದು, ಇಷ್ಟೆಲ್ಲಾ ಷರತ್ತುಗಳ ಉಲ್ಲಂಘನೆಯಾಗಿದ್ದರೂ ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಮತ್ತು ದೈಹಿಕ ಶಿಕ್ಷಕರಿಗೆ ಯಾವುದೇ ಕ್ರೀಡಾ ಚಟುವಟಿಕೆಗಳಿಗೆ ಅವಕಾಶ ಕಲ್ಪಿಸದೇ ಮಹಾರಾಜ ಕಾಲೇಜು ಮೈದಾನವನ್ನು ಸಹ ಕರ್ನಾಟಕ ಸರ್ಕಾರದ ಅನುಮೋದನೆ ಪಡೆಯದೇ ದಿನಾಂಕ 22–06–2015ರಂದು ಟರ್ಫ್ ಕ್ರಿಕೆಟ್ ಕ್ರೀಡಾಂಗಣವಾಗಿ ಮಾರ್ಪಡಿಸಲು ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್ ಇವರ ಜೊತೆ ಮಾಡಿಕೊಳ್ಳಲಾಗಿರುವ ಒಪ್ಪಂದವನ್ನು ರದ್ದುಗೊಳಿಸಲು ಕೂಡಲೇ ಅಗತ್ಯಕ್ರಮವಹಿಸುವಂತೆಯೂ ಸಿಂಡಿಕೇಟ್ ತೀರ್ಮಾನಿಸಿತು. |
| **2017/8.28** | 2017–18ನೇ ಶೈಕ್ಷಣಿಕ ಸಾಲಿನಿಂದ ಹಾಸನದ ಜ್ಞಾನಧಾರೆ ಪ್ರಥಮ ದರ್ಜೆ ಸಂಜೆ ಕಾಲೇಜನ್ನು ಮುಚ್ಚುವ ಬಗ್ಗೆ. |
| **ತೀರ್ಮಾನ:** | 2017–18ನೇ ಶೈಕ್ಷಣಿಕ ಸಾಲಿನಿಂದಹಾಸನದ ಜ್ಞಾನಧಾರೆ ಪ್ರಥಮ ದರ್ಜೆಸಂಜೆ ಕಾಲೇಜನ್ನು ಮುಚ್ಚಲು ಬೋಧಕ ಮತ್ತು ಬೋಧಕೇತರ ನೌಕರರ ಆಕ್ಷೇಪಣೆ ಇರುವುದಿಲ್ಲವೆಂಬ ಪತ್ರ ಮತ್ತು ಕಾಲೇಜಿನಆಡಳಿತ |

| | |
|---|---|
| | ಮಂಡಳಿಯು ನಿರ್ಣಯಿಸಿರುವ ದಾಖಲೆಗಳ ಪ್ರತಿಗಳನ್ನು ಪರಿಶೀಲಿಸಿದ ಸಿಂಡಿಕೇಟ್ ವಿಶ್ವವಿದ್ಯಾನಿಲಯ ಅಧಿನಿಯಮ 2000 ಪ್ರಕರಣ 65(2)&(3)ರಂತೆ ಸಂಯೋಜನೆಯನ್ನು ಹಿಂತೆಗೆದುಕೊಂಡು ಕಾಲೇಜನ್ನು ಮುಚ್ಚಲು ನಿಯಮಾನುಸಾರ ಅಗತ್ಯ ಕ್ರಮವಹಿಸಲು ಸಿಂಡಿಕೇಟ್ ಅನುಮೋದಿಸಿತು. |
| **2017/8.29** | ಮೈಸೂರು ವಿಶ್ವವಿದ್ಯಾನಿಲಯದ ವಸತಿಗೃಹಗಳ ಹಂಚಿಕೆ ಬಗ್ಗೆ. |
| **ತೀರ್ಮಾನ:** | ಮೈಸೂರು ವಿಶ್ವವಿದ್ಯಾನಿಲಯದ ವಸತಿಗೃಹಗಳ ಹಂಚಿಕೆಯ ಬಗ್ಗೆ ಸಭೆಯು ಸುದೀರ್ಘವಾಗಿ ಚರ್ಚಿಸಿ, ಈ ಕೆಳಕಂಡಂತೆ ತೀರ್ಮಾನಗಳನ್ನು ಕೈಗೊಂಡಿತು.<br>1. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಉದ್ಯೋಗಿಗಳಿಗೆ 15 ದಿವಸಗಳ ಗಡುವು ನೀಡಿ ವಸತಿಗೃಹವನ್ನು ಖಾಲಿ ಮಾಡಿಸಲು ಹಾಗೂ ವಸತಿಗೃಹದ ಲೈಸೆನ್ಸ್ ಶುಲ್ಕ ಬಾಕಿ ಇದ್ದಲ್ಲಿ ಪರಿಶೀಲಿಸಿ, ಕೂಡಲೇ ಬಾಕಿ ವಸೂಲಿಗೆ ಕ್ರಮ ಕೈಗೊಳ್ಳುವುದು.<br>2. ಖಾಲಿ ಮಾಡಿಸಿದ ನಂತರ ವರದಿ ಪಡೆದು ವಿಶ್ವವಿದ್ಯಾನಿಲಯದಲ್ಲಿನ ವಸತಿಗೃಹಗಳನ್ನು ನಿಯಮಾನುಸಾರ ಅರ್ಹ ಖಾಯಂ ಉದ್ಯೋಗಿಗಳಿಗೆ ಜೇಷ್ಠತೆಯ ಅನುಸಾರ ಹಂಚಲು ಅರ್ಹರಿಂದ ಬೇಡಿಕೆಯಿಲ್ಲದಿದ್ದ ಪಕ್ಷದಲ್ಲಿ ಒಂದು ಮಾರ್ಗಸೂಚಿಯನ್ನು ರಚಿಸಿ ಅದರಂತೆ ಜ್ಯೇಷ್ಠತೆ, ಹುದ್ದೆ ಹಾಗೂ ವೇತನಶ್ರೇಣಿಗನುಗುಣವಾಗಿ ಖಾಯಂ ಉದ್ಯೋಗಿಗಳಿಗೆ ಹಂಚಿಕೆ ಮಾಡಲು ಕ್ರಮವಹಿಸುವುದು.<br>3. ಮಾರ್ಗಸೂಚಿಯನ್ನು ರಚಿಸಿ ಅದರಂತೆ ವಿಶ್ವವಿದ್ಯಾನಿಲಯದಲ್ಲಿನ ತಾತ್ಕಾಲಿಕ ಅಧ್ಯಾಪಕ/ಅಧ್ಯಾಪಕೇತರ ಉದ್ಯೋಗಿಗಳಿಗೆ ವಸತಿಗೃಹಗಳನ್ನು 6 ತಿಂಗಳಿಗೆ ಮಾತ್ರ ಎಂದು ಷರತ್ತನ್ನು ವಿಧಿಸಿ ಅವರಿಗೆ ಆದೇಶವನ್ನು ನೀಡುವುದು. |
| **2017/8.30** | ಹೊಸದಾಗಿ ಆರಂಭಗೊಂಡಿರುವ ಐದು ಸ್ನಾತಕೋತ್ತರ ಅಧ್ಯಯನ ವಿಭಾಗಗಳಾದ Genetics & Genomics, Molecular Biology, Organic Chemistry, Public Administration &School of Lawಗೆ ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಬಗ್ಗೆ. |
| **ತೀರ್ಮಾನ:** | ಮುಂದೂಡಲಾಯಿತು. |
| **2017/8.31** | ಮೈಸೂರು ವಿಶ್ವವಿದ್ಯಾನಿಲಯದ 103 ಉದ್ಯೋಗಿಗಳಿಗೆ ಡಿಸೆಂಬರ್ 2007 ಮಾಹೆಯಿಂದ ಜನವರಿ 2013 ಮಾಹೆಯವರೆಗೆ ವೇತನ ವ್ಯತ್ಯಾಸದ ಬಾಕಿಯನ್ನು ಪಾವತಿಸುವ ಬಗ್ಗೆ. |
| **ತೀರ್ಮಾನ:** | ಮೈಸೂರು ವಿಶ್ವವಿದ್ಯಾನಿಲಯದ 103 ಉದ್ಯೋಗಿಗಳಿಗೆ ಡಿಸೆಂಬರ್ 2007 ಮಾಹೆಯಿಂದ ಜನವರಿ 2013 ಮಾಹೆಯವರೆಗೆ ವೇತನ ವ್ಯತ್ಯಾಸದ ಬಾಕಿಯನ್ನು ಪಾವತಿಸುವ ಬಗ್ಗೆ ಸಭೆಯು ಸುಧೀರ್ಘವಾಗಿ ಚರ್ಚಿಸಿ, ಸದರಿ ಉದ್ಯೋಗಿಗಳಿಗೆ ಸರ್ಕಾರವು ಖಾಯಂ ಮಾಡುವುದರ ಬಗೆಗೆ ಸ್ಪಷ್ಟ ಮಾಹಿತಿ ನೀಡಿಲ್ಲವಾದ್ದರಿಂದ, 103 ಉದ್ಯೋಗಿಗಳು ಡಿಸೆಂಬರ್ 2007ರ ಮಾಹೆಯಿಂದ ಜನವರಿ 2013ರ ಮಾಹೆಯವರೆಗೆ ಒಟ್ಟು 62 ತಿಂಗಳ ವೇತನ ಬಾಕಿಯನ್ನು ಪಾವತಿಸುವಂತೆ ಕೋರಿರುವುದನ್ನು ಸಭೆಯು ಗಂಭೀರವಾಗಿ ಪರಿಗಣಿಸಿ, ಸದರಿ ಉದ್ಯೋಗಿಗಳಿಗೆ ಒಟ್ಟು 62 ತಿಂಗಳ ಬಾಕಿಯನ್ನು ಪಾವತಿಸಲು ಬರುವುದಿಲ್ಲವೆಂದು ಹಾಗೂ ಇಂತಹ ಉದ್ಯೋಗಿಗಳಿಗೆ ಕಾಲ್ಪನಿಕ ವೇತನವನ್ನು (Notional Fixation) ನೀಡಿರುವುದನ್ನು ಪರಿಶೀಲಿಸಲು ನಿರ್ಧರಿಸಿತು. ಮತ್ತು ಸಂಚಿತ ವೇತನ ಪಡೆಯುತ್ತಿದ್ದ ದಿನದಿಂದ 2013ರಲ್ಲಿ ಖಾಯಂಗೊಳಿಸಿದ ದಿನಾಂಕದವರೆಗೆ ಕಾಲ್ಪನಿಕವಾಗಿ ನೀಡಲಾಗಿರುವ ವೇತನ ಬಡ್ತಿಗಳನ್ನು ನಿಯಮಾನುಸಾರ ನೀಡಲಾಗಿದೆಯೇ ಇಲ್ಲದಿದ್ದಲ್ಲಿ ಈ ಬಗೆಗಿನ ವೇತನ ವ್ಯತ್ಯಾಸದ ವಿವರಗಳ ವರದಿಯನ್ನು ಸಿದ್ಧಪಡಿಸಿ ಮುಂದಿನ ಸಿಂಡಿಕೇಟ್‌ಗೆ ಮಂಡಿಸಲು ತೀರ್ಮಾನಿಸಿತು. |
| **2017/8.32** | ಶರಣ ಸಾಹಿತ್ಯ (ಸ್ನಾತಕೋತ್ತರ) ಅಧ್ಯಯನ ಮಂಡಳಿಯನ್ನು ಹೊಸದಾಗಿ ರಚಿಸುವ ಬಗ್ಗೆ. |
| **ತೀರ್ಮಾನ:** | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 33ರ ಪ್ರಕಾರ ರಚಿಸಿರುವ ಅಧಿನಿಯಮದ ಪ್ರಕಾರ, ಸಿಂಡಿಕೇಟ್ ಮೂರು ವರ್ಷದ ಅವಧಿಗೆ ಶ್ರೀ ಬಸವೇಶ್ವರ ಸಾಮಾಜಿಕ ಪರಿಷ್ಕರಣ, ಸಂಶೋಧನೆ ಮತ್ತು ವಿಸ್ತರಣಾ ಕೇಂದ್ರದ ವತಿಯಿಂದ ಸ್ನಾತಕೋತ್ತರ ತರಗತಿಗಳಲ್ಲಿ ಅಧ್ಯಯನ ಮಾಡುತ್ತಿರುವ ಎಲ್ಲಾ ವಿಷಯಗಳ ಅಭ್ಯರ್ಥಿಗಳಿಗೆ "ಶರಣ ಸಾಹಿತ್ಯ" ವನ್ನು ಒಂದು ಮುಕ್ತ ಐಚ್ಛಿಕ ವಿಷಯ(Open Electives)ವಾಗಿ ಅಧ್ಯಯನ ಮಾಡುವ ಸಂಬಂಧ ಪಠ್ಯಕ್ರಮವನ್ನು ಸಿದ್ದಪಡಿಸಲು **ಈ ಕೆಳಕಂಡಂತೆ** "ಶರಣ ಸಾಹಿತ್ಯ" ಸ್ನಾತಕೋತ್ತರ ಅಧ್ಯಯನ ಮಂಡಳಿಯನ್ನು |

| | |
|---|---|
| | ರಚಿಸಲು ಸಿಂಡಿಕೇಟ್ ಅನುಮೋದಿಸಿತು.<br><br>(1) ಡಾ. ಪ್ರೀತಿ ಶ್ರೀಮಂಧರ್‌ಕುಮಾರ್<br>ನಿರ್ದೇಶಕರು<br>ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ<br>ಮಾನಸಗಂಗೋತ್ರಿ, ಮೈಸೂರು<br>(2) ಡಾ. ಚಂದ್ರಶೇಖರಯ್ಯ<br>ಸಂದರ್ಶಕ ಪ್ರಾಧ್ಯಾಪಕರು<br>ಶ್ರೀ ಬಸವೇಶ್ವರ ಸಾಮಾಜಿಕ ಪರಿಷ್ಕರಣ, ಸಂಶೋಧನೆ ಮತ್ತು ವಿಸ್ತರಣಾ ಕೇಂದ್ರ<br>ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ<br>ಮಾನಸಗಂಗೋತ್ರಿ, ಮೈಸೂರು<br>(3) ಡಾ. ಎನ್.ಎಂ.ತಳವಾರ್<br>ಪ್ರಾಧ್ಯಾಪಕರು<br>ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ<br>ಮಾನಸಗಂಗೋತ್ರಿ, ಮೈಸೂರು<br>(4) ಡಾ. ಅರವಿಂದ ಮಾಲಗತ್ತಿ<br>ಪ್ರಾಧ್ಯಾಪಕರು,<br>ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ<br>ಮಾನಸಗಂಗೋತ್ರಿ, ಮೈಸೂರು<br>(5) ಡಾ. ವಿಜಯಕುಮಾರಿ ಎಸ್.ಕರಿಕಲ್<br>ಸಹ ಪ್ರಾಧ್ಯಾಪಕರು<br>ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ<br>ಮಾನಸಗಂಗೋತ್ರಿ, ಮೈಸೂರು<br>(6) ಡಾ. ಪಿ.ಆರ್.ಹರಿನಾಥ್<br>ತೆಲುಗು ಪ್ರಾಧ್ಯಾಪಕರು<br>ರಿಜಿನಲ್ ಇನ್‌ಸ್ಟಿಟ್ಯೂಟ್ ಆಫ್ ಎಜುಕೇಷನ್<br>ಮಾನಸಗಂಗೋತ್ರಿ, ಮೈಸೂರು<br>(7) ಡಾ. ತಮಿಳ್ ಶೆಲ್ವಿ<br>ಕನ್ನಡ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು<br>ಕನ್ನಡ ವಿಭಾಗ, ಮದ್ರಾಸ್ ವಿಶ್ವವಿದ್ಯಾನಿಲಯ<br>ಮರೀನಾ ಕ್ಯಾಂಪಸ್<br>ಚೆನ್ನೈ – 600 005<br>(8) ಡಾ. ಹೆಚ್.ಟಿ.ಶೈಲಜಾ<br>ಕನ್ನಡ ಪ್ರಾಧ್ಯಾಪಕರು<br>ಸ್ನಾತಕೋತ್ತರ ವಿಭಾಗ<br>ಜೆ.ಎಸ್.ಎಸ್. ಕಲಾ ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು<br>ಊಟಿ ರಸ್ತೆ, ಮೈಸೂರು<br>(9) ಡಾ. ಕೆ. ರವೀಂದ್ರನಾಥ್<br>ಮುಖ್ಯಸ್ಥರು<br>ಹಸ್ತಪ್ರತಿಶಾಸ್ತ್ರ ವಿಭಾಗ<br>ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ<br>ಹಂಪಿ, ಬಳ್ಳಾರಿ. |

| | |
|---|---|
| **2017/8.33** | ಡಾ. ಬಾಬು ಜಗಜೀವನರಾಮ್ ಅಧ್ಯಯನ ಸಂಶೋಧನಾ ವಿಸ್ತರಣ ಕೇಂದ್ರದಲ್ಲಿ ತಾತ್ಕಾಲಿಕ ಸಂಶೋಧನಾ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿರುವ ಡಾ. ಎಂ. ಶ್ರೀನಿವಾಸಮೂರ್ತಿ ಇವರ ಏಪ್ರಿಲ್ 2016ರಿಂದ ಈವರೆವಿಗಿನ ವೇತನ ಬಿಡುಗಡೆ ಹಾಗೂ ಮುಂದೆ ನಿರಂತರವಾಗಿ ವೇತನ ಪಾವತಿಸುವ ಸಂಬಂಧ ಅನುಮತಿ ನೀಡುವ ಬಗ್ಗೆ. |
| **ತೀರ್ಮಾನ:** | ಡಾ. ಎಂ.ಶ್ರೀನಿವಾಸಮೂರ್ತಿ, ತಾತ್ಕಾಲಿಕ ಸಂಶೋಧನಾ ಅಧಿಕಾರಿ, ಇವರ ವೇತನ ಪಾವತಿ ಬಗ್ಗೆ ಚರ್ಚಿಸಿದ ಸಿಂಡಿಕೇಟ್ ವಿಶ್ವವಿದ್ಯಾನಿಲಯದ ಧನಸಹಾಯ ಆಯೋಗವು ಡಿಸೆಂಬರ್ 2006ರಲ್ಲಿ 10ನೇ ಯೋಜನಾ ಅವಧಿಯಲ್ಲಿ ಒಮ್ಮೆಗೆ ಮಾತ್ರ ಅನ್ವಯವಾಗುವಂತೆ ಅನುದಾನ ಮಂಜೂರು ಮಾಡಿದ್ದು ಅದರ ಯೋಜನಾ ಅವಧಿಯು ಈಗಾಗಲೇ ಮುಗಿದಿರುತ್ತದೆ. ಮತ್ತು ತದನಂತರದಲ್ಲಿ ಸದರಿಯವರನ್ನು ವಿಶ್ವವಿದ್ಯಾನಿಲಯದಿಂದ ಮರುನೇಮಕಮಾಡಿಕೊಂಡು ಏಪ್ರಿಲ್ 2016ರಿಂದ ಇದುವರೆವಿಗೆ ಸಂಬಳ ನೀಡದಿರುವುದನ್ನು ಗಮನಿಸಿತು.<br>ಸದರಿ ಕೇಂದ್ರದ (ಪೀಠ) ಚಟುವಟಿಕೆಗಳಿಗೆ ಮೇ 2017ರಂದು ಕರ್ನಾಟಕ ಸರ್ಕಾರವು ಮಂಜೂರು ಮಾಡಿರುವ 2.00 ಕೋಟಿ ಹಣವನ್ನು ಬ್ಯಾಂಕಿನಲ್ಲಿ ಠೇವಣಿ ಇರಿಸಿ ಬರುವ ಬಡ್ಡಿಯ ಹಣದಲ್ಲಿ ಸದರಿ ಕೇಂದ್ರವು ಸರ್ಕಾರಕ್ಕೆ ಸಲ್ಲಿಸಲಾಗುತ್ತಿರುವ ಪ್ರಸ್ತಾವನೆಯಲ್ಲಿ ನಿಗದಿಗೊಳಿಸಿರುವಂತೆ ಸಂಚಿತ ವೇತನ ನಿಗಧಿಪಡಿಸಿ ಸರ್ಕಾರ ಪ್ರಸ್ತಾವನೆಯನ್ನು ಅನುಮೋದಿಸಿದ ದಿನದಿಂದ ತಾತ್ಕಾಲಿಕ ಸಂಶೋಧನಾ ಅಧಿಕಾರಿಯನ್ನಾಗಿ ಸಂಚಿತವೇತನದಲ್ಲಿ ನೇಮಿಸಿಕೊಳ್ಳುವ ಸಂಬಂಧ ಪರಿಷ್ಕೃತ ಆದೇಶ ನೀಡಲು ಸಿಂಡಿಕೇಟ್ ಅನುಮೋದಿಸಿತು.<br>ಹಾಗೂ ಯು.ಜಿ.ಸಿ.ಯಿಂದ ಬಿಡುಗಡೆಯಾದ ಹಾಗೂ ಬಿಡುಗಡೆಯಾಗಬೇಕಾಗಿರುವ ಬಗೆಗಿನ ಬಳಕೆ ಪ್ರಮಾಣಪತ್ರ, ವೆಚ್ಚಪಟ್ಟಿ ಹಾಗೂ ವರದಿಯನ್ನು ಸಲ್ಲಿಸುವಂತೆ ಕೇಂದ್ರದ ನಿರ್ದೇಶಕರಿಗೆ ತಿಳಿಸಿ ಇವೆಲ್ಲವನ್ನು ಸಲ್ಲಿಸಿದ ನಂತರ ಏಪ್ರಿಲ್ 2016ರಿಂದ ಇದುವರೆಗೆ ನೀಡಬೇಕಾಗಿರುವ ವೇತನದ ಬಗ್ಗೆ ಪರಿಶೀಲಿಸಬಹುದಾಗಿದೆಯೆಂದು ಸಿಂಡಿಕೇಟ್ ತೀರ್ಮಾನಿಸಿತು. |
| **2017/8.34** | ವ್ಯವಹಾರ ಆಡಳಿತ ಆಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಿಸುವ ಬಗ್ಗೆ. |
| **ತೀರ್ಮಾನ:** | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಕಾಯ್ದೆಯ ಪ್ರಕರಣ 34(7)ರ ಪ್ರಕಾರ, ವ್ಯವಹಾರ ಆಡಳಿತ ಅಧ್ಯಯನ ವಿಭಾಗಕ್ಕೆ 2 ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಡಾ. ಮಹೇಶ್‌ರವರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡುವ ಕ್ರಮವನ್ನು ಸಿಂಡಿಕೇಟ್ ಅನುಮೋದಿಸಿತು. |
| **2017/8.35** | ವಿಶ್ವವಿದ್ಯಾನಿಲಯದ ಪಟ್ಟಿಯಲ್ಲಿರುವ ಸ್ಥಳೀಯ ವಕೀಲರುಗಳಿಗೆ ಪಾವತಿಸುತ್ತಿರುವ ರಿಟೇನರ್ ಫೀ ಮಾಹೆಯಾನ ರೂ 3,000/- (ರೂಪಾಯಿ ಮೂರು ಸಾವಿರ ಮಾತ್ರ) ಮುಂದುವರೆಸುವ/ಸ್ಥಗಿತಗೊಳಿಸುವ ಬಗ್ಗೆ. |
| **ತೀರ್ಮಾನ:** | ನಿವೃತ್ತ ಜಿಲ್ಲಾ ನ್ಯಾಯಾಧೀಶರರೊಬ್ಬರನ್ನು ವಿಶ್ವವಿದ್ಯಾನಿಲಯಕ್ಕೆ ಕಾನೂನು ಸಲಹೆಗಾರರನ್ನಾಗಿ ನೇಮಕ ಮಾಡಿಕೊಳ್ಳಲು ನಿರ್ಧರಿಸಿರುವ ಹಿನ್ನೆಲೆಯಲ್ಲಿ, ತಕ್ಷಣದಿಂದಲೇ ಜಾರಿಗೆ ಬಂದಂತೆ ಸ್ಥಳೀಯ ವಕೀಲರುಗಳಿಗೆ ನೀಡುತ್ತಿರುವ ರಿಟೇನರ್ ಫೀ ರೂ.3,000/- ಅನ್ನು ಹಿಂಪಡೆಯಲು ಸಿಂಡಿಕೇಟ್ ತೀರ್ಮಾನಿಸಿತು. |
| **2017/8.36** | ನಿವೃತ್ತ ಜಿಲ್ಲಾ ನ್ಯಾಯಾಧೀಶರನ್ನು ವಿಶ್ವವಿದ್ಯಾನಿಲಯಕ್ಕೆ ಕಾನೂನು ಸಲಹೆಗಾರರನ್ನಾಗಿ ನೇಮಿಸಿಕೊಳ್ಳುವ ಬಗ್ಗೆ. |
| **ತೀರ್ಮಾನ:** | ನಿವೃತ್ತ ಜಿಲ್ಲಾ ನ್ಯಾಯಾಧೀಶರುಗಳಲ್ಲಿ ಒಬ್ಬರನ್ನು ವಿಶ್ವವಿದ್ಯಾನಿಲಯಕ್ಕೆ ಕಾನೂನು ಸಲಹೆಗಾರರನ್ನಾಗಿ ನೇಮಕ ಮಾಡಿಕೊಳ್ಳಲು ಪತ್ರಿಕಾ ಪ್ರಕಟಣೆ ನೀಡಿ ಅರ್ಜಿ ಆಹ್ವಾನಿಸಲಾಗಿದ್ದು, ಮೂವರು ತಮ್ಮ ಸ್ವವಿವರದೊಂದಿಗೆ ಸಲ್ಲಿಸಿರುವ ಅರ್ಜಿಗಳ ಕ್ರೂಢೀಕೃತ ಪಟ್ಟಿಯನ್ನು ಪರಿಶೀಲಿಸಿದ ಸಿಂಡಿಕೇಟ್ ಅರ್ಹರನ್ನು ಒಂದು ವರ್ಷದ ಅವಧಿಗೆ ಅಥವಾ ವಿಶ್ವವಿದ್ಯಾನಿಲಯದ ಮುಂದಿನ ಆದೇಶದವರೆಗೆ ಸೂಕ್ತ ಸಂಭಾವನೆಯೊಂದಿಗೆ ಕುಲಸಚಿವರೊಡನೆ ಚರ್ಚಿಸಿ ನೇಮಕ ಮಾಡಿಕೊಳ್ಳುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲು ಸಿಂಡಿಕೇಟ್ ತೀರ್ಮಾನಿಸಿತು. |

| | |
|---|---|
| **2017/8.37** | ಮೈಸೂರು ವಿಶ್ವವಿದ್ಯಾನಿಲಯದ ವಕೀಲರುಗಳ ಪಟ್ಟಿಯಲ್ಲಿ ಹೆಸರನ್ನು ಸೇರ್ಪಡಿಸುವ ಬಗ್ಗೆ. |
| **ತೀರ್ಮಾನ:** | ಶ್ರೀಕೆ.ಎಸ್.ಮಹಾದೇವ ಪ್ರಸಾದ್, ವಕೀಲರು, ಮೈಸೂರು ಇವರನ್ನು ಮೈಸೂರು ವಿಶ್ವವಿದ್ಯಾನಿಲಯದ ವಕೀಲರುಗಳ ಪಟ್ಟಿಯಲ್ಲಿ ಸೇರಿಸಲು ಸಿಂಡಿಕೇಟ್ ಅನುಮೋದಿಸಿತು. |
| **2017/8.38** | The Syndicate resolution dated 22-06-2017 regarding MoU between the Centre for Geoinformatics Technology, UOM with HERE Solution India Pvt,Ltd., Mumbai and Sai Sakthi Global Infira Surver Pvt. Ltd., Chennai. |
| **ತೀರ್ಮಾನ:** | The Centre for Geoinformatics Technology, UOM ಇವರು HERE Solution India Pvt. Ltd., Mumbai and Sai Sakthi Global Infira Surver Pvt. Ltd., Chennai ಒಡಂಬಡಿಕೆ ಮಾಡಿಕೊಂಡಿರುವುದನ್ನು ಸಿಂಡಿಕೇಟ್ ಅನುಮೋದಿಸಿತು. ಹಾಗೂ ಮುಂದಿನ ಶೈಕ್ಷಣಿಕ ವರ್ಷದಲ್ಲಿ ವ್ಯಾಪಕವಾಗಿ ಮಾಹಿತಿ ನೀಡಿ ಅಧಿಸೂಚನೆ ಮೂಲಕ ಆಹ್ವಾನಿಸಿ ಸೂಕ್ತವಾದವರೊಡನೆ ವಿಶ್ವವಿದ್ಯಾನಿಲಯದ ಅನುಮೋದನೆಯೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲು ಸಹ ಸಿಂಡಿಕೇಟ್ ತೀರ್ಮಾನಿಸಿತು. |
| **2017/8.39** | 2016–2017ನೇ ಸಾಲಿನ ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕ ಪತ್ರಗಳು. |
| **ತೀರ್ಮಾನ:** | ವಿಶ್ವವಿದ್ಯಾನಿಲಯದ 2016–17ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ಸಿಂಡಿಕೇಟ್ ಅನುಮೋದಿಸಿತು. |
| **2017/8.40** | ವಿಶ್ವವಿದ್ಯಾನಿಲಯದ ಬ್ಯಾಂಕ್ ಖಾತೆಗಳ ನಿರ್ವಹಣೆಯನ್ನು ಕರ್ನಾಟಕ ಸರ್ಕಾರದ ಆದೇಶದನುಸಾರ ಮತ್ತು ಮಾರ್ಗಸೂಚಿಗಳನ್ವಯ ನಿರ್ವಹಿಸುವ ಬಗ್ಗೆ. |
| **ತೀರ್ಮಾನ:** | ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 5 ಟಿಎಆರ್ 2017 ದಿನಾಂಕ 30–01–2017ರ ಆದೇಶಾನುಸಾರ ಕರ್ನಾಟಕ ರಾಜ್ಯ ಸರ್ಕಾರದ ಇಲಾಖೆ, ಸ್ಥಳೀಯ ಸಂಸ್ಥೆ, ಪ್ರಾಧಿಕಾರಗಳು, ಮಂಡಳಿಗಳು, ಸಂಘಗಳು, ವಿಶ್ವವಿದ್ಯಾನಿಲಯಗಳು ಮತ್ತು ರಾಜ್ಯದ ಇತರೆ ಸ್ವಾಯತ್ತ ಸಂಸ್ಥೆಗಳು ಸರ್ಕಾರದ ನಿಧಿ/ಅನುದಾನಗಳನ್ನು ಬ್ಯಾಂಕ್ ಖಾತೆಯ ಮೂಲಕ ನಿರ್ವಹಿಸಲು ಮಾರ್ಗಸೂಚಿಗಳನ್ನು ಹೊರಡಿಸಿರುವುದರಿಂದ, ಸರ್ಕಾರದ ಮಾರ್ಗಸೂಚಿಗಳನ್ನು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅನುಷ್ಠಾನಗೊಳಿಸುವ ವಿಷಯವನ್ನು ಸಿಂಡಿಕೇಟ್ ಅನುಮೋದಿಸಿತು. |
| **2017/8.41** | ಮೈಸೂರು ವಿಶ್ವವಿದ್ಯಾನಿಲಯದ ಔಟ್‌ರೀಚ್ ಮತ್ತು ಸ್ಪೆಷಲೈಜ್ಡ್ ಪ್ರೋಗ್ರಾಂಗಳ ಬಗ್ಗೆ. |
| **ತೀರ್ಮಾನ:** | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಆನ್‌ಲೈನ್, ಔಟ್‌ರೀಚ್ ಮತ್ತು ಸ್ಪೆಷಲೈಜ್ಡ್ ಪ್ರೋಗ್ರಾಂಗಳನ್ನು ಮುಂದುವರೆಸಬೇಕೆ ಅಥವಾ ಬೇಡವೇ ಎಂಬುದರ ಬಗ್ಗೆ ಸಭೆಯು ಕೂಲಂಕಷವಾಗಿ ಚರ್ಚಿಸಿ<br>1. ಅಧಿನಿಯಮಗಳನುಸಾರ ಈಗಾಗಲೇ ಚಾಲ್ತಿಯಲ್ಲಿರುವ ಸ್ಪೆಷಲೈಜ್ಡ್ ಪ್ರೋಗ್ರಾಂಗಳನ್ನು ಮುಂದುವರೆಸಲು;<br>2. ಆನ್‌ಲೈನ್ ಕೋರ್ಸ್‌ಗಳನ್ನು ಸಹ ಕೂಡಲೇ ಸ್ಥಗಿತಗೊಳಿಸಲು;<br>3. 2017–18ನೇ ಸಾಲಿನಿಂದ ಮೈಸೂರು ವಿಶ್ವವಿದ್ಯಾನಿಲಯದ ಯಾವುದೇ ಔಟ್‌ರೀಚ್ ಕೋರ್ಸುಗಳನ್ನು ವಿಶ್ವವಿದ್ಯಾನಿಲಯದ ಭೌಗೋಳಿಕ ವ್ಯಾಪ್ತಿಯನ್ನು ಮೀರಿ ಪ್ರಾರಂಭಿಸದಿರಲು ಹಾಗೂ ವಿದ್ಯಾರ್ಥಿಗಳ ಪ್ರವೇಶಕ್ಕೆ ಅವಕಾಶ ಕಲ್ಪಿಸದೇ ಇರಲು;<br>4. 2016–17ನೇ ಸಾಲಿನಲ್ಲಿ ಈಗಾಗಲೇ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ವಿಶ್ವವಿದ್ಯಾನಿಲಯಗಳ ನಿಯಮಾನುಸಾರ ನಿರ್ದಿಷ್ಟ ಅವಧಿಯವರೆಗೆ ಅಂತಹ ವಿಷಯಗಳ ಕೋರ್ಸುಗಳನ್ನು ಮಾತ್ರ ಮುಂದುವರೆಸಲು;<br>5. ಸರ್ಕಾರದ ನಿರ್ದೇಶನದಂತೆ ಹಾಲಿ ಇರುವ ಪರಿನಿಯಮಾವಳಿಗಳನ್ನು Repeal ಮಾಡುವ ಬಗ್ಗೆ ಕ್ರಮ ಕೈಗೊಳ್ಳಲು;<br>6. ಆಂತರೀಕ ಸಂಪನ್ಮೂಲಗಳನ್ನು ವೃದ್ಧಿಸುವ ದೃಷ್ಟಿಯಿಂದ ರಾಜ್ಯದ ಇತರೆ ವಿಶ್ವವಿದ್ಯಾನಿಲಯಗಳಿಗೆ ಅನುಮತಿ ನೀಡಿರುವಂತೆ ದೂರಶಿಕ್ಷಣ(Distance Education Programme)ವನ್ನು ಪ್ರಾರಂಭಿಸಲು ಮೈಸೂರು ವಿಶ್ವವಿದ್ಯಾನಿಲಯಕ್ಕೂ ಅನುಮತಿ ನೀಡುವಂತೆ ಕೋರಿ ಈ ಸಂಬಂಧ ಅಧಿನಿಯಮ ರಚಿಸಿ ಸರ್ಕಾರದ ಶಿಫಾರಸ್ಸಿನೊಂದಿಗೆ ಕುಲಾಧಿಪತಿಗಳ ಅಂಕಿತಕ್ಕಾಗಿ ಸೂಕ್ತ ಪ್ರಸ್ತಾವನೆಯನ್ನು ಸಲ್ಲಿಸಲು ಸಿಂಡಿಕೇಟ್ ತೀರ್ಮಾನಿಸಿತು. |

**2017/8.42** M.Tech in Urban Regional Planning (PG) and Architecture and Urban Design (UG & PG)ಅಧ್ಯಯನ ಮಂಡಳಿಗಳನ್ನು ಪುನರ್‌ರಚಿಸುವ ಬಗ್ಗೆ.

**ತೀರ್ಮಾನ:** ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 33ರ ಪ್ರಕಾರ ರಚಿಸಿರುವ ಅಧಿನಿಯಮದ ಪ್ರಕಾರ, ಸಿಂಡಿಕೇಟ್ ಮೂರು ವರ್ಷದ ಅವಧಿಗೆ M.Tech in Urban Regional Planning (PG) and Architecture and Urban Design (UG & PG)ಅಧ್ಯಯನ ಮಂಡಳಿಗಳನ್ನು ಈ ಕೆಳಗಿನಂತೆ ಪುನರ್‌ರಚಿಸಲು ಸಿಂಡಿಕೇಟ್ ಅನುಮೋದಿಸಿತು.

| | |
|---|---|
| 1. Dr. Nagendra H.N.<br>Director<br>School of Planning and Architecture,<br>Manasagangotri<br>MYSORE – 570 006 | 2. Dr. Jagdish Singh<br>Professor<br>Department of Architecture and Planning, Maulana Azad National Institute of technology (MANIT),<br>Bhopal, M.P. India Pin-462003 |
| 3. Prof. Karamjit Singh Chahal<br>Professor, Department of Architecture, Guru Ramadas School of Planning and Architecture, Guru Nanak dev University, Aritsar<br>Panjab – 143001 | 4. Dr. D.S.Guru<br>Professor and Chairman<br>Department of Studies in Computer Science<br>Manasagangotri, University of Mysore, Mysuru – 570 006. |
| 5. Prof. M.N.Chandrasekhar<br>Dean SJB School of Architecture and Planning<br>BGS Health and Education City<br>Uttarahalli Main Road, Kengeri,<br>Bengaluru – 560 060 | 6. Dr. Vimalaswamy<br>Professor,<br>School of Architecture<br>REVA University, Rukmini Knowledge Park, Kattigenahalli<br>Yelahanka, Bengaluru – 560 078 |
| 7. Dr. Rama R.Subramanian<br>Professor & HOD<br>School of Architecture<br>Dayananda Sagar Institutions<br>Shavige Malleswara Hills<br>Kumaraswamy Layout<br>Bengaluru – 560 078 | 8. Dr. Amrutha<br>Director, Nehru School of Architecture, 451-D, Palakkad Main Road, Kuniamuthur,<br>Coimbatore, Tamilnadu- 641008 |
| 9. Prof. Chidambara Swamy<br>Professor of Architecture<br>Dayananda Sagar Institutions<br>Shavige Malleswara Hills<br>Kumaraswamy Layout<br>Bengaluru – 560 078 | |

**List of experts in Urban and Regional Planning(PG & UG)**

| | |
|---|---|
| 1. Dr.Nagendra H.N.<br>Director,<br>School of Planning and Architecture,<br>Manasagangothri, University of Mysore | 2. Prof.Ashok Kumar<br>Professor of Physical Planning,<br>School of Planning and Architecture, 4-Block-B,<br>Indraprastha Estate,<br>New Delhi- 110 002 |
| 3. Prof.Ashwani Luthra<br>Professor and Former Head | 4. Dr.V.S.Kapse<br>Professor, |

| | | | |
|---|---|---|---|
| | | Guru Ramdas School of Planning,<br>Guru Nanak Dev University,<br>Amritsar, Punjab – 143 001 | Department of Architecture &<br>Planning, Visvesvaraya<br>National Institute of<br>Technology, South Ambazari<br>Road, Nagpur – 440 010 |
| | | 5. Shri. N.K. Thippeswamy,<br>Director,<br>Bangalore Metropolitan Regional<br>Development Authority (BMRDA),<br># 1, Ali Askar Road, LRDE Building,<br>Bengaluru – 560 052 | 6. Prof.M.N.Chandrasekhar<br>Dean, SJB School of<br>Architecture and Planning,<br>BGD Health and Education<br>City, Uttarahalli Main Road,<br>Kengeri, Bengaluru – 560 060 |
| | | 7. Dr.Vimalaswamy<br>Professor,<br>School of Architecture,<br>REVA University, Rukmini<br>Knowledge Park, Kattigenahalli<br>Yelahanka, Bengaluru – 560 078 | 8. Dr.B.Shankar<br>Associate Professor,<br>Urban and Regional Planning,<br>School of Planning and<br>Architecture, Manasagangothri,<br>University of Mysore, Mysore |
| | | 9. Dr.H.S.Kumara<br>Assistant Professor,<br>Urban and Regional Planning,<br>School of Planning and Architecture,<br>Manasagangothri, University of<br>Mysore, Mysore | |

| | |
|---|---|
| **2017/8.43** | ವಿದ್ಯಾರ್ಥಿನಿಲಯಗಳಲ್ಲಿ ನಿಲಯಪಾಲಕರ ಮೂಲಕ ಭೋಜನಾ ವ್ಯವಸ್ಥೆಯ ನಿರ್ವಹಣೆಯ ಬಗ್ಗೆ. |
| **ತೀರ್ಮಾನ:** | ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶಕರು ಸಲ್ಲಿಸಿರುವ ಪ್ರಸ್ತಾವನೆಯನ್ನು ಸಿಂಡಿಕೇಟ್ ಅನುಮೋದಿಸಿತು ಮತ್ತು ವಿದ್ಯಾರ್ಥಿನಿಯರಿಂದ ವಸತಿಸೌಕರ್ಯಕ್ಕಾಗಿ ಹೆಚ್ಚು ಬೇಡಿಕೆಯಿರುವುದರಿಂದ ಪಂಪಾಪತಿ ರಸ್ತೆಯಲ್ಲಿ ಖಾಲಿಯಿರುವ 1A-13 ಸಂಖ್ಯೆಯ ವಸತಿಗೃಹವನ್ನು ವಿದ್ಯಾರ್ಥಿನಿಲಯಕ್ಕಾಗಿ ಬಳಸಿಕೊಳ್ಳಲು ಸಿಂಡಿಕೇಟ್ ತೀರ್ಮಾನಿಸಿತು. |
| **2017/8.44** | ಸ್ವಚ್ಛತಾ ಸಿಬ್ಬಂದಿಗಳಿಗೆ ವೇತನ ಹೆಚ್ಚಿಸುವ ಬಗ್ಗೆ ಮತ್ತು ಅಗತ್ಯ ಸೌಲಭ್ಯಗಳನ್ನು ಒದಗಿಸುವ ಬಗ್ಗೆ. |
| **ತೀರ್ಮಾನ:** | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಚ್ಛತಾ ಸಿಬ್ಬಂದಿಗಳಿಗೆ ಕನಿಷ್ಠ ವೇತನ ನಿಗಧಿಪಡಿಸುವ ಮತ್ತು ನಿಯಮಾನುಸಾರ ಅವರಿಗೆ ಎಲ್ಲಾ ರೀತಿಯ ಅಗತ್ಯ ಸೌಲಭ್ಯಗಳನ್ನು ಒದಗಿಸುವ ಸಂಬಂಧ ಸುದೀರ್ಘವಾಗಿ ಚರ್ಚಿಸಿ ಈ ಕೆಳಗಿನಂತೆ ಸಿಂಡಿಕೇಟ್ ಅನುಮೋದಿಸಿತು.<br>1. ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಆಯೋಗದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಸ್ವಚ್ಚತಾ ಸಿಬ್ಬಂದಿಗಳ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಈಗಾಗಲೇ ವಿಚಾರಣೆ ನಡೆಯುತ್ತಿದ್ದು, ಸದರಿ ಆಯೋಗವು ಸ್ವಚ್ಛತಾ ಸಿಬ್ಬಂದಿಗಳಿಗೆ ಇ.ಎಸ್.ಐ ಮತ್ತು ಇ.ಪಿ.ಎಫ್ ಸೌಲಭ್ಯಗಳನ್ನು ಒದಗಿಸುವಂತೆ ನಿರ್ದೇಶನ ನೀಡಿರುವ ಹಿನ್ನೆಲೆಯಲ್ಲಿ ಕೂಡಲೇ ಇ.ಎಸ್.ಐ ಮತ್ತು ಇ.ಪಿ.ಎಫ್ ಸೌಲಭ್ಯಗಳನ್ನು ಜಾರಿಗೊಳಿಸಲು ಕ್ರಮಕೈಗೊಳ್ಳುವುದು.<br>2. ಮೈಸೂರು ವಿಶ್ವವಿದ್ಯಾನಿಲಯದಲ್ಲಿ 212 ಮಂದಿ ಸ್ವಚ್ಛತಾ ಸಿಬ್ಬಂದಿಗಳನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಕಾಯ್ದೆ 2000 ಪ್ರಕರಣ 56ರ ಅಡಿಯಲ್ಲಿ ನೇಮಕ ಮಾಡಿಕೊಂಡಿರುವುದಿಲ್ಲ ಹಾಗೂ ವಿಶ್ವವಿದ್ಯಾನಿಲಯದ ವತಿಯಿಂದ ಯಾವುದೇ ಆದೇಶ ನೀಡಿರುವುದಿಲ್ಲವಾದ್ದರಿಂದ 212 ಸಿಬ್ಬಂದಿಗಳಲ್ಲಿ ವಿಶ್ವವಿದ್ಯಾನಿಲಯದಲ್ಲಿ ಯಂತ್ರಗಳ ಸಹಾಯದಿಂದ ಮಾತ್ರ ಶುಚಿತ್ವಗೊಳಿಸುವುದನ್ನು ಒಳಗೊಂಡಂತೆ ಹಾಗೂ ಒಳಚರಂಡಿ, ಸ್ನಾನಗೃಹ ಮತ್ತು ಶೌಚಾಲಯಗಳನ್ನು ಸ್ವಚ್ಛಗೊಳಿಸುವ ವಿಶ್ವವಿದ್ಯಾನಿಲಯಕ್ಕೆ ಅಗತ್ಯವಾಗಿರುವ ಸಂಖ್ಯೆಯ ಸಫಾಯಿ ಕರ್ಮಚಾರಿ ಕೆಲಸಗಳನ್ನು ನಿರ್ವಹಿಸುವವರನ್ನು ಕೂಡಲೇ ಗುರುತಿಸಿ, ಅಂತಹ ಎಲ್ಲಾ ಖಾಸಗಿ ಸಫಾಯಿ ಕರ್ಮಚಾರಿಗಳಿಗೆ ಕರ್ನಾಟಕ ಸರ್ಕಾರದ ಕಾರ್ಮಿಕ ಸಚಿವಾಲಯದ ಅಧಿಸೂಚನೆ ಸಂಖ್ಯೆ ಕಾಇ 82 ಎಲ್‌ಡಬ್ಲ್ಯೂಎ 2015, ಬೆಂಗಳೂರು ದಿನಾಂಕ 4–8–2016ರಲ್ಲಿ ಸೂಚಿಸಿರುವಂತೆ ಕನಿಷ್ಠ ವೇತನವನ್ನು ಜಾರಿಗೊಳಿಸಲು ಹಾಗೂ ಇನ್ನೂ ಮುಂದೆ ಇಂತಹ ಸಿಬ್ಬಂದಿಗಳಿಗೆ ಇ.ಎಸ್.ಐ ಮತ್ತು ಇ.ಪಿ.ಎಫ್ ಸೌಲಭ್ಯಗಳನ್ನು ಒದಗಿಸುವುದು.<br>3. ಇನ್ನುಳಿದ ಸಂಖ್ಯೆಯ ಹೌಸ್‌ಕೀಪಿಂಗ್ ಕೆಲಸಗಳನ್ನಷ್ಟೇ ನಿರ್ವಹಿಸುವ ಸಿಬ್ಬಂದಿಗಳಿಗೆ ವಿಶ್ವವಿದ್ಯಾನಿಲಯದ ತಾತ್ಕಾಲಿಕ "ಡಿ" ದರ್ಜೆ ನೌಕರರಿಗೆ ನೀಡುತ್ತಿರುವ ವೇತನ, ಇ.ಎಸ್.ಐ ಮತ್ತು ಇ.ಪಿ.ಎಫ್ ಸೌಲಭ್ಯವನ್ನು ಜಾರಿಗೆ ತರುವುದು. ಹಾಗೂ ವಿಶ್ವವಿದ್ಯಾನಿಲಯಕ್ಕೆ ಅಗತ್ಯವಿರುವ ಹೌಸ್ ಕೀಪಿಂಗ್ ಸಿಬ್ಬಂದಿಗಳನ್ನು ಹೊರಗುತ್ತಿಗೆ ಮೂಲಕ ನೇಮಿಸಿಕೊಳ್ಳಲು ಕ್ರಮಕೈಗೊಳ್ಳುವುದು;<br>4. ಹೌಸ್‌ಕೀಪಿಂಗ್ ಕೆಲಸಗಳನ್ನು ನಿರ್ವಹಿಸುವ ಸಿಬ್ಬಂದಿಗಳು ಮತ್ತು ವಿಶ್ವವಿದ್ಯಾನಿಲಯದಲ್ಲಿ ಯಂತ್ರಗಳ ಸಹಾಯದಿಂದ ಮಾತ್ರ ಶುಚಿತ್ವಗೊಳಿಸುವುದನ್ನು ಒಳಗೊಂಡಂತೆ ಹಾಗೂ ಒಳಚರಂಡಿ, ವಿದ್ಯಾರ್ಥಿನಿಲಯಗಳಲ್ಲಿರುವ ಸ್ನಾನಗೃಹ ಮತ್ತು ಶೌಚಾಲಯಗಳನ್ನು ಸ್ವಚ್ಛಗೊಳಿಸುವ ಹಾಗೂ ಅದೇ ರೀತಿಯ ಕೆಲಸಗಳಲ್ಲಿ ನಿರತರಾಗಿರುವ ಎಲ್ಲಾ ಖಾಸಗಿ ಸಫಾಯಿ ಕರ್ಮಚಾರಿಗಳಿಗೆ ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಆಯೋಗವು ನಿರ್ದೇಶಿಸಿರುವಂತೆ ವೇತನ, ಇ.ಎಸ್.ಐ ಮತ್ತು ಇ.ಪಿ.ಎಫ್ ಮತ್ತಿತರ ಸೌಲಭ್ಯವನ್ನು ಒದಗಿಸುವ ವ್ಯವಸ್ಥೆಯನ್ನು ಈಗಿರುವ ಆಡಳಿತಾಧಿಕಾರಿಗಳ ಕಛೇರಿಯಲ್ಲಿ ನುರಿತ ಅಧಿಕಾರಿಗಳ ಕೊರತೆಯಿರುವುದರಿಂದ ಜವಾಬ್ದಾರಿಯುತ ಅಧಿಕಾರಿಗಳು ಹೆಚ್ಚಿರುವ ವಿಶ್ವವಿದ್ಯಾನಿಲಯದ ಕಾರ್ಯಪಾಲಕ ಅಭಿಯಂತರ ಕಛೇರಿಯಲ್ಲಿ ಸ್ವಚ್ಛತಾ ಕಾರ್ಯವನ್ನು ನಿರ್ವಹಿಸುವ ಸಿಬ್ಬಂದಿಗಳ ನಿರ್ವಹಣೆಯ ಎಲ್ಲಾ ಕೆಲಸಗಳನ್ನು ನಿರ್ವಹಿಸುವ ಸಲುವಾಗಿ ಎಲ್ಲಾ ದಾಖಲೆಗಳನ್ನು ವರ್ಗಾಯಿಸಲು ಕೂಡಲೇ ಕ್ರಮವಹಿಸುವುದು.<br>5. ವಿಶ್ವವಿದ್ಯಾನಿಲಯದಲ್ಲಿ ಯಂತ್ರಗಳ ಸಹಾಯದಿಂದ ಮಾತ್ರ ಶುಚಿತ್ವಗೊಳಿಸುವುದನ್ನು ಒಳಗೊಂಡಂತೆ ಹಾಗೂ ಒಳಚರಂಡಿ, ವಿದ್ಯಾರ್ಥಿನಿಲಯಗಳಲ್ಲಿರುವ ಸ್ನಾನಗೃಹ ಮತ್ತು |

| | |
|---|---|
| | ಶೌಚಾಲಯಗಳನ್ನು ಸ್ವಚ್ಛಗೊಳಿಸುವ ಹಾಗೂ ಅದೇ ರೀತಿಯ ಕೆಲಸಗಳಲ್ಲಿ ನಿರತರಾಗಿರುವ ಖಾಸಗಿ ಸಫಾಯಿ ಕರ್ಮಚಾರಿಗಳ ಸಂಖ್ಯೆಗೆ ಅನುಗುಣವಾಗಿ ಹುದ್ದೆಗಳನ್ನು ಸೃಜನೆಯೊಂದಿಗೆ ಅಧಿನಿಯಮವನ್ನು ರಚಿಸಿ ವಿ.ವಿ.ಕಾಯ್ದೆ 2000ದ ಪ್ರಕಾರ ಸಫಾಯಿ ಕರ್ಮಚಾರಿಗಳಿಗೆ ಸಂಬಂಧಿಸಿದಂತೆ ಪ್ರಸ್ತಾವನೆಯನ್ನು ಸಿದ್ಧಪಡಿಸಿ ಸರ್ಕಾರದ ಅನುಮೋದನೆಗಾಗಿ ಕಳುಹಿಸಲು ಕ್ರಮಕೈಗೊಳ್ಳುವುದು.<br>6. ಸ್ವಚ್ಛತಾ ಸಿಬ್ಬಂದಿಗಳಿಗೆ ಅವಶ್ಯವಿರುವ ಸ್ವಚ್ಛತಾ ಸಾಮಾಗ್ರಿ ಹಾಗೂ ಸುರಕ್ಷತ ಪರಿಕರಗಳನ್ನು ಮೂರು ತಿಂಗಳಿಗಾಗುವಷ್ಟು ಜನತಾ ಬಜಾರ್‌ನಿಂದ ಕೂಡಲೇ ಖರೀದಿಸಿ ಒದಗಿಸಲು ಕ್ರಮಕೈಗೊಂಡು ನಂತರ ವರ್ಷಕ್ಕಾಗುವಷ್ಟು ಕರ್ನಾಟಕ ಪಾರದರ್ಶಕ ನಿಯಮಾನುಸಾರ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಖರೀದಿಸಲು ಕ್ರಮಕೈಗೊಳ್ಳುವುದು.<br>7. ಆಡಳಿತಾಧಿಕಾರಿಗಳು, ಮಾನಸಗಂಗೋತ್ರಿ, ಮೈಸೂರು ಇವರು ವಿಶ್ವವಿದ್ಯಾನಿಲಯದಿಂದ ಅನುಮತಿ ಪಡೆಯದೇ ವಿಶ್ವವಿದ್ಯಾನಿಲಯಗಳ ಕಾಯ್ದೆ ಪ್ರಕಾರ ಆಡಳಿತಾಧಿಕಾರಿಗಳಿಗೆ ನೇಮಕಾತಿ ಮಾಡಿಕೊಳ್ಳಲು ಅಧಿಕಾರ ವ್ಯಾಪ್ತಿಯಲ್ಲಿ ಇಲ್ಲದಿದ್ದರೂ ಅಗತ್ಯಕ್ಕಿಂತ ಹೆಚ್ಚಾಗಿ 14 ಮಂದಿ ಸ್ವಚ್ಛತಾ ಮಂದಿಯನ್ನು ಏಕಾಏಕಿ ನೇಮಿಸಿಕೊಂಡಿರುವುದರಿಂದ, ಸದರಿ ಮಂದಿಗೆ ಕೆಲಸ ನಿರ್ವಹಿಸಿದ ದಿನದಿಂದ ಅವರನ್ನು ಸೇವೆಯಿಂದ ಬಿಡುಗಡೆಗೊಳಿಸಲು ಕ್ರಮಕೈಗೊಂಡು ಬಿಡುಗಡೆಗೊಳಿಸಿದ ದಿನದವರೆಗೆ ಅವರುಗಳು ಕಾರ್ಯನಿರ್ವಹಿಸಿದ ಅವಧಿಗೆ ವಿಶ್ವವಿದ್ಯಾನಿಲಯದಲ್ಲಿ ಚಾಲ್ತಿಯಲ್ಲಿರುವ ನಿಯಮದಂತೆ ವೇತನವನ್ನು ಪಾವತಿಸುವುದು.<br>8. ವಿಶ್ವವಿದ್ಯಾನಿಲಯಗಳ ಕಾಯ್ದೆ ಪ್ರಕಾರ ಆಡಳಿತಾಧಿಕಾರಿಗಳಿಗೆ ನೇಮಕಾತಿ ಮಾಡಿಕೊಳ್ಳಲು ಅಧಿಕಾರ ಇಲ್ಲದಿದ್ದರೂ ಈ ರೀತಿ ಏಕಾಏಕಿ ನೇಮಕ ಮಾಡಿಕೊಂಡಿರುವ ಸಂಬಂಧ ಆಡಳಿತಾಧಿಕಾರಿಗಳು, ಮಾನಸಗಂಗೋತ್ರಿ, ಮೈಸೂರು ಇವರಿಗೆ ಕಾರಣ ಕೇಳುವ ನೋಟಿಸ್ ಜಾರಿಮಾಡಿ ನಿಯಮಾನುಸಾರ ಶಿಸ್ತು ಕ್ರಮ ಜರುಗಿಸುವ ಕುರಿತು ಕ್ರಮಕೈಗೊಳ್ಳುವುದು.<br>9. ವಿಶ್ವವಿದ್ಯಾನಿಲಯದಲ್ಲಿ ಲಭ್ಯವಿರುವ ಖಾಯಂ ಹಾಗೂ ತಾತ್ಕಾಲಿಕ 'ಡಿ' ದರ್ಜೆ ನೌಕರರಿಂದ ಕಛೇರಿಯಲ್ಲಿ ಸ್ವಚ್ಛತಾ ಕೆಲಸಗಳನ್ನು ನಿರ್ವಹಿಸಲು ಕ್ರಮಕೈಗೊಳ್ಳುವುದು. |
| **2017/8.45** | **UPE-UNICEF - EXTERNAL FUND**ಖಾತೆಯನ್ನು ಅಂತ್ಯಗೊಳಿಸಿ **"SPS'**ಖಾತೆಗೆ ವರ್ಗಾಹಿಸುವ ಬಗ್ಗೆ. |
| **ತೀರ್ಮಾನ:** | ಮೈಸೂರು ವಿಶ್ವವಿದ್ಯಾನಿಲಯದ **UPE-UNICEF - EXTERNAL FUND** ಖಾತೆಯನ್ನು ಮೈಸೂರು ವಿಶ್ವವಿದ್ಯಾನಿಲಯ ಹಾಗೂ **UNICEF**ಸಹಭಾಗಿತ್ವದಿಂದ **UPE-UNICEF - EXTERNAL FUND** ಖಾತೆ ಸಂಖ್ಯೆ 6413577404 ಯನ್ನು ಆರಂಭಿಸಿದ್ದು, ಈ ಸಹಭಾಗಿತ್ವವು ಅಂತ್ಯಗೊಂಡಿರುವುದರಿಂದ **UPE-EXTERNAL FUND** ಖಾತೆಯಲ್ಲಿರುವ ಮೊಬಲಗು ರೂ.37,549/- ಮತ್ತು ಸದರಿ ಮೊಬಲಗಿಗೆ ಖಾತೆಯನ್ನು ಅಂತ್ಯಗೊಳಿಸುವ ದಿನಾಂಕದವರೆಗೆ ಬರುವ ಬಡ್ಡಿಯನ್ನು ಸಹ ಸೇರಿಸಿ, **"SPS"** ಖಾತೆಗೆ ವರ್ಗಾಯಿಸಿ ಆ ಖಾತೆಯನ್ನು ಮುಕ್ತಾಯಗೊಳಿಸಲು ಸಿಂಡಿಕೇಟ್ ಅನುಮೋದಿಸಿತು |
| **2017/8.46** | ಮೈಸೂರು ವಿಶ್ವವಿದ್ಯಾನಿಲಯಕ್ಕೆ ಹೊರಗುತ್ತಿಗೆ ಆಧಾರದ ಮೇಲೆ ಭದ್ರತಾ ಸಂಸ್ಥೆಯನ್ನು ನೇಮಕ ಮಾಡುವ ಬಗ್ಗೆ. |
| **ತೀರ್ಮಾನ:** | 2017-18ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯಕ್ಕೆ ಭದ್ರತಾ ವ್ಯವಸ್ಥೆಯನ್ನು ನೋಡಿಕೊಳ್ಳುವ ಸಲುವಾಗಿ ಕರ್ನಾಟಕ ಪಾರದರ್ಶಕ ನಿಯಮಾನುಸಾರ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದ್ದ ಟೆಂಡರ್‌ನಲ್ಲಿ ಮೆ: ಶಾರ್ಪ್ ವಾಚ್ ಇನ್‌ವೆಸ್ಟಿಗೇಷನ್ ಅಂಡ್ ಸೆಕ್ಯೂರಿಟಿ ಸರ್ವೀಸಸ್, ಮೈಸೂರು ಮತ್ತು ಮೆ: ಶ್ರೀ ರಂಗನಾಥ ಎಂಟರ್‌ಪ್ರೈಸಸ್, ಮೈಸೂರು ಈ ಎರಡು ಭದ್ರತಾ ಸಂಸ್ಥೆಗಳು Financial Bidನಲ್ಲಿ ಸರ್ವೀಸ್ ಚಾರ್ಜ್ ಅನ್ನು ಸಮಾನವಾಗಿ ನಮೂದಿಸಿರುವುದರಿಂದ ಎರಡು ಭದ್ರತಾ ಸಂಸ್ಥೆಗಳ 2016-17ನೇ ಸಾಲಿನ Certified Bank Statement (Opening Balance, Receipts, Payments, Closing Balance) ಮತ್ತು Sevice Tax returns ದಾಖಲಾತಿಗಳನ್ನು ಪರಿಶೀಲಿಸಿ ಮೆ: ವಾರ್ಷಿಕ ಹಣಕಾಸಿನ Turn over ಮೆ: ಶಾರ್ಪ್ ವಾಚ್ ಇನ್‌ವೆಸ್ಟಿಗೇಷನ್ ಅಂಡ್ ಸೆಕ್ಯೂರಿಟಿ ಸರ್ವೀಸಸ್, ಮೈಸೂರು ಇವರದಾಗಿದ್ದು ಈ ಹಿಂದೆ ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅವಧಿಯಲ್ಲಿ ಕೆಲವು ಸಣ್ಣಪುಟ್ಟ ಲೋಪಗಳಿಗೆ ವಿಶ್ವವಿದ್ಯಾನಿಲಯವು ದಂಡ ವಿಧಿಸಿರುವುದನ್ನು ಗಮನಿಸಿದ ಸಿಂಡಿಕೇಟ್ ಈ ಸಂಸ್ಥೆಯ |

ಹೆಸರನ್ನು ಬ್ಲಾಕ್ ಲಿಸ್ಟ್‌ನಲ್ಲಿ ಸೇರಿಸದೇ ಇರುವುದರಿಂದ ಸೂಕ್ತ ಷರತ್ತುಗಳನ್ನು ವಿಧಿಸಿ ಮೆ: ಶಾರ್ಪ್ ವಾಚ್ ಇನ್‌ವೆಸ್ಟಿಗೇಷನ್ ಅಂಡ್ ಸೆಕ್ಯೂರಿಟಿ ಸರ್ವೀಸಸ್, ಮೈಸೂರು ಇವರಿಗೆ ಒಂದು ವರ್ಷದ ಅವಧಿಗೆ ಅಥವಾ ವಿಶ್ವವಿದ್ಯಾನಿಲಯದ ಮುಂದಿನ ಆದೇಶದವರೆಗೆ ಹೊರಗುತ್ತಿಗೆ ಆಧಾರದ ಮೇಲೆ ಭದ್ರತಾ ಸೇವೆಯನ್ನು ಒದಗಿಸುವಂತೆ ಕ್ರಮಕೈಗೊಳ್ಳಲು ಸಿಂಡಿಕೇಟ್ ತೀರ್ಮಾನಿಸಿತು.

**2017/8.47** ಪರೀಕ್ಷಾ ಅಕ್ರಮ ಹಾಗೂ ಲೋಪದೋಷಗಳ ವಿಚಾರಣಾ ಸಮಿತಿಯ (ಎಂ.ಪಿ.ಎಲ್.ಇ.ಸಿ.) ಶಿಫಾರಸುಗಳು.

**ತೀರ್ಮಾನ:** ವಿಶ್ವವಿದ್ಯಾನಿಲಯದಲ್ಲಿ ನಡೆಯುವ ಪರೀಕ್ಷೆಗಳಲ್ಲಿ ಪರೀಕ್ಷಾ ಅಕ್ರಮದ ಆರೋಪಕ್ಕೆ ಒಳಗಾದ ವಿದ್ಯಾರ್ಥಿಗಳು ತಪ್ಪೊಪ್ಪಿಗೆಯ ಲಿಖಿತ ಪತ್ರವನ್ನು ನೀಡಿರುವುದನ್ನು ಗಮನಿಸಿದ ಸಿಂಡಿಕೇಟ್ MPLEC ಕಮಿಟಿಯು ಮಾಡಿರುವ ಶಿಫಾರಸ್ಸುಗಳನ್ನು ಪರಿಶೀಲಿಸಿ ಅದರ ಶಿಫಾರಸ್ಸಿನಂತೆ ಸದರಿ ವಿದ್ಯಾರ್ಥಿಗಳು ನವೆಂಬರ್/ ಡಿಸೆಂಬರ್ 2017 ರಲ್ಲಿ ನಡೆಯುವ ತೃತೀಯ ಹಾಗೂ ಐದನೇ ಸೆಮಿಸ್ಟರ್ ಪರೀಕ್ಷೆಗಳನ್ನು ಬರೆಯಲು ಅರ್ಹರಾಗಿರುವುದರಿಂದ, ಸದರಿ ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಸಿಂಡಿಕೇಟ್ ಅನುಮತಿಸಿತು.

**2017/8.48** ಪದವಿ ಪ್ರಮಾಣ ಪತ್ರದ ಶುಲ್ಕಗಳ ಬಗ್ಗೆ.

**ತೀರ್ಮಾನ:** ಶ್ರೀ ಬಸವರಾಜ ರಾಯರೆಡ್ಡಿ, ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು, ತಮ್ಮ ಟಿಪ್ಪಣಿ ಪತ್ರದಲ್ಲಿ ವಿಶ್ವವಿದ್ಯಾನಿಲಯದ ವಿವಿಧ ಪದವಿಗಳಲ್ಲಿ ಉತ್ತೀರ್ಣರಾದ ಪದವೀಧರರು ಪದವಿ ಪ್ರಮಾಣ ಪತ್ರಗಳನ್ನು ಪಡೆಯುವ ಸಂಬಂಧ ವಿಶ್ವವಿದ್ಯಾನಿಲಯವು ವಿಧಿಸಿರುವ ಶುಲ್ಕಗಳನ್ನು ಪಾವತಿಸಲು ಹೊರೆಯಾಗುತ್ತಿರುವ ವಿಷಯವು ಸದನದಲ್ಲಿ ಪ್ರಸ್ತಾಪವಾದ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಬಿ.ಎ., ಬಿ.ಎಸ್ಸಿ, ಮತ್ತು ಬಿ.ಕಾಂ ಇನ್ನಿತರ ಎಲ್ಲಾ ಸ್ನಾತಕ ಪದವೀಧರರಿಂದ ರೂ. 2,000/–ಗಳ ಸೇವಾ ಶುಲ್ಕವನ್ನು ಪಡೆದು ವಿಶ್ವವಿದ್ಯಾನಿಲಯದಿಂದ ತತ್ಕಾಲ್ ಮೂಲಕ ಘಟಿಕೋತ್ಸವ ಪ್ರಮಾಣ ಪತ್ರವನ್ನು ನೀಡಲು ಸಿಂಡಿಕೇಟ್ ಅನುಮೋದಿಸಿತು.

**2017/8.49** ಸೋನಾಲಿ ಕರ್ಮಾರ್‌ಕರ್, ಸಂಶೋಧನಾ ಅಭ್ಯರ್ಥಿ, ಇವರು ಹೆಚ್ಚುವರಿ ಸಂಶೋಧನಾ ಅವಧಿ ವಿಸ್ತರಣೆ ಕೋರಿರುವ ಬಗ್ಗೆ.

**ತೀರ್ಮಾನ:** ಸೋನಾಲಿ ಕರ್ಮಾರ್‌ಕರ್, ಸಂಶೋಧನಾ ಅಭ್ಯರ್ಥಿ, ಪಾಲಿಮರ್ ಸೈನ್ಸ್ ವಿಭಾಗ, ಜೆ.ಎಸ್.ಎಸ್ ಸಂಶೋಧನಾ ಕೇಂದ್ರ, ಎಸ್.ಜೆ.ಸಿ.ಇ ಕ್ಯಾಂಪಸ್, ಮಾನಸಗಂಗೋತ್ರಿ, ಮೈಸೂರು ಇವರ ಸಂಶೋಧನಾ ಅವಧಿಯು ದಿನಾಂಕ 10–08–2016ರಲ್ಲಿ ಪೂರ್ಣಗೊಂಡಿದ್ದು, ನಿಗದಿತ ಅವಧಿಯಲ್ಲಿ ಮಹಾಪ್ರಬಂಧವನ್ನು ಸಲ್ಲಿಸದೇ ಇರುವ ಬಗ್ಗೆ ಅನಾರೋಗ್ಯದ ಕಾರಣ ನೀಡಿ ವೈದ್ಯಕೀಯ ಪ್ರಮಾಣ ಪತ್ರವನ್ನು ನೀಡಿರುವುದರಿಂದ, ಸದರಿಯವರಿಗೆ ಮಹಾಪ್ರಬಂಧವನ್ನು ಸಲ್ಲಿಸಲು ಹೆಚ್ಚುವರಿಯಾಗಿ ದಂಡ ಶುಲ್ಕದೊಂದಿಗೆ 06 ತಿಂಗಳುಗಳ ಕಾಲಾವಕಾಶವನ್ನು ನೀಡಲು ಸಿಂಡಿಕೇಟ್ ನಿರ್ಣಯಿಸಿತು.

ಮುಂದುವರೆದು ಇಂತಹ ಪ್ರಕರಣಗಳು ಪಿಎಚ್.ಡಿ. ನಿಯಮಗಳಿಗೆ ವಿರುದ್ಧವಾಗಿದ್ದರೂ ಆಗಾಗ್ಗೆ ಸಿಂಡಿಕೇಟ್‌ಗೆ ಮಂಡನೆಯಾಗುತ್ತಿರುವುದರಿಂದ ಇಂತಹ ಪ್ರಕರಣಗಳು ಮರುಕಳಿಸಿದಂತೆ ಎಲ್ಲಾ ಮಾರ್ಗದರ್ಶಕರುಗಳಿಗೆ ಸೂಕ್ತ ನಿರ್ದೇಶನ ನೀಡಿ ಸುತ್ತೋಲೆ ಹೊರಡಿಸಲು ಹಾಗೂ ಪಿಎಚ್.ಡಿ. ವಿಭಾಗದ ಸಂಯೋಜಕರು ಈ ದಿಸೆಯಲ್ಲಿ 6 ತಿಂಗಳು ಮುಂಚಿತವಾಗಿ ಅಂತಹ ಪ್ರಕರಣಗಳನ್ನು ಗುರುತಿಸಿ ಸಂಬಂಧಪಟ್ಟ ಮಾರ್ಗದರ್ಶಕರು ಮತ್ತು ಸಂಶೋಧಕರಿಗೆ ಎಚ್ಚರಿಕೆ ನೀಡಲು ಅಗತ್ಯ ಕ್ರಮಕೈಗೊಳ್ಳುವಂತೆ ಸಿಂಡಿಕೇಟ್ ತೀರ್ಮಾನಿಸಿತು.

**2017/8.51** ಮೈಸೂರಿನ ಶ್ರೀ ಲಕ್ಷ್ಮೀ ಹಯಗ್ರೀವ ಇನ್ಸ್‌ಟಿಟ್ಯೂಟ್ ಆಫ್ ಸೈನ್ಸ್, ಕಾಮರ್ಸ್ ಅಂಡ್ ಮ್ಯಾನೇಜ್‌ಮೆಂಟ್ ಕಾಲೇಜಿನ ವಿಳಾಸ ಬದಲಾವಣೆ ಮಾಡಲು ಅನುಮೋದನೆ ನೀಡುವ ಬಗ್ಗೆ.

**ತೀರ್ಮಾನ:** ಮೈಸೂರಿನ ಶ್ರೀ ಲಕ್ಷ್ಮೀ ಹಯಗ್ರೀವ ಇನ್ಸ್‌ಟಿಟ್ಯೂಟ್ ಆಫ್ ಸೈನ್ಸ್, ಕಾಮರ್ಸ್ ಅಂಡ್ ಮ್ಯಾನೇಜ್‌ಮೆಂಟ್ ಕಾಲೇಜಿನ ವಿಳಾಸವನ್ನು ಈ ಕೆಳಕಂಡಂತೆ ನಿಯಮಾನುಸಾರ ಬದಲಾವಣೆ ಮಾಡಲು ಸಿಂಡಿಕೇಟ್ ಅನುಮೋದಿಸಿತು.

| ಕ್ರಸಂ | ಕಾಲೇಜಿನ ಹಾಲಿ ವಿಳಾಸ | ಬದಲಾವಣೆ ಮಾಡಬೇಕಾದ ಕಾಲೇಜಿನ ವಿಳಾಸ |
|---|---|---|
| 1 | ಶ್ರೀ ಲಕ್ಷ್ಮೀ ಹಯಗ್ರೀವ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್, ಕಾಮರ್ಸ್ ಅಂಡ್ ಮ್ಯಾನೇಜ್‌ಮೆಂಟ್, ನಂ.211, ದೀವಾನ್ಸ್ ರಸ್ತೆ, ಮೈಸೂರು–570024. | ಶ್ರೀ ಲಕ್ಷ್ಮೀ ಹಯಗ್ರೀವ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್, ಕಾಮರ್ಸ್ ಅಂಡ್ ಮ್ಯಾನೇಜ್‌ಮೆಂಟ್, ಸಿ.ಎ–16, 3ನೇ ಹಂತ, ಕನಕದಾಸ ನಗರ, ದಟ್ಟಗಳ್ಳಿ, ಮೈಸೂರು–570022. |

| 2017/8.52 | "ICAR Project"ಖಾತೆಯನ್ನು ಮುಕ್ತಾಯಗೊಳಿಸಿ "ಎಸ್.ಪಿ.ಎಸ್. ಖಾತೆಗೆ ವರ್ಗಾಹಿಸುವ ಬಗ್ಗೆ. |
|---|---|
| ತೀರ್ಮಾನ: | ಪ್ರಾಣಿಶಾಸ್ತ್ರ ಅಧ್ಯಯನ ವಿಭಾಗದಲ್ಲಿ ICAR Project"ಯೋಜನೆಯು 2008-09ನೇ ಸಾಲಿನಲ್ಲಿ ಪ್ರಾರಂಭವಾಗಿ, ಮಾರ್ಚ್ 2013ರಲ್ಲಿ ಮುಕ್ತಾಯಗೊಂಡಿರುವುದರಿಂದ ಅಂದಿನಿಂದ ಇಲ್ಲಿಯವರೆಗೆ ಯಾವುದೇ ವೆಚ್ಚವಾಗಿರುವುದಿಲ್ಲ ಮತ್ತು ಈ ಯೋಜನೆಯ ಅಂತ್ಯದವರೆಗೂ ಅನುದಾನಿತ ಸಂಸ್ಥೆಯವರಿಗೆ ಲೆಕ್ಕಗಳನ್ನು ಸಲ್ಲಿಸಲಾಗಿದ್ದು, ದಿನಾಂಕ 1-4-2013ರಿಂದ ಅನುದಾನ ಉಳಿದಿರುವ ಮೊಬಲಗು ರೂ.3,08,856/-ಗಳ ಬಗ್ಗೆ ಆದಾಯ ಮತ್ತು ಪಾವತಿಗಳ ಲೆಕ್ಕಪತ್ರಗಳನ್ನು ಪರಿಶೀಲಿಸಿದ ಸಭೆಯು ಸದರಿ ಮೊತ್ತವನ್ನು "ಎಸ್.ಪಿ.ಎಸ್. ಖಾತೆಗೆ ವರ್ಗಾಯಿಸಿ "ICAR Project" ಖಾತೆಯನ್ನು ಮುಕ್ತಾಯಗೊಳಿಸುವುದನ್ನು ಸಿಂಡಿಕೇಟ್ ಅನುಮೋದಿಸಿತು. |

<u>ಇತರೆ ವಿಷಯಗಳು</u>

1. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳು ಫೆಲೋಶಿಫ್ ಗೌರವಧನವನ್ನು ಹೆಚ್ಚಿಸಬೇಕೆಂದು ಕೋರಿರುವ ಮನವಿಯನ್ನು ಪರಿಶೀಲಿಸಿದ ಸಭೆಯು ವಿಶ್ವವಿದ್ಯಾನಿಲಯಕ್ಕೆ ಆರ್ಥಿಕವಾಗಿ ಹೊರೆಯಾಗುತ್ತದೆ. ಅಷ್ಟೇ ಅಲ್ಲದೇ ಕಳೆದ ವರ್ಷದಲ್ಲಿ ಅಂದರೆ ವಿಶ್ವವಿದ್ಯಾನಿಲಯವು ದಿನಾಂಕ 11-07-2016ರಲ್ಲಿ ಈಗಾಗಲೇ ರೂ. 8,000/-ದಿಂದ ರೂ.18,000/-ಗಳಿಗೆ ಫೆಲೋಶಿಫ್ ಗೌರವಧನವನ್ನು ಹೆಚ್ಚಿಸಿರುವುದರಿಂದ ಪುನಃ ಹೆಚ್ಚಿಸಲು ಸಾಧ್ಯವಾಗುವುದಿಲ್ಲವೆಂದು ಸಭೆಯು ತೀರ್ಮಾನಿಸಿತು.
2. ಡಾ. ಸೋಮಶೇಖರ್, ಉಪಗ್ರಂಥಪಾಲಕ (ನಿವೃತ್ತ) ಇವರ ಪ್ರಕರಣ ಕೋರ್ಟ್‌ನಲ್ಲಿ ಇರುವುದರಿಂದ, ಕೋರ್ಟಿನ ತೀರ್ಪು ಬಂದ ನಂತರ, ಸದರಿಯವರಿಗೆ ಸಂಚಿತ ವೇತನವನ್ನು ನಿಗಧಿಪಡಿಸುವ ಸಂಬಂಧ ಕಾನೂನು ಅಭಿಪ್ರಾಯ ಪಡೆದು ಅಗತ್ಯಕ್ರಮಕೈಗೊಳ್ಳಲು ಸಿಂಡಿಕೇಟ್ ನಿರ್ಣಯಿಸಿತು.
3. ಡಾ.ಎಂ.ಸಿ.ನಟರಾಜುರವರು 2017-18ನೇ ಸಾಲಿನಿಂದ ವಾಕ್ ಮತ್ತು ಶ್ರವಣ ವಿಷಯಕ್ಕೆ ಸಂಬಂಧಿಸಿದಂತೆ ಬಿ.ಓ.ಎಸ್ ಮತ್ತು ಬಿ.ಓ.ಇ ಗಳಿಗೆ ಸದಸ್ಯರುಗಳನ್ನು ನೇಮಕ ಮಾಡುವಾಗ ಸಂಯೋಜಿತ ಕಾಲೇಜು/ಸಂಸ್ಥೆಗಳಿಗೆ ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆಯು ಜೆ.ಎಸ್.ಎಸ್. ವಾಕ್ ಶ್ರವಣ ಸಂಸ್ಥೆಯ ಅಧ್ಯಾಪಕರುಗಳಿಗೆ ಸೂಕ್ತ ಪ್ರಾತಿನಿಧ್ಯ ನೀಡದಿರುವ ಬಗ್ಗೆ ತಿಳುವಳಿಕೆ ಪತ್ರ ನೀಡುವುದು. ಮತ್ತು ಮುಂದೆ ಸರದಿಯ ಆಧಾರದಮೇಲೆ ಅಧ್ಯಯನ ಮಂಡಳಿ (ಬಿ.ಓ.ಎಸ್) ಮತ್ತು ಪರೀಕ್ಷಾ ಮಂಡಳಿ(ಬಿ.ಓ.ಇ.)ಗಳನ್ನು ರಚಿಸಲು ಸಂಸ್ಥೆಗಳಿಗೆಪ್ರಾತಿನಿಧ್ಯ ನೀಡಲು ಸೂಕ್ತ ಆದೇಶ ನೀಡಲು ಸಿಂಡಿಕೇಟ್‌ತೀರ್ಮಾನಿಸಿತು.
4. ಪ್ರೊ. ಗಂಗಾಧರ್, ಮಾನವಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಅವರು ಬ್ಯಾಕ್‌ಲಾಗ್‌ನಲ್ಲಿ ನೇಮಕಗೊಂಡಿರುವುದರಿಂದ, ಇವರ ಪ್ರಕರಣಕ್ಕೆ ಸಂಬಂಧಿಸಿದಂತೆ ನಿವೃತ್ತ ನ್ಯಾಯಾಧೀಶರನ್ನು ನೇಮಕ ಮಾಡಿ ವಿಚಾರಣೆ ಮಾಡುವ ಬಗೆಗೆ ಸದರಿ ಪ್ರಕರಣದ ಪೂರ್ಣ ವಿವರಗಳನ್ನು ಮುಂದಿನ ಸಿಂಡಿಕೇಟ್‌ನಲ್ಲಿ ಮಂಡಿಸಿ ಸೂಕ್ತ ತೀರ್ಮಾನವನ್ನು ಕೈಗೊಳ್ಳಲು ಸಿಂಡಿಕೇಟ್ ತೀರ್ಮಾನಿಸಿತು.

5. **ದಿನಾಂಕ 22-6-2017ರಂದು ನಡೆದ ಸಿಂಡಿಕೇಟ್ ಸಭೆಯ ವಿಷಯ ಸಂಖ್ಯೆ:** 6.34.ಕ್ಕೆ ಸಂಬಂಧಿಸಿದಂತೆ ನಿವೃತ್ತಿಗೊಂಡ ಕೆಲವು ವಿಭಾಗಗಳ ಅಧ್ಯಕ್ಷರು / ಪ್ರಾಧ್ಯಾಪಕರು ಹಂಚಿಕೆಯಾಗಿರುವ ಕೊಠಡಿಗಳನ್ನು ತೆರವು ಮಾಡದಿರುವ ಬಗೆಗೆ ಆಕ್ಷೇಪ ವ್ಯಕ್ತಪಡಿಸಿದ ಸಿಂಡಿಕೇಟ್ ಪ್ರಾಧ್ಯಾಪಕರುಗಳಿಗೆ ತಮ್ಮ ಕೊಠಡಿಯನ್ನು 15 ದಿವಸದೊಳಗಾಗಿ ನೋಟೀಸ್ ನೀಡಿ ತೆರವುಗೊಳಿಸಲು ಕ್ರಮಕೈಗೊಳ್ಳುವುದು ಹಾಗೂ ಇನ್ನು ಮುಂದೆ ನಿವೃತ್ತಗೊಂಡ ಪ್ರಾಧ್ಯಾಪಕರು/ಅಧ್ಯಕ್ಷರಿಗಾಗಿ ಆಯಾ ವಿಭಾಗಗಳಲ್ಲಿ ಬಾಕಿ ಕೆಲಸಗಳನ್ನು ಪೂರ್ಣಗೊಳಿಸಬೇಕಾದಲ್ಲಿ ಆ ಕಾರಣಕ್ಕಾಗಿ ಪ್ರತ್ಯೇಕ ಕೊಠಡಿಯ ಸೌಲಭ್ಯವನ್ನು ನೀಡದೇ ಎಲ್ಲರಿಗೂ ಅನುಕೂಲವಾಗುವ ರೀತಿಯಲ್ಲಿ ಎಲ್ಲರಿಗೂ ಅನ್ವಯವಾಗುವಂತೆ **(ಕಾಮನ್** ಆಗಿ) ವಿಜ್ಞಾನಭವನದಲ್ಲಿ (IOE) ಒಂದು ಕೊಠಡಿಯನ್ನು ನೀಡುವ ವ್ಯವಸ್ಥೆಯನ್ನು ಮಾಡಲು ಸಹ ಸಿಂಡಿಕೇಟ್ ನಿರ್ಧರಿಸಿತು.
6. ಸಿ.ಎ.ಎಸ್.ಪದೋನ್ನತಿಗೆ ಸಂಬಂಧಿಸಿದಂತೆ ಸರ್ಕಾರದಿಂದ ಪತ್ರ ಬಂದಿರುವುದರಿಂದ ಕೂಡಲೇ ಕ್ರಮಕೈಗೊಳ್ಳಲು ಸಿಂಡಿಕೇಟ್ ತೀರ್ಮಾನಿಸಿತು.
7. ವಿಶ್ವವಿದ್ಯಾನಿಲಯಕ್ಕೆ ಅವಶ್ಯವಿರುವ ಸೇವೆ ಮತ್ತು ಸರಕುಗಳನ್ನು ಖರೀದಿಸುವ ಸಂಬಂಧ E-Procurement ಹಾಗೂ ಟೆಂಡರ್ ಆಹ್ವಾನಿಸುವ ಕಾರ್ಯಭಾರವನ್ನು ಎಸ್ಟೇಟ್ ಆಫೀಸರ್‌ಗೆ ವಹಿಸಲು ಸಿಂಡಿಕೇಟ್ ತೀರ್ಮಾನಿಸಿತು.
8. ಕಟ್ಟಡವನ್ನು ತೆರವು ಮಾಡಲು ಪ್ರೊ. ಶಾಲಿನಿ ಅರಸ್ ಇವರಿಗೆ ಪತ್ರ ಬರೆದು ತಕ್ಷಣವೇ ಕಟ್ಟಡವನ್ನು ಹಸ್ತಾಂತರಿಸುವಂತೆ ತಿಳಿಸಲು ಸಿಂಡಿಕೇಟ್ ತೀರ್ಮಾನಿಸಿತು.

ಕೊನೆಯಲ್ಲಿ ಮಾನ್ಯ ಕುಲಪತಿಗಳು, ಸಿಂಡಿಕೇಟ್ ಸಭೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಉಪಯುಕ್ತ ಸಲಹೆ ಸೂಚನೆಗಳನ್ನು ನೀಡಿ ತೀರ್ಮಾನ ಕೈಗೊಳ್ಳಲು ಸಹಕರಿಸಿದ ಎಲ್ಲಾ ಸದಸ್ಯರುಗಳಿಗೂ ವಂದನೆ ಸಲ್ಲಿಸಿದ ನಂತರ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ಕುಲಸಚಿವ ಮತ್ತು ಸದಸ್ಯ ಕಾರ್ಯದರ್ಶಿ** | **ಕುಲಪತಿ ಮತ್ತು ಅಧ್ಯಕ್ಷರು**

# ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ದಿನಾಂಕ 18-09-2017ರಂದು ಪೂರ್ವಾಹ್ನ 11-00 ಗಂಟೆಗೆ ಜರುಗಿದ ಸಿಂಡಿಕೇಟಿನ ಆರನೇ ಸಾಮಾನ್ಯ ಸಭೆಯ ನಡೆವಳಿಗಳು.

**ಹಾಜರಿದ್ದ ಸದಸ್ಯರು:**

| | | | |
|---|---|---|---|
| 1. | ಪ್ರೊ. ದಯಾನಂದ ಮಾನೆ | – | ಕುಲಪತಿಗಳು(ಪ್ರಭಾರ) ಹಾಗೂ ಅಧ್ಯಕ್ಷರು |
| 2. | ಡಾ. ನಿಂಗಮ್ಮ ಸಿ.ಬೆಟ್ಸೂರ್ | – | ಸದಸ್ಯರು |
| 3. | ಶ್ರೀ ಪುಷ್ಪಕುಮಾರ್ ಎಂ.ವಿ. | – | ಸದಸ್ಯರು |
| 4. | ಡಾ. ಎಂ.ಸಿ.ನಟರಾಜ | – | ಸದಸ್ಯರು |
| 5. | ಶ್ರೀ ಕೆ.ಎಂ.ಕಾಳೇಗೌಡ | – | ಸದಸ್ಯರು |
| 6. | ಪ್ರೊ. ಡಿ. ನಂಜುಂಡಯ್ಯ | – | ಸದಸ್ಯರು |
| 7. | ಶ್ರೀ ಲಯನ್ ಹೆಚ್. ರಮೇಶ್, | – | ಸದಸ್ಯರು |
| 8. | ಶ್ರೀ ಮಹಮದ್‌ಅಬ್ದುಸ್ಸಲಾಂ | – | ಸದಸ್ಯರು |
| 9. | ಶ್ರೀ ಕುಮಾರ್ | – | ಸದಸ್ಯರು |
| 10. | ಶ್ರೀಮತಿ ಶೃತಿತರುಣ್‌ಗಿರಿ | – | ಸದಸ್ಯರು |
| 11. | ಶ್ರೀ ಎಂ.ಎಸ್.ಎಸ್. ಕುಮಾರ್ | – | ಸದಸ್ಯರು |
| 12. | ಪ್ರೊ. ಜೆ. ಸೋಮಶೇಖರ್ | – | ಸದಸ್ಯರು |
| | ಕುಲಸಚಿವ(ಪರೀಕ್ಷಾಂಗ) | – | ಸದಸ್ಯರು |
| 13. | ಶ್ರೀಮತಿ ಡಿ.ಭಾರತಿ, ಕೆ.ಎ.ಎಸ್ | – | ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು |

**ಹಾಜರಾಗದ ಸದಸ್ಯರು:**

1. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
3. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
4. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
5. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
6. ಶ್ರೀಮತಿ ಎಂ.ಎನ್.ಪೊನ್ನಮ್ಮ, ಸಿಂಡಿಕೇಟ್ ಸದಸ್ಯರು

ಮೊದಲಿಗೆ ಸನ್ಮಾನ್ಯ ಕುಲಪತಿಗಳು ಸಿಂಡಿಕೇಟ್‌ನ ವಿಶೇಷ ಸಭೆಗೆ ಆಗಮಿಸಿದ್ದ ಎಲ್ಲಾ ಸದಸ್ಯರುಗಳನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿ, ಇತ್ತೀಚೆಗೆ ನಿಧನರಾದ ಜರ್ನಲಿಸ್ಟ್ ಶ್ರೀಮತಿ ಗೌರಿ ಲಂಕೇಶ್ ಅವರ ಆತ್ಮಕ್ಕೆ ಶಾಂತಿ ಕೋರಿ ಗೌರವಾರ್ಥ ಸಭೆಯಲ್ಲಿ ಎರಡು ನಿಮಿಷಗಳ ಮೌನವನ್ನು ಆಚರಿಸಲಾಯಿತು.

ನಂತರ ಕಾರ್ಯಸೂಚಿಯನ್ನು ಕೈಗೆತ್ತಿಗೊಳ್ಳಲಾಯಿತು.

| | |
|---|---|
| **ವಿಷಯ ಸಂಖ್ಯೆ: I** | ದಿನಾಂಕ 03-08-2017ರಂದು ನಡೆದ ಸಿಂಡಿಕೇಟಿನ ಐದನೇ ಸಾಮಾನ್ಯ ಸಭೆಯ ನಡಾವಳಿಗಳನ್ನು ದೃಢೀಕರಿಸುವ ಬಗ್ಗೆ. |
| **ತೀರ್ಮಾನ :** | ದಿನಾಂಕ 03-08-2017ರಂದು ಜರುಗಿದ ಸಿಂಡಿಕೇಟ್ ಸಭೆಯ ವಿಷಯ ಸಂಖ್ಯೆ: 2017/8.38ಕ್ಕೆ ಸಂಬಂಧಿಸಿದಂತೆ, Centre for Geoinformatics Technology, UOM and HERE solution India Pvt.Ltd., Mumbai and Sai Sakthi Global Infra Survey Pvt.Ltd., Chennai, ಇವರ ನಡುವಣ ಒಡಂಬಡಿಕೆ ಮಾಡಿಕೊಳ್ಳುವುದಕ್ಕೆ ಸಂಬಂಧಿಸಿದಂತೆ ಸಭೆಯ ನಡಾವಳಿಯಲ್ಲಿ **"ಒಡಂಬಡಿಕೆ** |

| | |
|---|---|
| | **ಮಾಡಿಕೊಂಡಿರುವುದನ್ನು ಸಿಂಡಿಕೇಟ್ ಅನುಮೋದಿಸಿತು"** ಎಂಬ ನಾಗಿ ದಾಖಲಾಗಿರುವುದರಿಂದ ಅದರ ಬದಲಿಗೆ **"ಒಡಂಬಡಿಕೆ ಮಾಡಿಕೊಳ್ಳಲು ಸಿಂಡಿಕೇಟ್ ಅನುಮೋದನೆ ನೀಡಿತು"** ಎಂಬತಿದ್ದುಪಡಿಯೊಡನೆ ನಡಾವಳಿಯನ್ನು ಸಭೆಯು ದೃಢೀಕರಿಸಿತು.<br>ವಿಷಯ ಸಂಖ್ಯೆ: 2017/8.3ರ ತೀರ್ಮಾನಕ್ಕೆ ಸಂಬಂಧಿಸಿದಂತೆ ಪ್ರಾರಂಭದಲ್ಲಿ "ದಿನಾಂಕ 20-06-2017 ಮತ್ತು 1-7-2017ರಂದು ನಡೆದ ವಿದ್ಯಾರ್ಥಿ ಕ್ಷೇಮಪಾಲನಾ ಕಚೇರಿಗೆ ಸಂಬಂಧಿಸಿದ 2017-18ನೇ ಶೈಕ್ಷಣಿಕ ಸಾಲಿನ ವಿದ್ಯಾರ್ಥಿನಿಲಯಗಳ ಆಡಳಿತ, ನಿರ್ವಹಣೆ ಹಾಗೂ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ಸಲಹಾ ಸಮಿತಿ ಸಭೆಯ ಶಿಫಾರಸ್ಸಿನ ನಡಾವಳಿಯನ್ನು ಸಿಂಡಿಕೇಟ್ ಅನುಮೋದಿಸಿತು" ಎಂಬ ಸೇರ್ಪಡೆಯೊಂದಿಗೆ ನಡಾವಳಿಯನ್ನು ಸಭೆಯು ದೃಢೀಕರಿಸಿತು. |
| **ವಿಷಯ ಸಂಖ್ಯೆ: II** | ದಿನಾಂಕ 03-08-2017ರಂದು ನಡೆದ ಸಿಂಡಿಕೇಟಿನ ಐದನೇ ಸಾಮಾನ್ಯ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನಗಳ ಬಗ್ಗೆ ಕ್ರಮ ಕೈಗೊಂಡ ವರದಿ |
| **ತೀರ್ಮಾನ :** | ಗಮನಿಸಲಾಯಿತು. |
| **2017/9.1** | ಇತಿಹಾಸ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಿಸಿರುವ ಬಗ್ಗೆ- ಅನುಸಮರ್ಥನೆಗಾಗಿ |
| **ತೀರ್ಮಾನ :** | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 34(7)ರ ಪ್ರಕಾರ, ಇತಿಹಾಸ ಅಧ್ಯಯನ ವಿಭಾಗದಲ್ಲಿನ ದೈನಂದಿನ ಕಾರ್ಯಚಟುವಟಿಕೆಗಳು ಸುಲಲಿತವಾಗಿ ನಡೆಯುವ ಉದ್ದೇಶದಿಂದ ಜೇಷ್ಠತೆಯಲ್ಲಿ ಹಿರಿಯರಾದ **ಪ್ರೊ.ವೈ.ಹೆಚ್.ನಾಯಕ್‌ವಾಡಿ**ರವರನ್ನು ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಿ ಆದೇಶಿಸಿರುವುದನ್ನು ಸಿಂಡಿಕೇಟ್ ಅನುಸಮರ್ಥಿಸಿತು. |
| **2017/9.2** | ಕಾರ್ಯದರ್ಶಿ, ದಸರಾ ಚಲನಚಿತ್ರೋತ್ಸವ ಉಪಸಮಿತಿ, ಮೈಸೂರು ದಸರಾಮಹೋತ್ಸವ-2016, ಮೈಸೂರು ಇವರ ಮನವಿಯನ್ನು ಸಿಂಡಿಕೇಟ್ ಸಭೆಯ ಪರಿಶೀಲನೆಗೆ ಹಾಗೂ ನಿರ್ಣಯಕ್ಕೆ ಮಂಡಿಸುವ ಬಗ್ಗೆ. |
| **ತೀರ್ಮಾನ :** | 1. ದಸರಾ ಚಲನ ಚಿತ್ರೋತ್ಸವ ಉಪಸಮಿತಿಯವರಿಗೆಈಗಾಗಲೇ 2016ನೇ ಕ್ಯಾಲೆಂಡರ್ ವರ್ಷದಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸಲು ಆಡಿಟೋರಿಯಂಗಳನ್ನು ನೀಡಲಾಗಿದ್ದು ದಸರಾ ಕಾರ್ಯಕ್ರಮಗಳ ಅಂಗವಾಗಿ ಪಾವತಿಸಬೇಕಾಗಿದ್ದ ಒಟ್ಟು ಮೊತ್ತ ರೂ. 2,40,000/-ಗಳಿಗೆ ವಿನಾಯಿತಿ ನೀಡುವಂತೆ ಕೋರಿರುವ ಮನವಿಯನ್ನು ಪರಿಶೀಲಿಸಿದ ಸಿಂಡಿಕೇಟ್ ಈಗಾಗಲೇ ಕಳೆದ ಸಾಲಿನ ದಸರಾ ಕಾರ್ಯಕ್ರಮಕ್ಕೆ ನೀಡಿರುವುದರಿಂದ ಮತ್ತು ಸದರಿ ವಿಷಯವು ಆಡಿಟ್ ಆಕ್ಷೇಪಣೆಗೊಳಪಡುವ ಸಾಧ್ಯತೆಗಳಿರುವುದರಿಂದ ಇದೊಂದು ವಿಶೇಷ ಸಂದರ್ಭವೆಂದು ವಿನಾಯಿತಿ ನೀಡಿ ಕನಿಷ್ಠ ಸದರಿ ಮೊತ್ತದ ಶೇ. 10ರಷ್ಟು ಶುಲ್ಕವನ್ನು ನಿರ್ವಹಣಾ ಶುಲ್ಕವಾಗಿ ದಸರಾ ಚಲನ ಚಿತ್ರೋತ್ಸವ ಉಪಸಮಿತಿಯ ಕಾರ್ಯಾಧ್ಯಕ್ಷರಿಗೆ ಪತ್ರ ಬರೆದು ಪಾವತಿಸುವಂತೆ ಕೋರಲು ಮತ್ತು ಇದೇ ನಿಯಮವನ್ನು ಮುಂದೆಯೂ ಅನುಸರಿಸಲು ಸಿಂಡಿಕೇಟ್ ತೀರ್ಮಾನಿಸಿತು.<br>2. ಮುಂದುವರೆದು, ದಸರಾ ಕಾರ್ಯಕ್ರಮವು ನಾಡಹಬ್ಬವಾಗಿರುವುದರಿಂದ, ದಸರಾ ಚಲನಚಿತ್ರೋತ್ಸವ ಕಾರ್ಯಕ್ರಮ ಮತ್ತು ದಸರಾ ಹಬ್ಬದ ಅಂಗವಾಗಿ ಇನ್ನಿತರೆ ಕಾರ್ಯಕ್ರಮಗಳಿಗಾಗಿ ಸೆನೆಟ್ ಭವನ, ರಾಣಿ ಬಹದ್ದೂರ್ ಮತ್ತು ಇತರೆ ಸಭಾಂಗಣಗಳನ್ನು ನೀಡುವಾಗ ವಿದ್ಯುತ್ ಮತ್ತು ಇತರೆ ವೆಚ್ಚಗಳನ್ನು ವಿಶ್ವವಿದ್ಯಾನಿಲಯವು ಭರಿಸಬೇಕಾಗಿರುವುದರಿಂದ ನಿಯಮಾನುಸಾರ ಪಾವತಿಸಬೇಕಾದ ಒಟ್ಟು ಮೊತ್ತದ ಮೇಲೆ ಶೇ.10ರಷ್ಟು ಮಾತ್ರ ಇನ್ನೂ ಮುಂದೆ ನಿರ್ವಹಣಾ ವೆಚ್ಚವಾಗಿ ಶುಲ್ಕವನ್ನು ವಿಧಿಸಲು; ಹಾಗೂ<br>3. ಬಹದ್ದೂರ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ವಿಭಾಗದ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಖಾಸಗಿ/ಸರ್ಕಾರಿ ಕಾರ್ಯಕ್ರಮಗಳಿಗೆ ರಜಾ ದಿನಗಳಲ್ಲಿ ಮಾತ್ರ ಸಭಾಂಗಣವನ್ನು ನೀಡಲು ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳು ಆಯೋಜಿಸುವ ಕಾರ್ಯಕ್ರಮಗಳಿಗೆ ಮಾತ್ರ ವಿಭಾಗದ ಶೈಕ್ಷಣಿಕ ಚಟುವಟಿಕೆಗಳಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ವಿಭಾಗದ ಅಧ್ಯಕ್ಷರ ಅನುಮತಿಯೊಂದಿಗೆ ಬಳಸಿಕೊಳ್ಳಲು ಸಿಂಡಿಕೇಟ್ ತೀರ್ಮಾನಿಸಿತು. |

| | |
|---|---|
| **2017/9.3** | ವಿಶ್ವವಿದ್ಯಾನಿಲಯದಲ್ಲಿ ರಾಷ್ಟ್ರೀಯ ಡಿಜಿಟಲ್ ಪಾವತಿ ಬಗೆಗೆ. |
| **ತೀರ್ಮಾನ :** | ವಿಶ್ವವಿದ್ಯಾನಿಲಯಗಳಲ್ಲಿ ರಾಷ್ಟ್ರೀಯ ಡಿಜಿಟಲ್ ಪಾವತಿ ಬಗ್ಗೆ ಮಾನವ ಸಂಪನ್ಮೂಲ ಇಲಾಖೆ, ಭಾರತ ಸರ್ಕಾರ ಇವರು ಯುಜಿಸಿ ನವದೆಹಲಿ ಇಲ್ಲಿನ ಸಲಹಾ ಸಮಿತಿಯಲ್ಲಿ ಎಲ್ಲಾ ರಾಜ್ಯಗಳ ವಿಶ್ವವಿದ್ಯಾನಿಲಯಗಳಲ್ಲಿ ಡಿಜಿಟಲ್ ಮೋಡ್ ಆಫ್ ಪೇಮೆಂಟ್ ಮಿಷನ್ ಜಾರಿ ಮಾಡಲು ಸೂಚಿಸಲಾಗಿದ್ದು, ಅದರಂತೆ, ವಿಶ್ವವಿದ್ಯಾನಿಲಯಕ್ಕೆ ರಾಷ್ಟ್ರದ ಹಲವು ಬ್ಯಾಂಕುಗಳ ಮೂಲಕ ವಿದ್ಯಾರ್ಥಿಗಳು, ಸಂಸ್ಥೆಗಳು, ಕಾಲೇಜುಗಳು, ಇನ್ನಿತರರು ವಿಶ್ವವಿದ್ಯಾನಿಲಯಕ್ಕೆ ಹಣಪಾವತಿಸಲು ಮತ್ತು ವಿಶ್ವವಿದ್ಯಾನಿಲಯದಿಂದ ಹೊರಗಿನವರಿಗೆ ಹಣವನ್ನು ಪಾವತಿಸಲು ಅನೇಕ ಅನುಕೂಲಗಳಿರುವುದರಿಂದ ವಿಶ್ವವಿದ್ಯಾನಿಲಯದ ಎಲ್ಲಾ ಹಣಕಾಸು ವಹಿವಾಟನ್ನು ಯುಜಿಸಿ ಪತ್ರದ ಪ್ರಕಾರ ರಾಷ್ಟ್ರೀಯ ಡಿಜಿಟಲ್ ಪಾವತಿ ಮೂಲಕ ನಡೆಸಲು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶಾಖೆಯ ವ್ಯವಸ್ಥಾಪಕರು ಸಲ್ಲಿಸಿರುವ ಪ್ರಸ್ತಾವನೆಯನ್ನು ಜಾರಿಗೊಳಿಸಲು ಸಿಂಡಿಕೇಟ್ ಅನುಮೋದಿಸಿತು. |
| **2017/9.4** | ಮೈಸೂರು ವಿಶ್ವವಿದ್ಯಾನಿಲಯ ಹಳೆ ವಿದ್ಯಾರ್ಥಿಗಳ (ಅಲುಮ್ನಿ) ಸಂಘದ ಸದಸ್ಯತ್ವದ ನೊಂದಣಿ ಶುಲ್ಕದ ಸಂಬಂಧ ಹೊರಡಿಸಿರುವ ವಿಶ್ವವಿದ್ಯಾನಿಲಯದ ಆದೇಶವನ್ನು ರದ್ದುಗೊಳಿಸುವ ಬಗೆಗೆ. |
| **ತೀರ್ಮಾನ :** | ಮೈಸೂರು ವಿಶ್ವವಿದ್ಯಾನಿಲಯ ಹಳೆ ವಿದ್ಯಾರ್ಥಿಗಳ (ಅಲುಮ್ನಿ) ಸಂಘದ ಸದಸ್ಯತ್ವದ ನೊಂದಣಿ ಶುಲ್ಕದ ಸಂಬಂಧ ಹೊರಡಿಸಿರುವ ವಿಶ್ವವಿದ್ಯಾನಿಲಯದ ಆದೇಶವನ್ನು ಮತ್ತು ಇದಕ್ಕೆ ಸಂಬಂಧಪಟ್ಟ ಹಾಗೆ ಹಣಕಾಸು ಅಧಿಕಾರಿಯವರು ನೀಡಿರುವ ಅಭಿಪ್ರಾಯವನ್ನು ಸಿಂಡಿಕೇಟ್ ಕೂಲಂಕಷವಾಗಿ ಪರಿಶೀಲಿಸಿತ್ತಲ್ಲದೇ ಈ ಕೆಳಕಂಡಂತೆ ನಿರ್ಣಯವನ್ನು ಕೈಗೊಂಡಿತು.<br>ಮೈಸೂರು ವಿಶ್ವವಿದ್ಯಾನಿಲಯ ಹಳೆ ವಿದ್ಯಾರ್ಥಿಗಳ (ಅಲುಮ್ನಿ) ಸಂಘದಲ್ಲಿ ಸದಸ್ಯತ್ವವನ್ನು ಪದವೀಧರರು ಸ್ವಇಚ್ಚೆಯಿಂದ ಪಡೆಯಬೇಕಾಗಿರುವುದರಿಂದ, ವಿದ್ಯಾರ್ಥಿಗಳು ಇನ್ನೂ ವ್ಯಾಸಂಗ ಮಾಡುತ್ತಿರುವಾಗಲೇ ಬಲವಂತವಾಗಿ ಅಲುಮ್ನಿ ಶುಲ್ಕವನ್ನು ವಸೂಲಿ ಮಾಡುವುದು ಸರಿಯಲ್ಲವೆಂದು ಭಾವಿಸಿದ ಸಿಂಡಿಕೇಟ್ ಅಲುಮ್ನಿ ಅಸೋಸಿಯೇಷನ್ ಶುಲ್ಕವನ್ನು ವಸೂಲಿ ಮಾಡುವ ಸಂಬಂಧ ಹೊರಡಿಸಿರುವ ವಿಶ್ವವಿದ್ಯಾನಿಲಯದ ಆದೇಶವನ್ನು ರದ್ದುಗೊಳಿಸಲು ತೀರ್ಮಾನಿಸಿತು. ಮತ್ತು ಮೈಸೂರು ವಿಶ್ವವಿದ್ಯಾನಿಲಯದ ಘಟಿಕೋತ್ಸವ ಸಂದರ್ಭದಲ್ಲಿ ಸದಸ್ಯತ್ವವನ್ನು ಹೊಂದಲು ಯಾರಿಗೆ ಇಚ್ಚೆ ಇರುತ್ತದೋ ಅಂತಹವರಿಂದ ಸಂಘವು ನಿಗಧಿಪಡಿಸುವ ಶುಲ್ಕದೊಂದಿಗೆ ಹಳೆ ವಿದ್ಯಾರ್ಥಿಗಳ (ಅಲುಮ್ನಿ) ಸಂಘದ ಸದಸ್ಯತ್ವದ ನೊಂದಣಿಗೆಅವಕಾಶವನ್ನು ವಿಶ್ವವಿದ್ಯಾನಿಲಯದ ವತಿಯಿಂದ ಕಲ್ಪಿಸಬಹುದಾಗಿದೆಯೆಂದು ಸಿಂಡಿಕೇಟ್ ತೀರ್ಮಾನಿಸಿತು. |
| **2017/9.5** | ಜೈವಿಕ ತಂತ್ರಜ್ಞಾನ ಅಧ್ಯಯನ ವಿಭಾಗದಲ್ಲಿ ಕಾರ್ಯಗತಗೊಂಡಿರುವ ಐಸಿಎಆರ್ ಡಿಎಂಆರ್‌ಎಲ್ ಯೋಜನೆಯಲ್ಲಿ ತಾತ್ಕಾಲಿಕವಾಗಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸೇವೆಯನ್ನು 2017–18ನೇ ಸಾಲಿನಿಂದ 2019–20ನೇ ಸಾಲಿನವರೆಗೆ ಮುಂದುವರಿಸುವ ಬಗ್ಗೆ. |
| **ತೀರ್ಮಾನ :** | ಜೈವಿಕ ತಂತ್ರಜ್ಞಾನ ಅಧ್ಯಯನ ವಿಭಾಗದಲ್ಲಿ ಕಾರ್ಯಗತಗೊಂಡಿರುವ ಐಸಿಎಆರ್ ಡಿಎಂಆರ್‌ಎಲ್ ಯೋಜನೆಯಲ್ಲಿ ತಾತ್ಕಾಲಿಕವಾಗಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಲ್ಲಿ ಡಾ. ಎಸ್.ಚಂದ್ರನಾಯಕ್, ಪ್ರಿನ್ಸಿಪಾಲ್ ಸೈಂಟಿಸ್ಟ್ ಮತ್ತು ಶ್ರೀಮತಿ ಲಾವಣ್ಯ,ಟೆಕ್ನಿಕಲ್ ಅಸಿಸ್ಟೆಂಟ್ ಅವರು ಈ ಹಲವು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿರುವುದರಿಂದ ಅವರನ್ನು ಮುಂದುವರೆಸಲು ಸಿಂಡಿಕೇಟ್ ತೀರ್ಮಾನಿಸಿತಲ್ಲದೇ ಡಾ. ಎ.ಸಿ.ಉದಯಶಂಕರ್, ಸಹಾಯಕ ಪ್ರಾಧ್ಯಾಪಕರು ಹಾಗೂಶ್ರೀ ಪ್ರದೀಪ್,ಟೆಕ್ನಿಕಲ್ ಅಸಿಸ್ಟೆಂಟ್ ಇವರು ಪ್ರಾಜೆಕ್ಟ್‌ಗೆ ನೇಮಕಗೊಂಡಿರುವ ಸಂಪೂರ್ಣ ವಿವರವನ್ನು ಮುಂದಿನ ಸಿಂಡಿಕೇಟ್‌ಗೆ ಮಂಡಿಸಿದ ನಂತರ ಸದರಿ ಪ್ರಾಜೆಕ್ಟ್ ಅನ್ನು ಮುಂದಿನ ಮೂರು ವರ್ಷದ ಅವಧಿಗೆ ಮುಂದುವರೆಸುವುದರ ಬಗೆಗೆ ಪರಿಶೀಲಿಸಿ ಸೂಕ್ತ ನಿರ್ಣಯ ಕೈಗೊಳ್ಳಲು ಸಿಂಡಿಕೇಟ್ ತೀರ್ಮಾನಿಸಿತು. |
| **2017/9.6** | ವಿಶೇಷ ದಂಡಶುಲ್ಕಗಳನ್ನು ನಿಗಧಿಪಡಿಸುವ ಬಗ್ಗೆ. |
| **ತೀರ್ಮಾನ :** | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪಿಹೆಚ್.ಡಿ. ಸಂಶೋಧನೆಗೆ ನೊಂದಣಿ ಮಾಡಿಸಿ, ಸಂಶೋಧನೆಯಲ್ಲಿ ನಿರತರಾಗಿರುವ ಕೆಲವು ಅಭ್ಯರ್ಥಿಗಳು ಅನಿವಾರ್ಯ ಕಾರಣಗಳಿಂದಾಗಿ ಸಂಶೋಧನಾ ಕಾರ್ಯದ ಪ್ರಗತಿ ವರದಿ ಮತ್ತು ಶುಲ್ಕವನ್ನು ನಿಗಧಿತ ವೇಳೆಯಲ್ಲಿ ಸಲ್ಲಿಸದೇ ಸಂಶೋಧನಾ ಕಾರ್ಯವನ್ನು ಮುಂದುವರೆಸಲು ಅನುಮತಿ ಕೋರುವಂತಹ ಅಭ್ಯರ್ಥಿಗಳಿಗೆ |

ವಿಳಂಬ ಮನ್ನಾ ಮಾಡಿ ಅನುಮತಿ ನೀಡುವ ಸಂಬಂಧ ನಿಗಧಿತ ಶುಲ್ಕಗಳೊಂದಿಗೆ ಈ ಕೆಳಗೆ ವಿಧಿಸಿರುವಂತೆ ದಂಡಶುಲ್ಕವವನ್ನು ವಿಧಿಸಲು ಸಲ್ಲಿಸಿರುವ ಪ್ರಸ್ತಾವನೆಯನ್ನು ಸಿಂಡಿಕೇಟ್ ಅನುಮೋದಿಸಿತು.

| ಕ್ರಸಂ. | ಅವಧಿ | ದಂಡಶುಲ್ಕ |
|---|---|---|
| 1 | 06 ತಿಂಗಳವರೆಗೆ | 1,000–00 |
| 2 | 06 ರಿಂದ 01 ವರ್ಷದವರೆಗೆ | 1,500–00 |
| 3 | 01 ವರ್ಷದಿಂದ 02 ವರ್ಷದವರೆಗೆ | 3,000–00 |
| 4 | 02 ವರ್ಷದಿಂದ 03 ವರ್ಷದವರೆಗೆ | 4,000–00 |
| 5 | 03 ವರ್ಷಕ್ಕೂ ಮೇಲ್ಪಟ್ಟು | 5,000–00 |
| 6 | ಕೋರ್ಸ್‌ವರ್ಕ್ ಪರೀಕ್ಷೆ ಫಲಿತಾಂಶ ಪ್ರಕಟಿಸಿದ ದಿನಾಂಕದಿಂದ 06 ತಿಂಗಳ ಒಳಗೆ ಖಾಯಂ ನೊಂದಣಿ ಮಾಡದಿರುವ ಪ್ರಕರಣಗಳಿಗೆ | 2,000–00 |
| 7 | ಐದು ವರ್ಷ ನಂತರ ಅವಧಿ ವಿಸ್ತರಣೆ ಕೋರುವ ಅಭ್ಯರ್ಥಿಗಳಿಗೆ ವಿಶೇಷ ದಂಡಶುಲ್ಕ | 2,000–00 |

| | |
|---|---|
| **2017/9.7** | ಕೃಷ್ಣ, ಡಿ.ಎಸ್. ಸಂಶೋಧನಾ ಅಭ್ಯರ್ಥಿ, ಇವರು ಮಹಾಪ್ರಬಂಧವನ್ನು ಸಲ್ಲಿಸಲು ಒಂದು ವರ್ಷ ಹೆಚ್ಚುವರಿ ಕಾಲಾವಕಾಶ ಕೋರಿರುವ ಬಗ್ಗೆ. |
| **ತೀರ್ಮಾನ :** | ಶ್ರೀ ಕೃಷ್ಣ. ಡಿ.ಎಸ್, ಸಂಶೋಧನಾ ಅಭ್ಯರ್ಥಿ, ಸಮಾಜ ಕಾರ್ಯ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ಸಂಶೋಧನಾ ಕಾರ್ಯವನ್ನು ನಿರ್ವಹಿಸುತ್ತಿದ್ದು, ಇವರಿಗೆ ದಿನಾಂಕ 24-09-2010ರಿಂದ ಜಾರಿಗೆ ಬಂದಂತೆ ನೋಂದಣಿಯನ್ನು ನೀಡಲಾಗಿದ್ದು ಹಾಗೂ ಪಿಎಚ್.ಡಿ. ನಿಯಮಾನುಸಾರ ದಿನಾಂಕ 24-09-2015ರಿಂದ 2 ವರ್ಷಗಳ ಅವಧಿಗೆ ವಿಸ್ತರಣೆಯನ್ನು ಸಹ ನೀಡಲಾಗಿದೆ. ಆದರೆ 2010ರ ಪಿಹೆಚ್.ಡಿ. ನಿಯಮಾವಳಿ8.3(e)ಯ ಪ್ರಕಾರ 07 ವರ್ಷಗಳ ನಿಗಧಿತ ಸಮಯದ ಒಳಗೆ ಮಹಾಪ್ರಬಂಧವನ್ನು ಸಲ್ಲಿಸದಿದ್ದಲ್ಲಿ ಅಂತಹ ಸಂಶೋಧನಾ ಅಭ್ಯರ್ಥಿಯ ನೊಂದಣಿಯು ತಂತಾನೆ ರದ್ದುಗೊಳ್ಳುವುದರಿಂದ ಇವರ ನೊಂದಣಿಯು ದಿನಾಂಕ 23-09-2017ಕ್ಕೆ 7 ವರ್ಷಗಳು ಪೂರ್ಣಗೊಳ್ಳುವುದರಿಂದ ಸದರಿಯವರ ಮತ್ತೊಂದು ವರ್ಷ ಹೆಚ್ಚುವರಿ ಕಾಲಾವಕಾಶದ ಕೋರಿಕೆಯನ್ನು ಪರಿಗಣಿಸದಿರಲು ಸಿಂಡಿಕೇಟ್ ತೀರ್ಮಾನಿಸಿತು. |
| **2017/9.8** | ಕೆ. ಅನಂತಗೌಡ. ಸಂಶೋಧನಾ ಅಭ್ಯರ್ಥಿ ಇವರು ಮಹಾಪ್ರಬಂಧವನ್ನು ಸಲ್ಲಿಸಲು ಆರು ತಿಂಗಳುಗಳ ಹೆಚ್ಚುವರಿ ಕಾಲಾವಕಾಶ ಕೋರಿರುವ ಬಗ್ಗೆ. |
| **ತೀರ್ಮಾನ :** | ಶ್ರೀ ಕೆ. ಅನಂತಗೌಡ. ಸಂಶೋಧನಾ ಅಭ್ಯರ್ಥಿ, ಸಮಾಜ ಕಾರ್ಯ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರುಇವರು ಸಂಶೋಧನಾ ಕಾರ್ಯವನ್ನು ನಿರ್ವಹಿಸುತ್ತಿದ್ದು, ಇವರಿಗೆ ದಿನಾಂಕ 14-09-2010ರಿಂದ ಜಾರಿಗೆ ಬಂದಂತೆ ನೋಂದಣಿಯನ್ನು ನೀಡಲಾಗಿದ್ದು ಹಾಗೂ ಪಿಎಚ್.ಡಿ. ನಿಯಮಾನುಸಾರ ದಿನಾಂಕ 14-09-2015ರಿಂದ 2 ವರ್ಷಗಳ ಅವಧಿಗೆ ವಿಸ್ತರಣೆಯನ್ನು ಸಹ ನೀಡಲಾಗಿದೆ. ಆದರೆ 2010ರ ಪಿಹೆಚ್.ಡಿ. ನಿಯಮಾವಳಿ 8.3(e)ಯ ಪ್ರಕಾರ 07 ವರ್ಷಗಳ ನಿಗಧಿತ ಸಮಯದ ಒಳಗೆ ಮಹಾಪ್ರಬಂಧವನ್ನು ಸಲ್ಲಿಸದಿದ್ದಲ್ಲಿ ಅಂತಹ ಸಂಶೋಧನಾ ಅಭ್ಯರ್ಥಿಯ ನೊಂದಣಿಯು ತಂತಾನೆ ರದ್ದುಗೊಳ್ಳುವುದರಿಂದ ಇವರ ನೊಂದಣಿಯು ದಿನಾಂಕ 14-09-2017ಕ್ಕೆ 7 ವರ್ಷಗಳು ಪೂರ್ಣಗೊಳ್ಳುವುದರಿಂದ ಸದರಿಯವರ ಮತ್ತೊಂದು ವರ್ಷ ಹೆಚ್ಚುವರಿ ಕಾಲಾವಕಾಶದ ಕೋರಿಕೆಯನ್ನು ಪರಿಗಣಿಸದಿರಲು ಸಿಂಡಿಕೇಟ್ ತೀರ್ಮಾನಿಸಿತು. |
| **2017/9.9** | ಕೇಂದ್ರ ಲೆಕ್ಕಪರಿಶೋಧನಾ ಕಛೇರಿಯಿಂದ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಕೆಯಾಗಿರುವ ಆಡಿಟ್ ವಿಚಾರಣೆಗಳ ಸಂಬಂಧ ಕ್ರಮ ಕೈಗೊಳ್ಳುವ ಬಗ್ಗೆ. |
| **ತೀರ್ಮಾನ :** | ಕೇಂದ್ರ ಆಡಿಟರ್ ಜನರಲ್, ಬೆಂಗಳೂರು ಅವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ದಿನಾಂಕ 06-07-2017ರಿಂದ 08-07-2017ರವರೆಗೆ ನಡೆಸಿದ ಲೆಕ್ಕ ಪರಿಶೋಧನಾ ತಪಾಸಣೆಗೆ ಸಂಬಂಧಿಸಿದಂತೆ, ವಿಚಾರಣಾ ವರದಿಯಲ್ಲಿ ಬೋಧಕರಿಗೆ ನೀಡಿರುವ ವೇತನ ಸಂರಕ್ಷಣೆ, |

| | |
|---|---|
| | ಹಳೆಯ ಪಿಂಚಣಿ ಸೌಲಭ್ಯ, ಯುಜಿಸಿಯ ಪರಿಷ್ಕೃತ ವೇತನ ವಿಸ್ತರಣೆ, ಉಪನ್ಯಾಸಕರಾಗಿ ಉನ್ನತೀಕರಣಗೊಂಡಿರುವ ಅಧ್ಯಾಪಕರುಗಳಿಗೆ ವಿಸ್ತರಿಸಿರುವ ಸೌಲಭ್ಯ, ವಿಶ್ವವಿದ್ಯಾನಿಲಯ ಗ್ರಂಥಪಾಲಕರಿಗೆ ವಿಸ್ತರಿಸಿರುವ ವೇತನ ಸೌಲಭ್ಯ ಹಾಗೂ ಇತರೆ ವಿಷಯಗಳ ಬಗ್ಗೆ ಆಕ್ಷೇಪಣೆಯನ್ನು ಸಲ್ಲಿಸಿರುವುದರಿಂದ, ಆಕ್ಷೇಪಿತ ಉದ್ಯೋಗಿಗಳಿಗೆ ಏಳು ದಿನಗಳ ಗಡುವು ನೀಡಿ ಒಂದು ಕಾರಣ ಕೇಳುವ ನೋಟಿಸ್ ಜಾರಿಮಾಡಿ ಅವರಿಂದ ಉತ್ತರ ಸ್ವೀಕರಿಸಲು ಹಾಗೂ ಈ ಕೆಳಕಂಡಂತೆ ಒಂದು ಉಪ ಸಮಿತಿಯನ್ನು ರಚಿಸಲು ತೀರ್ಮಾನಿಸಿತು. ಮತ್ತು ಕೇಂದ್ರ ಆಡಿಟರ್ ಜನರಲ್, ಬೆಂಗಳೂರು ಇವರಿಂದ ಆಡಿಟ್ ವಿಚಾರಣೆಯ (Audit Enquiry)ಸಂಬಂಧ ಅಪೂರ್ಣ ಮಾಹಿತಿಗಳು ಸ್ವೀಕೃತಗೊಂಡಿದ್ದು ಸಂಪೂರ್ಣ Audit Enquiryಗಳನ್ನು ತರಿಸಿಕೊಂಡು ಆನಂತರ ಕ್ರಮಕೈಗೊಂಡಿರುವ ಬಗ್ಗೆ ವರದಿಯನ್ನು ಕೇಂದ್ರ ಆಡಿಟರ್ ಜನರಲ್, ಬೆಂಗಳೂರು ಇವರಿಗೆ ವರದಿ ಸಲ್ಲಿಸಲು ಸಹ ಸಿಂಡಿಕೇಟ್ ನಿರ್ಣಯಿಸಿತು.<br><br>**ಸಿಂಡಿಕೇಟ್ ಉಪಸಮಿತಿಯ ಸದಸ್ಯರು**<br><br>1. ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು — **ಅಧ್ಯಕ್ಷರು**<br>2. ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು — **ಸದಸ್ಯರು**<br>3. ಕುಲಪತಿಗಳಿಂದ ಸಿಂಡಿಕೇಟ್‌ಗೆ ನಾಮನಿರ್ದೇಶಿತಗೊಂಡ ಒಬ್ಬರು ಡೀನರು — **ಸದಸ್ಯರು**<br>4. ಶ್ರೀ ಎಂ.ಎಸ್.ಎಸ್.ಕುಮಾರ್, ಸಿಂಡಿಕೇಟ್ ಸದಸ್ಯರು — **ಸದಸ್ಯರು**<br>5. ಶ್ರೀ ಮಹಮದ್ ಅಬ್ದುಸ್ಸಲಾಂ, ಸಿಂಡಿಕೇಟ್ ಸದಸ್ಯರು — **ಸದಸ್ಯರು**<br>6. ನಿವೃತ್ತ ಸರ್ಕಾರಿ ಲೆಕ್ಕಪರಿಶೋಧಕರು — **ಸದಸ್ಯರು**<br>7. ಉಪಕುಲಸಚಿವ (ಸಾಮಾನ್ಯ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು — **ಸಂಚಾಲಕರು** |
| **2017/9.10** | ಡಾ. ಚಂದಾವರ ವಿದ್ಯಾ ಆರ್., ಸಹ ಪ್ರಾಧ್ಯಾಪಕರು, ಯುವರಾಜ ಕಾಲೇಜು, ಇವರ ವಿರುದ್ಧ ನಡೆದ ಇಲಾಖಾ ವಿಚಾರಣೆಯ ಅಂತಿಮ ವರದಿಯನ್ನು ನೀಡಿರುವ ಬಗ್ಗೆ. |
| **ತೀರ್ಮಾನ :** | ಡಾ. ಚಂದಾವರ ವಿದ್ಯಾ ಆರ್, ಸಹ ಪ್ರಾಧ್ಯಾಪಕರು, ಯುವರಾಜ ಕಾಲೇಜು, ಇವರ ವಿರುದ್ಧ ನಡೆದ ಶ್ರೀ ಎಸ್.ಎಮ್.ಶಿವಣ್ಣೇಗೌಡರು ನೀಡಿರುವ ಇಲಾಖಾ ವಿಚಾರಣೆಯ ಅಂತಿಮ ವರದಿಯ ಲಕೋಟೆಯನ್ನುಸದಸ್ಯರುಗಳ ಸಮ್ಮುಖದಲ್ಲಿ ತೆರೆಯಲಾಯಿತು. ಸದರಿ ವರದಿಯು ಸುದೀರ್ಘವಾಗಿರುವುದರಿಂದ ವರದಿಯ ಸಾರಾಂಶವನ್ನು ಸಿಂಡಿಕೇಟ್ ಸದಸ್ಯರುಗಳೆಲ್ಲರಿಗೂ ಮುಂದೆ ಜರುಗಲಿರುವ ಸಿಂಡಿಕೇಟ್ ಸಭೆಯ ಕಾರ್ಯಸೂಚಿಯೊಂದಿಗೆ ಕಳುಹಿಸಿ ತದನಂತರಮುಂದಿನ ಸಭೆಯಲ್ಲಿ ತೀರ್ಮಾನಿಸುವ ಉದ್ದೇಶದಿಂದಸದರಿ ವಿಷಯವನ್ನು ಮುಂದೂಡಲು ಸಿಂಡಿಕೇಟ್ ತೀರ್ಮಾನಿಸಿತು. |
| **2017/9.11** | ವಿಶ್ವವಿದ್ಯಾನಿಲಯದಲ್ಲಿ ಸ್ಥಾಪಿಸಲಾಗಿರುವ ಇನ್ಸ್‌ಟಿಟ್ಯೂಷನಲ್ ಹ್ಯೂಮನ್ ಎಥಿಕಲ್ ಕಮಿಟಿಯ ಸಭೆಯಲ್ಲಿ ಭಾಗವಹಿಸುವ ಸದಸ್ಯರಿಗೆ ಸಭಾ ಭತ್ಯೆಯನ್ನು ಪರಿಷ್ಕರಿಸುವ ಬಗ್ಗೆ. |
| **ತೀರ್ಮಾನ :** | ವಿಶ್ವವಿದ್ಯಾನಿಲಯದಲ್ಲಿ ಸ್ಥಾಪಿಸಲಾಗಿರುವ ಇನ್ಸ್‌ಟಿಟ್ಯೂಷನಲ್ ಹ್ಯೂಮನ್ ಎಥಿಕಲ್ ಕಮಿಟಿಯ ಸಭೆಯಲ್ಲಿ ಭಾಗವಹಿಸುವ ಸಭೆಯ ಸದಸ್ಯರುಗಳಿಗೆ ಪ್ರಸ್ತುತ ಪಾವತಿಸುತ್ತಿರುವ ಸಭಾ ಭತ್ಯೆಯನ್ನು ರೂ.500/-ಗಳಿಂದ ರೂ.800/- ಗಳಿಗೆ ಹೆಚ್ಚಿಸಿ ಪರಿಷ್ಕೃತ ಆದೇಶ ಹೊರಡಿಸಲು ಸಿಂಡಿಕೇಟ್ ತೀರ್ಮಾನಿಸಿತು. |
| **2017/9.12** | ಶ್ರೀ ಗಣೇಶ್, ನಿಲಯ ಸಹಾಯಕರು, ಸ್ನಾತಕೋತ್ತರ ಪುರುಷರ ವಿದ್ಯಾರ್ಥಿನಿಲಯ ಬ್ಲಾಕ್-2, ಮಾನಸಗಂಗೋತ್ರಿ, ಮೈಸೂರು, ಇವರ ವಿರುದ್ಧ ದೋಷಾರೋಪಣಾ ಮತ್ತು ಆರೋಪಣಾ ಪಟ್ಟಿಯನ್ನು ಸಿದ್ಧಪಡಿಸಿರುವ ಬಗ್ಗೆ. |
| **ತೀರ್ಮಾನ :** | ಶ್ರೀ ಗಣೇಶ್, ನಿಲಯ ಸಹಾಯಕರು, ಸ್ನಾತಕೋತ್ತರ ಪುರುಷರ ವಿದ್ಯಾರ್ಥಿನಿಲಯ ಬ್ಲಾಕ್-2, ಮಾನಸಗಂಗೋತ್ರಿ, ಮೈಸೂರು, ಇವರು ದಿನಾಂಕ 01-07-2016 ರಿಂದ 24-04-2017 ರವರೆಗೆ ಒಟ್ಟು 298 ದಿನಗಳವರೆಗೆ ಕಛೇರಿ ಕೆಲಸಕ್ಕೆ ಗೈರು ಹಾಜರಾಗಿದ್ದು ಇವರ ವಿರುದ್ಧ |

| | |
|---|---|
| | ದೋಷಾರೋಪಣಾ ಮತ್ತು ಆರೋಪಣಾ ಪಟ್ಟಿಯನ್ನು ಪರಿಶೀಲಿಸಿದ ಸಿಂಡಿಕೇಟ್ ಇಲಾಖಾ ವಿಚಾರಣೆ ನಡೆಸುವ ಸಲುವಾಗಿ ವಿಶ್ವವಿದ್ಯಾನಿಲಯದ ಕಾನೂನು ಸಲಹೆಗಾರರಾದ ಶ್ರೀ ಹೆಚ್.ಎಸ್.ರಾಮಣ್ಣ, ನಿವೃತ್ತ ನ್ಯಾಯಾಧೀಶರು ಇವರನ್ನು ವಿಚಾರಣಾಧಿಕಾರಿಯನ್ನಾಗಿ ಮತ್ತು ಉಪಕುಲಸಚಿವ(ಸಾಮಾನ್ಯ) ಇವರನ್ನು ಮಂಡನಾಧಿಕಾರಿಯಾಗಿ ನೇಮಿಸಿ ವರದಿಯ ಶಿಫಾರಸ್ಸಿನಂತೆ ನಿಯಮಾನುಸಾರ ಮುಂದಿನ ಕ್ರಮಕೈಗೊಳ್ಳಲು ಸಿಂಡಿಕೇಟ್ ತೀರ್ಮಾನಿಸಿತು. |
| **2017/9.13** | ಹೊಸದಾಗಿ ಆರಂಭಗೊಂಡಿರುವ ಐದು ಸ್ನಾತಕೋತ್ತರ ಅಧ್ಯಯನ ವಿಭಾಗಗಳಾದ Genetics & Genomics, Molecular Biology, Organic Chemistry, Public Administration &School of Law ಗೆ ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಬಗ್ಗೆ. |
| **ತೀರ್ಮಾನ :** | ಹೊಸದಾಗಿ ಆರಂಭಗೊಂಡಿರುವ ಐದು ಸ್ನಾತಕೋತ್ತರ ಅಧ್ಯಯನ ವಿಭಾಗಗಳಾದ Genetics & Genomics, Molecular Biology, Organic Chemistry, Public Administration &School of Law ಗೆ ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರ ನೇಮಕಾತಿಯ ಬಗ್ಗೆ ಸಭೆಯು ಈ ಕೆಳಕಂಡಂತೆ ನಿರ್ಣಯಿಸಿತು.<br>1. ಘನತೆವೆತ್ತ ಕುಲಾಧಿಪತಿಯವರಿಂದ ಅಂಕಿತಗೊಂಡಿರುವ ಅಧಿನಿಯಮದನ್ವಯ ಹೊಸದಾಗಿ ಆರಂಭಗೊಂಡಿರುವ 5 ಅಧ್ಯಯನ ವಿಭಾಗಗಳಿಗೆ ಮಂಜೂರಾಗಿರುವ ಹುದ್ದೆಗಳ ಎದುರಾಗಿ ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ಅಧಿಕೃತ ಅಧಿಸೂಚನೆಯ ಪ್ರಕಾರ 2 ವರ್ಷಗಳಿಗೆ ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರ ಸೇವೆಯನ್ನು ಮಾಹೆಯಾನ ರೂ.50,000/-ರಂತೆ ನೇಮಕಮಾಡಿರುವುದರಿಂದ ಅವರನ್ನು 2 ವರ್ಷಗಳವರೆಗೆಮಾತ್ರ ಮುಂದುವರೆಸಲು ಸಿಂಡಿಕೇಟ್ ತೀರ್ಮಾನಿಸಿತು.<br>2. ದಿನಾಂಕ 21-12-2016 ರಂದು ನಡೆದ ಸಿಂಡಿಕೇಟ್ ತೀರ್ಮಾನದನುಸಾರ, ಇವರ ನೇಮಕಾತಿ ಅವಧಿಯನ್ನು ಮೂರು ವರ್ಷಗಳ ಅವಧಿಗೆ ವಿಸ್ತರಿಸಿರುವ ಆದೇಶವನ್ನು ಹಿಂಪಡೆಯಲು ತೀರ್ಮಾನಿಸಿತು.<br>3. ಐದು ಹೊಸ ವಿಭಾಗಗಳಿಗೆ ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರನ್ನು ನೇಮಕ ಮಾಡುವ ಸಂದರ್ಭದಲ್ಲಿ ಹಳೆಯ ಅಧ್ಯಯನ ವಿಭಾಗಗಳಾದ ರಾಸಾಯನಶಾಸ್ತ್ರ 03 ಮಂದಿ ಹಾಗೂ ಸಂಖ್ಯಾಶಾಸ್ತ್ರ ವಿಭಾಗಕ್ಕೆ 02 ಮಂದಿ ಒಟ್ಟು 05 ಮಂದಿ ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರನ್ನು ನೇಮಕ ಮಾಡಿರುವುದನ್ನು ರದ್ದುಗೊಳಿಸಿ ವಿಶ್ವವಿದ್ಯಾನಿಲಯದ ಇತರೆ ಅಧ್ಯಯನ ವಿಭಾಗಗಳಲ್ಲಿ ನೇಮಕಗೊಂಡಿರುವ ಅತಿಥಿ ಉಪನ್ಯಾಸಕರಂತೆ ನೇಮಕ ಮಾಡಿ ಆದೇಶ ನೀಡಲು ಸಿಂಡಿಕೇಟ್ ತೀರ್ಮಾನಿಸಿತು. |
| **2017/9.14** | ಸರ್ಕಾರವು ವೈದ್ಯಕೀಯ ಮರುಭರಿಕೆ ಸಂಬಂಧ ಕಾಲ ಕಾಲಕ್ಕೆ ತಿದ್ದುಪಡಿ ಮಾಡುವ ನಿಯಮಗಳನ್ನು ಮೈಸೂರು ವಿಶ್ವವಿದ್ಯಾನಿಲಯ ವೈದ್ಯಕೀಯ ಮರುಭರಿಕೆ ಅಧಿನಿಯಮಕ್ಕೆ ಅಳವಡಿಸಿಕೊಳ್ಳುವ ಬಗ್ಗೆ. |
| **ತೀರ್ಮಾನ :** | ಮೈಸೂರು ವಿಶ್ವವಿದ್ಯಾನಿಲಯದ (ವೈದ್ಯಕೀಯ ಹಾಜರಾತಿ) ನಿಯಮಗಳು 1986ರ ನಿಯಮ 26ರಲ್ಲಿನ ಅನ್ವಯ ವೈದ್ಯಕೀಯ ವೆಚ್ಚ ಮರುಭರಿಕೆ ಸಂಬಂಧ ಕರ್ನಾಟಕ ಸರ್ಕಾರದ ಅಧಿಸೂಚನೆ ಡಿಪಿಎಆರ್ 2 ಎಸ್ಎಂಆರ್ 2015 ದಿನಾಂಕ 28/08/2017ರ ಅನ್ವಯ "ನಿಯಮ 2ರ ತಿದ್ದುಪಡಿ- ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳು 1963ರ ನಿಯಮ 2ರ ಉಪನಿಯಮ (1)ರಲ್ಲಿ ವಿವರಣೆಯ ಖಂಡ-2ರಲ್ಲಿರುವ 'ಆರು ಸಾವಿರ ರೂಪಾಯಿಗಳು' ಎಂಬ ಪದಗಳ ಬದಲಿಗೆ ರಾಜ್ಯಸರ್ಕಾರವು ನಿಗದಿಪಡಿಸಿದ ಕನಿಷ್ಠ ಮೂಲ ಪಿಂಚಣಿ ಹಾಗೂ ವೈದ್ಯಕೀಯ ವೆಚ್ಚ ಮರುಪಾವತಿಯನ್ನು ಪರಿಗಣಿಸುವ ದಿನಾಂಕದಂದು ಕನಿಷ್ಠ ಮೂಲ ಪಿಂಚಣಿಗೆ ಲಭ್ಯವಿರುವ ತುಟ್ಟಿಭತ್ಯೆಯನ್ನು ಒಳಗೊಂಡ ಮೊತ್ತ ಎಂಬ ಪದಗಳನ್ನು |

<table>
<tr><td></td><td>ಪ್ರತಿಸ್ಥಾಪಿಸತಕ್ಕದ್ದು" ಎಂಬ ತಿದ್ದುಪಡಿ ನಿಯಮವನ್ನು ಯಥಾವತ್ತಾಗಿ ಅಳವಡಿಸಿಕೊಳ್ಳಲು ಸಿಂಡಿಕೇಟ್ ಅನುಮೋದಿಸಿತು.</td></tr>
<tr><td>2017/9.15</td><td>ಪ್ರೊ. ಲಿಂಗರಾಜ ಗಾಂಧಿ, ಪ್ರಾಧ್ಯಾಪಕರು, ಇಂಗ್ಲಿಷ್ ವಿಭಾಗ, ಸರ್.ಎಂ. ವಿಶ್ವೇಶ್ವರಯ್ಯ ಸ್ನಾತಕೋತ್ತರ ಕೇಂದ್ರ, ಮಂಡ್ಯ ಮತ್ತು ನಿರ್ದೇಶಕರು, ಯೋಜನೆ ಉಸ್ತುವಾರಿ ಮತ್ತು ಮೌಲ್ಯಮಾಪನ ಮಂಡಳಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಬೆಂಗಳೂರು ಕೇಂದ್ರ ವಿಶ್ವವಿದ್ಯಾನಿಲಯ, ಬೆಂಗಳೂರು, ಇಲ್ಲಿಗೆ ಕುಲಸಚಿವರು(ಪರೀಕ್ಷಾಂಗ) ಆಗಿ ನೇಮಕಗೊಂಡ ಹಿನ್ನೆಲೆಯಲ್ಲಿ ಕರ್ತವ್ಯದಿಂದ ಬಿಡುಗಡೆ ಮಾಡಿರುವ ವಿಷಯವನ್ನು – ಸ್ಥಿರೀಕರಣಕ್ಕಾಗಿ.</td></tr>
<tr><td>ತೀರ್ಮಾನ :</td><td>ಪ್ರೊ. ಲಿಂಗರಾಜ ಗಾಂಧಿ, ಪ್ರಾಧ್ಯಾಪಕರು, ಇಂಗ್ಲಿಷ್ ವಿಭಾಗ, ಸರ್.ಎಂ. ವಿಶ್ವೇಶ್ವರಯ್ಯ ಸ್ನಾತಕೋತ್ತರ ಕೇಂದ್ರ, ಮಂಡ್ಯ ಮತ್ತು ನಿರ್ದೇಶಕರು, ಯೋಜನೆ ಉಸ್ತುವಾರಿ ಮತ್ತು ಮೌಲ್ಯಮಾಪನ ಮಂಡಳಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಬೆಂಗಳೂರು ಕೇಂದ್ರ ವಿಶ್ವವಿದ್ಯಾನಿಲಯ, ಬೆಂಗಳೂರು ಇಲ್ಲಿಗೆ ಕುಲಸಚಿವರು(ಪರೀಕ್ಷಾಂಗ) ಆಗಿ ನೇಮಕಗೊಂಡ ಹಿನ್ನೆಲೆಯಲ್ಲಿ ಇವರನ್ನು ಕರ್ತವ್ಯದಿಂದ ಬಿಡುಗಡೆಗೊಳಿಸಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ಸಿಂಡಿಕೇಟ್ ಸ್ಥಿರೀಕರಿಸಿತು.</td></tr>
<tr><td>2017/9.16</td><td>2017–18ನೇ ಆರ್ಥಿಕ ಸಾಲಿನ ಆಯವ್ಯಯದಲ್ಲಿ ರಾಜ್ಯ ಸರ್ಕಾರ ಬಿಡುಗಡೆ ಮಾಡಿರುವ ಅಭಿವೃದ್ಧಿ ಅನುದಾನದಲ್ಲಿ ಕೈಗೊಂಡಿರುವ ಕಾಮಗಾರಿ ವಿವರಗಳ ಬಗ್ಗೆ.</td></tr>
<tr><td>ತೀರ್ಮಾನ :</td><td>ಕರ್ನಾಟಕ ರಾಜ್ಯ ಸರ್ಕಾರದ ವತಿಯಿಂದ 2017–18ನೇ ಆರ್ಥಿಕ ಸಾಲಿನ ಆಯವ್ಯಯದಲ್ಲಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಬಿಡುಗಡೆ ಮಾಡಿರುವ ರೂ.400.00ಲಕ್ಷಗಳ ಅಭಿವೃದ್ಧಿ ಅನುದಾನದಲ್ಲಿ ದಿನಾಂಕ 11–01–2017ರ ಪ್ರಸ್ತಾವನೆಯಲ್ಲಿ ಸರ್ಕಾರಕ್ಕೆ ಸಲ್ಲಿಸಲಾಗಿರುವ ಕ್ರಿಯಾ ಯೋಜನೆ ಅನ್ವಯ ಸರ್ಕಾರದ ಅನುಮೋದನೆಯನ್ನು ನಿರೀಕ್ಷಿಸಿ ತ್ವರಿತವಾಗಿ ನಿಗಧಿತ ಅವಧಿಯೊಳಗೆ ಪೂರ್ಣಗೊಳಿಸುವ ಉದ್ದೇಶದಿಂದ ಈ ಕೆಳಕಂಡ ಕಾಮಗಾರಿಗಳಿಗೆ ಸಿಂಡಿಕೇಟ್ ಅನುಮೋದಿಸಿತು.
<table>
<tr><th>ಕ್ರ. ಸಂ</th><th>ಕಾಮಗಾರಿಯ ಹೆಸರು</th><th>ಲೆಕ್ಕಶೀರ್ಷಿಕೆ</th><th>ಅಂದಾಜು ವೆಚ್ಚದ ಮೊತ್ತ (ಲಕ್ಷಗಳಲ್ಲಿ)</th><th>ನಿಗಧಿಪಡಿಸಿದ ಭೌತಿಕ ಗುರಿ</th></tr>
<tr><td>1</td><td>Detailed estimation for proposed construction of ladies Hostel for Physical Education Department, University of Mysore.</td><td>2202-03-102-0-01-102</td><td>175.00</td><td>ಕಟ್ಟಡ ನಿರ್ಮಾಣ</td></tr>
<tr><td>2</td><td>Detailed estimation for proposed construction of Yoga Hall for Physical Education Department, University of Mysore.</td><td>2202-03-102-0-01-102</td><td>116.00</td><td>ಕಟ್ಟಡ ನಿರ್ಮಾಣ</td></tr>
<tr><td>3</td><td>Construction of First Floor Yuvarajas Women's Hostel Building (Extension Building). Mysore</td><td>2202-03-102-0-01-102</td><td>45.00</td><td>ಕಟ್ಟಡ ನಿರ್ಮಾಣ</td></tr>
<tr><td>4</td><td>Construction of First Floor (North Wing) for Nutrition Biology, DOS in Food and Nutrition at MGM.</td><td>2202-03-102-0-01-102</td><td>60.00</td><td>ಕಟ್ಟಡ ನಿರ್ಮಾಣ</td></tr>
</table></td></tr>
<tr><td>2017/9.17</td><td>ಮೈಸೂರು ವಿಶ್ವವಿದ್ಯಾನಿಲಯದ NET/K-SET ಕೇಂದ್ರದ ಸಂಯೋಜಕರಾಗಿ ಕಾರ್ಯನಿರ್ವಹಿಸುತ್ತಿದ್ದ ಡಾ. ಬಿ. ಬಸವಲಿಂಗು, ನಿವೃತ್ತ ಪ್ರಾಧ್ಯಾಪಕರು, ಇವರು ಸಂಯೋಜಕರ ಹುದ್ದೆಯಲ್ಲಿ ಪಡೆದಿರುವ ಗೌರವಧನವನ್ನು ವಿಶ್ವವಿದ್ಯಾನಿಲಯಕ್ಕೆ ಹಿಂದಿರುಗಿಸುವ ಬಗ್ಗೆ.</td></tr>
</table>

| | |
|---|---|
| ತೀರ್ಮಾನ : | ದಿನಾಂಕ 22–07–2017ರಂದು ನಡೆದ ಸಿಂಡಿಕೇಟ್ ಡಾ.ಬಿ.ಬಸವಲಿಂಗು ರ.ವರು ಯುಜಿಸಿ ವತಿಯಿಂದ 2015–17ರ ಸಾಲಿಗೆ ದಿನಾಂಕ 31–12–2015 ರಂದು ಎಮರಿಟಸ್ ಫೆಲೋಶಿಫ್‌ಗೆ ವರದಿ ಮಾಡಿಕೊಂಡಿದ್ದು ಮಾರ್ಗಸೂಚಿ ಕಂಡಿಕೆ 8(i) ಯ ಪ್ರಕಾರ, ಸದರಿ ಫೆಲೋಶಿಫ್‌ನಲ್ಲಿ ಆಯ್ಕೆಯಾದವರು ಬೇರೆ ಯಾವುದೇ ಹುದ್ದೆ ಹಾಗೂ ನೇಮಕಾತಿ ಹೊಂದಿರಬಾರದೆಂದಿರುವುದರಿಂದ ಸದರಿಯವರು ಕೇಂದ್ರದ ಸಂಯೋಜಕರ ಹುದ್ದೆಯಲ್ಲಿ ಪಡೆಯುತ್ತಿದ್ದ ಗೌರವಧನ ರೂ.6,19,274/–ಗಳನ್ನು ಕಟಾಯಿಸುವ ಸಂಬಂಧ, ಸದರಿರವರೆಗೆ ಕಾರಣ ಕೇಳುವ ನೋಟಿಸ್ ನೀಡಿ, ಅವರು ನೀಡುವ ಉತ್ತರವನ್ನು ಪರಿಶೀಲಿಸಿದ ಕ್ರಮಕೈಗೊಳ್ಳಲು ಸಿಂಡಿಕೇಟ್ ತೀರ್ಮಾನಿಸಿತು. |
| **2017/9.18** | ಶ್ರೀ ಕೆ.ಎಸ್. ಶಿವರಾಮು, ರಾಜ್ಯಾಧ್ಯಕ್ಷರು, ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ (ರಿ), ಮೈಸೂರು, ಇವರು ಪ್ರೊ.ಜಿ. ನಾಗೇಂದ್ರಪ್ಪ, ಅಧ್ಯಕ್ಷರು, ರಸಾಯನಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು, ಇವರ ವಿರುದ್ಧ ಮಾಡಿರುವ ದೂರಿನ ಕುರಿತು. |
| ತೀರ್ಮಾನ | ವಿಷಯವನ್ನು ಮುಂದೂಡಲಾಯಿತು ಮತ್ತು ಯಾರೇ ಹೊರಗಿನ ವ್ಯಕ್ತಿ/ಸಂಘ ಸಂಸ್ಥೆಗಳು ವಿಶ್ವವಿದ್ಯಾನಿಲಯದ ಉದ್ಯೋಗಿಗಳ ಮೇಲೆ ಆರೋಪ ಮಾಡಿ ಕ್ರಮಕೈಗೊಳ್ಳುವಂತೆ ಮನವಿ ಸಲ್ಲಿಸಿದಲ್ಲಿ ಅಂತಹ ವಿಷಯಗಳ ಬಗೆಗೆ ಮೊದಲಿಗೆ ವಿಶ್ವವಿದ್ಯಾನಿಲಯದಲ್ಲಿ ಆಂತರೀಕವಾಗಿ ಸತ್ಯಾಸತ್ಯತೆಯ ಬಗ್ಗೆ ಪರಿಶೀಲಿಸಿ ಅಧಿಕೃತವಾಗಿ ಒಂದು ವರದಿಯನ್ನು ಪಡೆದು ಆನಂತರ ಸಿಂಡಿಕೇಟ್‌ನ ಪರಿಶೀಲನೆ ಮತ್ತು ನಿರ್ಣಯಕ್ಕೆ ವಿಷಯವನ್ನು ಮಂಡಿಸಲು ಸಭೆಯು ತೀರ್ಮಾನಿಸಿತು. |
| **2017/9.19** | ವಿಶ್ವವಿದ್ಯಾನಿಲಯದಿಂದ ಅನುಮತಿ ಪಡಯದೆ 2017–18ನೇ ಸಾಲಿನ ಅಂತಿಮ ಬಿ.ಕಾಂ. ಕೋರ್ಸಿಗೆ ವಿದ್ಯಾರ್ಥಿಗಳಿಗೆ ವರ್ಗಾವಣೆ ಪ್ರವೇಶಾತಿ ನೀಡಿರುವ ಬಗ್ಗೆ. |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 59(8)ರ ಮತ್ತು ವಿಶ್ವವಿದ್ಯಾನಿಲಯದ ನಿಯಮಾವಳಿಗಳ ಉಲ್ಲಂಘಿಸಿ ಅಂತಿಮ ಬಿ.ಕಾಂ ಕೋರ್ಸಿಗೆ ನಿಗಧಿಪಡಿಸಿರುವ 120 ಸೀಟುಗಳಿಗೆ ಹೆಚ್ಚುವರಿಯಾಗಿ 09 ವಿದ್ಯಾರ್ಥಿಗಳಿಗೆ ಪ್ರವೇಶ ನೀಡಿರುವ ಸಂಬಂಧ ವಿಶ್ವವಿದ್ಯಾನಿಲಯವು ಜಾರಿಮಾಡಿದ್ದ ನೋಟಿಸ್‌ಗೆ ಉತ್ತರವಾಗಿ ಪ್ರಾಂಶುಪಾಲರು, ಜ್ಞಾನಧಾರೆ ಪ್ರಥಮ ದರ್ಜೆ ಕಾಲೇಜು, ಹಾಸನ ಇವರು ನೀಡಿರುವ ಮನವಿಯನ್ನು ಪರಿಶೀಲಿಸಿದ ಸಿಂಡಿಕೇಟ್ ಹೆಚ್ಚುವರಿಯಾಗಿ 09 ವಿದ್ಯಾರ್ಥಿಗಳಿಗೆ ಪ್ರವೇಶ ನೀಡಿರುವುದನ್ನು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಪ್ರವೇಶಾತಿ ಅನುಮೋದನೆ ನೀಡಲು ಹಾಗೂ ಸದರಿ ಕಾಲೇಜಿಗೆ ವಿಶ್ವವಿದ್ಯಾನಿಲಯದ ಪೂರ್ವಾನುಮತಿಯಿಲ್ಲದೇ ಪ್ರವೇಶ ಮಾಡಿಕೊಂಡು ನಿಯಮ ಉಲ್ಲಂಘಿಸಿರುವುದಕ್ಕೆ ನಿಯಮಾನುಸಾರ ದಂಡಶುಲ್ಕವನ್ನು ವಿಧಿಸುವಅಧಿಕಾರವನ್ನುಕುಲಪತಿಗಳಿಗೆ ನೀಡಲು ಸಿಂಡಿಕೇಟ್ ತೀರ್ಮಾನಿಸಿತು. |
| **2017/9.20** | ಪರೀಕ್ಷಾ ಆಕ್ರಮ ಹಾಗೂ ಲೋಪದೋಷಗಳ ವಿಚಾರಣಾ ಸಮಿತಿಯ (ಎಂ.ಪಿ.ಎಲ್.ಸಿ.) ವರದಿ |
| ತೀರ್ಮಾನ | ಪರೀಕ್ಷಾ ಆಕ್ರಮ ಹಾಗೂ ಲೋಪದೋಷಗಳ ವಿಚಾರಣಾ ಸಮಿತಿಯು (ಎಂ.ಪಿ.ಎಲ್.ಸಿ.) ಶಿಫಾರಸ್ಸು ಮಾಡಿರುವ ವರದಿಯನ್ನು ಸಿಂಡಿಕೇಟ್ ಅನುಮೋದಿಸಿತು. |
| **2017/9.21** | 2017–18ನೇ ಶೈಕ್ಷಣಿಕ ಸಾಲಿನಲ್ಲಿ Specialized ಪ್ರೋಗ್ರಾಂಗಳ ಅಡಿಯಲ್ಲಿ ನಡೆಸಲಾಗುತ್ತಿರುವ ಕೋರ್ಸುಗಳಿಗೆ ಸರಾಸರಿ ಸುಮಾರು ಶೇ 10% ಶುಲ್ಕಗಳನ್ನು ಪರಿಷ್ಕರಿಸುವ ಬಗ್ಗೆ. |
| ತೀರ್ಮಾನ | 2017–18ನೇ ಶೈಕ್ಷಣಿಕ ಸಾಲಿನಲ್ಲಿ Specialized ಪ್ರೋಗ್ರಾಂಗಳ ಅಡಿಯಲ್ಲಿ ನಡೆಸಲಾಗುತ್ತಿರುವ ಕೋರ್ಸುಗಳಿಗೆ ಶುಲ್ಕಗಳನ್ನು ಶೇ.10ರಷ್ಟು ಹೆಚ್ಚಿಸಿ ಪರಿಷ್ಕರಣೆ ಮಾಡಿ ಮಂಡಿಸಲಾಗಿರುವ ಪ್ರಸ್ತಾವನೆಯನ್ನು ಸಭೆಯು ಅನುಮೋದಿಸಿತು. |

| | |
|---|---|
| **2017/9.22** | ಡಾ. ಎಂ.ಆರ್. ಗಂಗಾಧರ್‌ರವರು ಮಾನವಶಾಸ್ತ್ರ ಅಧ್ಯಯನ ವಿಭಾಗಕ್ಕೆ ಪ್ರವಾಚಕರಾಗಿ ನೇಮಕಗೊಂಡಿರುವ ಸಂಬಂಧ ಬಂದಿದ್ದ ದೂರಿನ ಬಗ್ಗೆ ಪ್ರಾಥಮಿಕ ತನಿಖೆಯನ್ನು ನಡೆಸಿ ವರದಿಯನ್ನು ಸಲ್ಲಿಸಿರುವ ಬಗ್ಗೆ. |
| ತೀರ್ಮಾನ | ಡಾ. ಎಂ.ಆರ್. ಗಂಗಾಧರ್‌ರವರು ಮಾನವಶಾಸ್ತ್ರ ಅಧ್ಯಯನ ವಿಭಾಗಕ್ಕೆ ಪ್ರವಾಚಕರಾಗಿ ನೇಮಕಗೊಂಡಿರುವ ಸಂಬಂಧ ಬಂದಿದ್ದ ದೂರಿನ ಬಗ್ಗೆ ಪ್ರಾಥಮಿಕ ತನಿಖೆಯನ್ನು ನಡೆಸಿ, ವರದಿಯನ್ನು ಸಲ್ಲಿಸಿರುವುದನ್ನು ಸಭೆಯು ಕೂಲಂಕುಷವಾಗಿ ಪರಿಶೀಲಿಸಿ, ಸದರಿ ಪ್ರಾಧ್ಯಾಪಕರು ನಿಯಮಾನುಸಾರ ಕುಲಾಧಿಪತಿಗಳು ಹಾಗೂ ಸರ್ಕಾರದಿಂದ ನಾಮಾಂಕಿತಗೊಂಡ ಸದಸ್ಯರಿಂದ ರಚಿಸಲಾದ ಆಯ್ಕೆ ಮಂಡಳಿಯ ಮೂಲಕ 2001ರಲ್ಲಿ ಬ್ಯಾಕ್‌ಲಾಗ್ ಹುದ್ದೆಗೆ ಎದುರಾಗಿ ನೇಮಕ ಮಾಡಿಕೊಂಡಿರುವುದರಿಂದ ಪ್ರಕರಣವನ್ನು ಈ ಹಂತದಲ್ಲೇ ಮುಕ್ತಾಯಗೊಳಿಸಲು ಸಿಂಡಿಕೇಟ್ ತೀರ್ಮಾನಿಸಿತು. |
| **2017/9.23** | 2017-18ನೇ ಶೈಕ್ಷಣಿಕ ಸಾಲಿಗೆ ಕಾಲೇಜಿನಲ್ಲಿ ಹಾಲಿ ಇರುವ ವಿದ್ಯಾರ್ಥಿ ಪ್ರಮಾಣಕ್ಕೆ ವಿದ್ಯಾರ್ಥಿಗಳ ಹಾಗೂ ಪೋಷಕರ ಒತ್ತಡದ ಮೇರೆಗೆ ಪ್ರಾಂಶುಪಾಲರುಗಳಿಂದ ಬಂದಿರುವ ಮನವಿಯಂತೆ ಹೆಚ್ಚುವರಿ ವಿದ್ಯಾರ್ಥಿ ಪ್ರಮಾಣವನ್ನು ತಾತ್ಕಾಲಿಕವಾಗಿ ನೀಡುವ ಬಗ್ಗೆ – ಅನುಸಮರ್ಥನೆಗಾಗಿ |
| ತೀರ್ಮಾನ | 2017-18ನೇ ಶೈಕ್ಷಣಿಕ ಸಾಲಿಗೆ ಕಾಲೇಜಿನಲ್ಲಿ ಹಾಲಿ ಇರುವ ವಿದ್ಯಾರ್ಥಿ ಪ್ರಮಾಣಕ್ಕೆ ವಿದ್ಯಾರ್ಥಿಗಳ ಹಾಗೂ ಪೋಷಕರ ಒತ್ತಡದ ಮೇರೆಗೆ, ಪ್ರಾಂಶುಪಾಲರುಗಳಿಂದ ಬಂದಿರುವ ಮನವಿಯಂತೆ ಹೆಚ್ಚುವರಿ ವಿದ್ಯಾರ್ಥಿ ಪ್ರಮಾಣವನ್ನು ತಾತ್ಕಾಲಿಕವಾಗಿ ಕಾರ್ಯಸೂಚಿಯಲ್ಲಿ ಪ್ರಸ್ತಾಪಿಸಿರುವಂತೆ ವಿಶ್ವವಿದ್ಯಾನಿಲಯವು ಅನುಮೋದನೆ ನೀಡಿರುವುದನ್ನು ಸಿಂಡಿಕೇಟ್ ಅನುಸಮರ್ಥಿಸಿತು. |
| **2017/9.24** | ಸರ್.ಎಂ. ವಿಶ್ವೇಶ್ವರಯ್ಯ ಸ್ನಾತಕೋತ್ತರ ಕೇಂದ್ರ, ಮಂಡ್ಯ ಇಲ್ಲಿ ಶ್ರೀ ಬುದ್ಧರವರ ಪ್ರತಿಮೆಯನ್ನು ಸ್ಥಾಪಿಸುವ ಬಗ್ಗೆ. |
| ತೀರ್ಮಾನ | ಸರ್.ಎಂ. ವಿಶ್ವೇಶ್ವರಯ್ಯ ಸ್ನಾತಕೋತ್ತರ ಕೇಂದ್ರ, ಮಂಡ್ಯ ಕೇಂದ್ರದ ರಜತ ಮಹೋತ್ಸವ ವರ್ಷದ ಪ್ರಯುಕ್ತ, ಕೇಂದ್ರದ ಗ್ರಂಥಾಲಯದ ಪಕ್ಕದಲ್ಲಿರುವ ಅರಳಿ ಮರದ ಕೆಳಗೆ ಇಲ್ಲಿ ಶ್ರೀ ಬುದ್ಧರವರ ಪ್ರತಿಮೆಯನ್ನು ವಿದ್ಯಾರ್ಥಿಗಳು ತಮ್ಮ ಸ್ವಂತ ಖರ್ಚಿನಿಂದ ಸ್ಥಾಪನೆ ಮಾಡಬೇಕೆನ್ನುವ ಕೋರಿಕೆಯನ್ನು ಸಿಂಡಿಕೇಟ್ ಪರಿಗಣಿಸದಿರಲು ಸಿಂಡಿಕೇಟ್ ತೀರ್ಮಾನಿಸಿತು.<br><br>ಮುಂದುವರೆದು, ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿಯಲ್ಲಿ ವಿ.ವಿ.ಗ್ರಂಥಾಲಯದ ಮುಂದೆ ಡಾ.ಬಿ.ಆರ್.ಅಂಬೇಡ್ಕರ್‌ರವರ ಪುತ್ಥಳಿಯನ್ನು ಸ್ಥಾಪಿಸುವುದರ ಬಗ್ಗೆ ಕ್ರಿಯಾಯೋಜನೆಯನ್ನು ತಯಾರಿಸಿ ಅಗತ್ಯ ಕ್ರಮ ಕೈಗೊಳ್ಳಲು ಸಿಂಡಿಕೇಟ್ ನಿರ್ಣಯಿಸಿತು. |
| **2017/9.25** | ಡಾ. ಚಂದಾವರ ವಿದ್ಯಾ ಆರ್., ಸಹ ಪ್ರಾಧ್ಯಾಪಕರು, ಯುವರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಇವರನ್ನು ಮಾತೃ ವಿಭಾಗವಾದ ಪ್ರಾಣಿಶಾಸ್ತ್ರ ವಿಭಾಗದಲ್ಲಿನ ಕಾರ್ಯಭಾರವನ್ನು ನಿರ್ವಹಿಸುವಂತೆ ಸೂಚಿಸಿರುವ ಬಗ್ಗೆ. |
| ತೀರ್ಮಾನ | ಡಾ. ಚಂದಾವರ ವಿದ್ಯಾ ಆರ್, ಸಹ ಪ್ರಾಧ್ಯಾಪಕರು, ಯುವರಾಜ ಕಾಲೇಜು, ಇವರನ್ನು ಕಾಲೇಜಿನ ಬಯೋಟೆಕ್ನಾಲಾಜಿ ವಿಭಾಗದಿಂದ ಅವರ ಮಾತೃ ವಿಭಾಗವಾದ ಪ್ರಾಣಿಶಾಸ್ತ್ರ ವಿಭಾಗದಲ್ಲಿನ ಕಾರ್ಯಭಾರವನ್ನು ನಿರ್ವಹಿಸುವಂತೆ ಸೂಚಿಸಿ ವಿಶ್ವವಿದ್ಯಾನಿಲಯವು ಆಡಳಿತಾತ್ಮಕವಾಗಿ ತೆಗೆದುಕೊಂಡಿರುವ ಕ್ರಮವನ್ನು ಸಿಂಡಿಕೇಟ್ ಅನುಸಮರ್ಥಿಸಿತು. |
| **2017/9.26** | ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿಭಾಗ/ಕೇಂದ್ರಗಳಿಗೆ 2017-18ನೇ ಶೈಕ್ಷಣಿಕ ಸಾಲಿನಲ್ಲಿ ಪ್ರವೇಶಾತಿ ಸಮಯದಲ್ಲಿ ಭಾಗಶ: ಹಣಕಾಸು ಯೋಜನೆಯಡಿಯಲ್ಲಿ ಸಂಗ್ರಹವಾಗಿರುವ ಮೊತ್ತದಿಂದ ಸ್ನಾತಕೋತ್ತರ ವಿಭಾಗಗಳ ಅಧ್ಯಕ್ಷರುಗಳು ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಾಗಿ ಹಣವನ್ನು ಮಂಜೂರು ಮಾಡಬೇಕೆಂದು ಕೋರಿರುವ ಬಗ್ಗೆ. |
| ತೀರ್ಮಾನ | 2017-18ನೇ ಶೈಕ್ಷಣಿಕ ಸಾಲಿನಲ್ಲಿ ಕ್ರೂಢೀಕೃತವಾಗುವ ಭಾಗಶಃ ಹಣಕಾಸು ಯೋಜನೆಯಡಿಯಲ್ಲಿ ಈಗಾಗಲೇ ಸಂಗ್ರಹವಾಗಿರುವ ಮತ್ತು ಸಂಗ್ರಹವಾಗಬೇಕಾಗಿರುವ ಹಣದಲ್ಲಿ ಶೇ.25ರಂತೆ ಒಟ್ಟು 38 ವಿಭಾಗಗಳಿಗೆ ವಿದ್ಯಾರ್ಥಿಗಳಿಗೆ ಅವಶ್ಯವಿರುವ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಸಲುವಾಗಿ ಹಂಚಿಕೆ ಮಾಡಲು ಹಾಗೂ ಅಗತ್ಯವಿರುವ ಅಧ್ಯಯನ ವಿಭಾಗಗಳು ಮತ್ತು ಸ್ನಾತಕೋತ್ತರ ಕೇಂದ್ರಗಳಿಂದ ಕ್ರಿಯಾಯೋಜನೆಯನ್ನು ಪಡೆದು |

| | |
|---|---|
| | ಅವಶ್ಯವಿದ್ದಲ್ಲಿ 'ಬಿ' ಸ್ಕೀಮ್ ಅಡಿಯಲ್ಲಿ ಸಂಗ್ರಹಿತವಾಗಿರುವ ಶೇ.100ರಷ್ಟು ಮೊತ್ತವನ್ನು 2017–18ನೇ ಸಾಲಿಗೆ ಮಾತ್ರ ನೀಡಲು ಸಿಂಡಿಕೇಟ್ ತೀರ್ಮಾನಿಸಿತು. |
| **2017/9.27** | ಎಂ.ಫಿಲ್/ಪಿಹೆಚ್.ಡಿ ಪದವಿಗೆ ಸಂಬಂಧಪಟ್ಟಂತೆ ಯು.ಜಿ.ಸಿ.ಗೆ ಸರಿಯಾದ ಮಾಹಿತಿ ನೀಡದೇ ಆಯ್ಕೆಯಾಗಿರುವ ಸಂಶೋಧಕರ ಬಗ್ಗೆ. |
| **ತೀರ್ಮಾನ** | ಯಾರೇ ಹೊರಗಿನ ವ್ಯಕ್ತಿ/ಸಂಘ ಸಂಸ್ಥೆಗಳು ವಿಶ್ವವಿದ್ಯಾನಿಲಯದ ಉದ್ಯೋಗಿಗಳ ಮೇಲೆ ಆರೋಪ ಮಾಡಿ ಕ್ರಮಕೈಗೊಳ್ಳುವಂತೆ ಮನವಿ ಸಲ್ಲಿಸಿದಲ್ಲಿ ಅಂತಹ ವಿಷಯಗಳ ಬಗೆಗೆ ಮೊದಲಿಗೆ ವಿಶ್ವವಿದ್ಯಾನಿಲಯದಲ್ಲಿ ಆಂತರೀಕವಾಗಿ ಸತ್ಯಾಸತ್ಯತೆಯ ಬಗ್ಗೆ ಪರಿಶೀಲಿಸಿ ಅಧಿಕೃತವಾಗಿ ಒಂದು ವರದಿಯನ್ನು ಪಡೆದು ಆನಂತರ ಸಿಂಡಿಕೇಟ್‌ನ ಪರಿಶೀಲನೆ ಮತ್ತು ನಿರ್ಣಯಕ್ಕೆ ವಿಷಯವನ್ನು ಮಂಡಿಸಲು ಸಭೆಯು ತೀರ್ಮಾನಿಸಿರುವ ಹಿನ್ನೆಲೆಯಲ್ಲಿ ಅನಧಿಕೃತವಾಗಿ ಆಯ್ಕೆಗೊಂಡಿದ್ದರೆಂದು ಆರೋಪಿಸಲ್ಪಟ್ಟಿರುವ ವಿದ್ಯಾರ್ಥಿಗಳಿಂದ ವಿವರಣೆ ಪಡೆದು ವರದಿಯನ್ನು ಸಿದ್ಧಪಡಿಸಲು ಕುಲಸಚಿವ (ಪರೀಕ್ಷಾಂಗ) ಅವರನ್ನು ನೇಮಿಸಿ ವರದಿಯೊಡನೆ ವಿಷಯವನ್ನು ಮುಂದಿನ ಸಿಂಡಿಕೇಟ್‌ಗೆ ಮಂಡಿಸಲು ತೀರ್ಮಾನಿಸಲಾಯಿತು. |
| **2017/9.28** | ಪಿಹೆಚ್.ಡಿ ನೊಂದಣಿಯ ದಿನಾಂಕವನ್ನು 28–05–2016ರ ಬದಲಿಗೆ 19–12–2015 ಮಾಡಿಕೊಡುವ ಬಗ್ಗೆ. |
| **ತೀರ್ಮಾನ** | ದಿನಾಂಕ 19–12–2015ರಂದು ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಸದರಿ ಮಾರ್ಗದರ್ಶಕರ ಬಳಿ Vacancy ಇಲ್ಲದಿರುವುದರಿಂದಅರ್ಜಿ ಪಡೆದ ದಿನಾಂಕ 28–05–2016ರಿಂದ ತಾತ್ಕಾಲಿಕ ನೊಂದಣಿಯ ಆಧಾರದಲ್ಲಿ ಸಾರ್ವಜನಿಕ ಆಡಳಿತ ವಿಷಯದಲ್ಲಿ ಪ್ರೊ. ದಯಾನಂದಮಾನೆಯವರ ಮಾರ್ಗದರ್ಶನದಲ್ಲಿ ಸಂಶೋಧನೆಯನ್ನು ಕೈಗೊಂಡಿರುವ ಶ್ರೀ ಗೋವಿಂದರಾಜುರವರ ಕೋರಿಕೆಯನ್ನು ಪರಿಶೀಲಿಸಿದ ಸಭೆಯು ಪಿಎಚ್.ಡಿ. ನಿಯಮಾನುಸಾರ ಅವಕಾಶವಿದ್ದಲ್ಲಿ ನೊಂದಣಿಯ ದಿನಾಂಕವನ್ನು 28–05–2016ರ ಬದಲಿಗೆ 19–12–2015 ಎಂದು ಬದಲಾವಣೆ ಮಾಡಲು ಸಿಂಡಿಕೇಟ್ ಅನುಮತಿಸಿತು. |
| **2017/9.29** | Budget estimation to conduct KSET 2017 examination. |
| **ತೀರ್ಮಾನ** | 2017ರಲ್ಲಿ ಕೆಸೆಟ್ ಪರೀಕ್ಷೆಯನ್ನು ನಡೆಸುವ ಸಲುವಾಗಿ ಕೆ.ಸೆಟ್ ವಿಭಾಗವು ಸಲ್ಲಿಸಿರುವ ಅಂದಾಜಿನಲ್ಲಿ ಆದಾಯ ತೋರಿಸದೇ ಬರೀ ವೆಚ್ಚವನ್ನು ತೋರಿಸಿರುವುದರಿಂದ ಸದರಿ ಆಯವ್ಯಯ ಅಂದಾಜನ್ನು ಹಣಕಾಸು ಸಮಿತಿ ಸಭೆಯಲ್ಲಿ ಮಂಡಿಸಿ, ಅದರ ಅನುಮೋದನೆಯನ್ನು ಪಡೆದು ತದನಂತರ ಹಣ ಬಿಡುಗಡೆ ಮಾಡುವುದು ಹಾಗೂ ಅದುವರೆಗೆ ಪರೀಕ್ಷೆಗೆ ಸಂಬಂಧಪಟ್ಟಂತೆ ತುರ್ತು ಕ್ರಮಗಳನ್ನು ಕೈಗೊಳ್ಳುವ ಸಲುವಾಗಿ ವಿಶ್ವವಿದ್ಯಾನಿಲಯದಿಂದ ಆದೇಶ ಪಡೆದು ಹಣವನ್ನು ವ್ಯಯಿಸಲು ಸಿಂಡಿಕೇಟ್ ತೀರ್ಮಾನಿಸಿತು. |

**ಇತರೆ ವಿಷಯಗಳು**

1. ದಿನಾಂಕ 22–06–2017ರಂದು ನಡೆದ ಸಿಂಡಿಕೇಟ್ ಸಭೆಯ ಇತರೆ ವಿಷಯಗಳಡಿಯ ಪ್ರಾಥಮಿಕ ಚರ್ಚೆಯಲ್ಲಿ, ಈ ಹಿಂದೆ ಕುಲಸಚಿವರಾಗಿದ್ದ ಡಾ.ಬಸವರಾಜು ಇವರ ಅನುಪಸ್ಥಿತಿಯ ಅವಧಿಯಲ್ಲಿ ಕುಲಸಚಿವರು (ಪರೀಕ್ಷಾಂಗ) ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಡಾ.ಆರ್.ರಾಜಣ್ಣ ಇವರು ಪ್ರಭಾರ ಕುಲಸಚಿವರಾಗಿ ವಿಶ್ವವಿದ್ಯಾನಿಲಯದಲ್ಲಿ ನಡೆದ ಭಾರತೀಯ ವಿಜ್ಞಾನ ಕಾಂಗ್ರೆಸ್ ಕಾರ್ಯಕ್ರಮಕ್ಕೆ ಹೆಚ್ಚುವರಿಯಾಗಿ ರೂ.9,15,45,000/–ಗಳಿಗೆ ಸಹಿ ಮಾಡಿ ಆದೇಶ ನೀಡಿರುವ ಬಗ್ಗೆ ಸಭೆಯು ಸುದೀರ್ಘವಾಗಿ ಚರ್ಚಿಸಿ, ಸದರಿ ಪ್ರಕರಣದ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿ, ಸಂಬಂಧಪಟ್ಟ ವರದಿಯನ್ನು ಶೀಘ್ರವಾಗಿ ಸರ್ಕಾರಕ್ಕೆ ಸಲ್ಲಿಸುವ ಬಗ್ಗೆ ಕ್ರಮವನ್ನು ಕೈಗೊಳ್ಳಲು ಸಿಂಡಿಕೇಟ್ ನಿರ್ಣಯಿಸಿತು.

2. 2017/8.41ರ ವಿಷಯಕ್ಕೆ ಸಂಬಂಧಿಸಿದಂತೆ, ಮೈಸೂರು ವಿಶ್ವವಿದ್ಯಾನಿಲಯದ ಔಟ್‌ರೀಚ್ ಮತ್ತು ಸ್ಪೆಷಲೈಜ್ಡ್ ಪ್ರೊಗ್ರಾಂಗಳನ್ನು ನಡೆಸುವ ಬಗ್ಗೆ ವಿಶ್ವವಿದ್ಯಾನಿಲಯವು ತೆಗೆದುಕೊಂಡ ಕ್ರಮಗಳನ್ನು ಪರಿಶೀಲಿಸಿದ ಸಭೆಯು ಆಂತರಿಕ ಸಂಪನ್ಮೂಲಗಳನ್ನು ವೃದ್ಧಿಸುವ ದೃಷ್ಟಿಯಿಂದ ರಾಜ್ಯದ ಇತರೆ ವಿಶ್ವವಿದ್ಯಾನಿಲಯಗಳಿಗೆ ಅನುಮತಿ ನೀಡಿರುವಂತೆ ದೂರಶಿಕ್ಷಣವನ್ನು ಪ್ರಾರಂಭಿಸಲು ಅರ್ಜಿ

ಸಲ್ಲಿಸಲು ದಿನಾಂಕ 23-09-2017ರಂದು ಕೊನೆಯ ದಿನವಾದ್ದರಿಂದ, ದಿನಾಂಕ 21-09-2017ರಂದು ವಿಶೇಷ ಶಿಕ್ಷಣ ಮಂಡಳಿ ಮತ್ತು ವಿಶೇಷ ಸಿಂಡಿಕೇಟ್ ಸಭೆಯನ್ನು ಏರ್ಪಡಿಸಿ ವಿಷಯವನ್ನು ಮಂಡಿಸಿ, ಸದರಿ ಪ್ರಾಧಿಕಾರಗಳ ಅನುಮೋದನೆಯೊಂದಿಗೆ ಮುಂದಿನ ಶೈಕ್ಷಣಿಕ ವರ್ಷದಿಂದ ದೂರಶಿಕ್ಷಣವನ್ನು ಪ್ರಾರಂಭಿಸಲು ಅನುವಾಗುವಂತೆ ನಿಯಮಾನುಸಾರ ಅಗತ್ಯಕ್ರಮ ವಹಿಸಲು ಸಿಂಡಿಕೇಟ್ ನಿರ್ಣಯಿಸಿತು.

3. 2017/8.46ರ ವಿಷಯಕ್ಕೆ ಸಂಬಂಧಪಟ್ಟಂತೆ, 2017-18ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯಕ್ಕೆ ಭದ್ರತಾ ವ್ಯವಸ್ಥೆಯನ್ನು ನೋಡಿಕೊಳ್ಳುವ ಸಲುವಾಗಿ ಮೆ: ಶಾರ್ಪ್ ವಾಚ್ ಇನ್‌ವೆಸ್ಟಿಗೇಷನ್ ಅಂಡ್ ಸೆಕ್ಯೂರಿಟಿ ಸರ್ವೀಸಸ್, ಮೈಸೂರು ಇವರಿಗೆ ವಿಶ್ವವಿದ್ಯಾನಿಲಯವು ಆದೇಶ ನೀಡಿರುವುದರ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ ಸದಸ್ಯರಾದ ಲಯನ್ ಹೆಚ್.ರಮೇಶ್‌ರವರು ಸದರಿ ಸಂಸ್ಥೆಯು ತಾನು ಈ ಹಿಂದೆ ಕಾರ್ಯನಿರ್ವಹಿಸುತ್ತಿದ್ದ ಅವಧಿಯಲ್ಲಿ ಕೆಲವು ಸಣ್ಣಪುಟ್ಟ ಲೋಪಗಳಿಗೆ ವಿಶ್ವವಿದ್ಯಾನಿಲಯವು ದಂಡ ವಿಧಿಸಿರುವುದನ್ನು ತಿಳಿಸಿದರಲ್ಲದೇ ಪುನಃ ಅವರಿಗೆ ಹೊರಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸಲು ಆದೇಶ ನೀಡಿರುವುದನ್ನು ಸಭೆಯ ಗಮನಕ್ಕೆ ತಂದರು.

ನಂತರ ಕುಲಸಚಿವರು ಮಾತನಾಡಿ, ಸದರಿ ಸಂಸ್ಥೆಯನ್ನು ಬ್ಲಾಕ್ ಲಿಸ್ಟ್‌ನಲ್ಲಿ ಸೇರಿಸದೇ ಇರದಿರುವುದರಿಂದ ನಿಯಮಾನುಸಾರ ಹೊರಗುತ್ತಿಗೆ ಆಧಾರದಲ್ಲಿ ಸೇವೆಯನ್ನು ಒದಗಿಸಲು ಆದೇಶ ನೀಡುವುದನ್ನು ತಡೆಯಲಾಗುವುದಿಲ್ಲ. ಅಷ್ಟೇ ಅಲ್ಲದೇ ಇವರು ಸಲ್ಲಿಸಿರುವ ಫೈನಾನ್ಸಿಯಲ್ ಬಿಡ್‌ನಲ್ಲಿ ಸರ್ವೀಸ್ ಚಾರ್ಜ್ ಅನ್ನು ಸಮಾನವಾಗಿ ನಮೂದಿಸಿರುವುದನ್ನು ಗಮನಿಸಲಾಗಿದೆ ಹಾಗೂ ಸಂಸ್ಥೆಯ Turn over ವಾರ್ಷಿಕವಾಗಿ ಅಧಿಕವಾಗಿರುವುದರಿಂದ 2016-17ನೇ ಸಾಲಿನ ಬ್ಯಾಂಕ್ ಸ್ಟೇಟ್‌ಮೆಂಟ್ ಮತ್ತು ಸರ್ವೀಸ್ ಟ್ಯಾಕ್ಸ್ ರಿಟರ್ನ್ಸ್ ದಾಖಲಾತಿಗಳನ್ನು ಪರಿಶೀಲಿಸಿ ಕೆಲವು ನಿಯಮಗಳನ್ನು ವಿಧಿಸುವುದರೊಂದಿಗೆ ಸದರಿ ಸಂಸ್ಥೆಗೆ ಒಂದು ವರ್ಷದ ಅವಧಿಗೆ ಅಥವಾ ವಿಶ್ವವಿದ್ಯಾನಿಲಯದ ಮುಂದಿನ ಆದೇಶದವರೆಗೆ ಹೊರಗುತ್ತಿಗೆ ಆಧಾರದ ಮೇಲೆ ಭದ್ರತಾ ಸೇವೆಯನ್ನು ಒದಗಿಸಲು ಆದೇಶವನ್ನು ನೀಡಲಾಗಿದೆಯೆಂದು ಕುಲಸಚಿವರು ಸಭೆಗೆ ತಿಳಿಸಿದರು. ತದನಂತರ ಸಭೆಯು ವಿಶ್ವವಿದ್ಯಾನಿಲಯವು ತೆಗೆದುಕೊಂಡಿರುವ ಕ್ರಮವನ್ನು ಅನುಸಮರ್ಥಿಸಿತು.

4. ಕುಲಾಧಿಪತಿಗಳ ಅಂಕಿತಕ್ಕಾಗಿ ಕಳುಹಿಸಲಾಗಿದ್ದ Life long distinguished Professorಗೆ ಸಂಬಂಧಿಸಿದ ಅಧಿನಿಯಮವು ಸರ್ಕಾರದಿಂದ ಹಿಂತಿರುಗಿ ಬಂದಿರುವ ಹಿನ್ನೆಲೆಯಲ್ಲಿ ಮತ್ತು ಈ ಹುದ್ದೆಗಳು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಅವಶ್ಯಕವಾಗಿದ್ದು ಯಾವುದೇ ಹಣಕಾಸಿನ ಹೊರೆಯಿಲ್ಲದೇ ಇರುವುದರಿಂದ ಮತ್ತೊಮ್ಮೆ ಸೂಕ್ತ ತಿದ್ದುಪಡಿಯೊಡನೆ ಅಧಿನಿಯಮವನ್ನು ರಚಿಸಿ ಕುಲಾಧಿಪತಿಗಳ ಅಂಕಿತ ದೊರಕಿಸಿ ಕೊಡುವ ಸಲುವಾಗಿ ಸರ್ಕಾರಕ್ಕೆ ಕಳುಹಿಸಲು ಸಿಂಡಿಕೇಟ್ ನಿರ್ಣಯಿಸಿತು.

5. ಮೈಸೂರು ವಿಶ್ವವಿದ್ಯಾನಿಲಯದ ಭೌಗೋಳಿಕ ವ್ಯಾಪ್ತಿಯನ್ನು ಮೀರಿ ಚಾಲ್ತಿಯಲ್ಲಿರುವ ಔಟ್‌ರೀಚ್ ಕೋರ್ಸ್‌ಗಳನ್ನು 2017-18ನೇ ಸಾಲಿನಿಂದ ಸ್ಥಗಿತಗೊಳಿಸಲು ತೀರ್ಮಾನಿಸಿತು. ಮುಂದುವರೆದು ಒಡಂಬಡಿಕೆಯು ಚಾಲ್ತಿಯಲ್ಲಿರುವ ಹಾಗೂ ಈಗಾಗಲೇ ಒಡಂಬಡಿಕೆ ಅವಧಿ ಮುಗಿದಿರುವ ಸಂಸ್ಥೆಗಳು ಮತ್ತೊಂದು ಅವಧಿಗೆ ಒಡಂಬಡಿಕೆಯನ್ನು ನವೀಕರಣಗೊಳಿಸುವ ಸಲುವಾಗಿ ಅರ್ಜಿ ಸಲ್ಲಿಸಿ ವಿಶ್ವವಿದ್ಯಾನಿಲಯದ ಅನುಮತಿಯನ್ನು ನಿರೀಕ್ಷಿಸಿ ಈಗಾಗಲೇ ವಿದ್ಯಾರ್ಥಿಗಳ ಪ್ರವೇಶಾತಿಗಳನ್ನು ಮಾಡಿಕೊಂಡಿದ್ದಲ್ಲಿ 2017-18ನೇ ಶೈಕ್ಷಣಿಕ ಅವಧಿಗೆ ಮಾತ್ರ ಇವರಿಂದ ಮುಂದಿನ ಸಾಲಿನಿಂದ ಯಾವುದೇ ಕೋರ್ಸ್‌ಗಳಿಗೆ ಪ್ರವೇಶಾತಿಗಳನ್ನು ಮಾಡಿಕೊಳ್ಳುವುದಿಲ್ಲವೆಂದು ಹಾಗೂ ಪ್ರವೇಶ ಪಡೆದಂತಹ ವಿದ್ಯಾರ್ಥಿಗಳು ಕೋರ್ಸುಗಳನ್ನು ವಿ.ವಿ.ನಿಯಮಾನುಸಾರ ಪೂರ್ಣಗೊಳಿಸುವ ಸಂಬಂಧ ಎಲ್ಲಾ ಕೇಂದ್ರಗಳಿಂದಲೂ ಅಫಿಡೇವಿಟ್ ಪಡೆದು ನಿಯಮಾನುಸಾರ ಅನುಮತಿ ನೀಡಲು ಸಿಂಡಿಕೇಟ್ ತೀರ್ಮಾನಿಸಿತು.

ಕೊನೆಯಲ್ಲಿ ಮಾನ್ಯ ಕುಲಪತಿಗಳು, ಸಿಂಡಿಕೇಟ್ ಸಭೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಉಪಯುಕ್ತ ಸಲಹೆ ಸೂಚನೆಗಳನ್ನು ನೀಡಿ ತೀರ್ಮಾನ ಕೈಗೊಳ್ಳಲು ಸಹಕರಿಸಿದ ಎಲ್ಲಾ ಸದಸ್ಯರುಗಳಿಗೂ ವಂದನೆ ಸಲ್ಲಿಸಿದ ನಂತರ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ಕುಲಸಚಿವ ಮತ್ತು ಸದಸ್ಯ ಕಾರ್ಯದರ್ಶಿ** **ಕುಲಪತಿ ಮತ್ತು ಅಧ್ಯಕ್ಷರು**

# ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ದಿನಾಂಕ 21-09-2017ರಂದು ಪೂರ್ವಾಹ್ನ 11-00 ಗಂಟೆಗೆ ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡವಳಿಗಳು.

**ಹಾಜರಿದ್ದ ಸದಸ್ಯರು:**

1. ಪ್ರೊ. ದಯಾನಂದ ಮಾನೆ – ಕುಲಪತಿಗಳು(ಪ್ರಭಾರ) ಹಾಗೂ ಅಧ್ಯಕ್ಷರು
2. ಡಾ. ನಿಂಗಮ್ಮ ಸಿ.ಬೆಟ್ಸೂರ್ – ಸದಸ್ಯರು
3. ಶ್ರೀ ಪುಷ್ಪಕುಮಾರ್ ಎಂ.ವಿ. – ಸದಸ್ಯರು
4. ಡಾ. ಎಂ.ಸಿ.ನಟರಾಜ – ಸದಸ್ಯರು
5. ಶ್ರೀ ಕೆ.ಎಂ.ಕಾಳೇಗೌಡ – ಸದಸ್ಯರು
6. ಪ್ರೊ. ಡಿ. ನಂಜುಂಡಯ್ಯ – ಸದಸ್ಯರು
7. ಶ್ರೀ ಲಯನ್ ಹೆಚ್. ರಮೇಶ್, – ಸದಸ್ಯರು
8. ಶ್ರೀ ಮಹಮದ್ ಅಬ್ದುಸ್ಸಲಾಂ – ಸದಸ್ಯರು
9. ಶ್ರೀ ಕುಮಾರ್ – ಸದಸ್ಯರು
10. ಶ್ರೀ ಎಂ.ಎಸ್.ಎಸ್. ಕುಮಾರ್ – ಸದಸ್ಯರು
11. ಪ್ರೊ. ಜೆ. ಸೋಮಶೇಖರ್ ಕುಲಸಚಿವ(ಪರೀಕ್ಷಾಂಗ) – ಸದಸ್ಯರು
12. ಶ್ರೀಮತಿ ಡಿ.ಭಾರತಿ, ಕೆ.ಎ.ಎಸ್ – ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು

**ಹಾಜರಾಗದ ಸದಸ್ಯರು:**

1. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
3. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
4. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
5. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
6. ಶ್ರೀಮತಿ ಎಂ.ಎನ್.ಪೊನ್ನಮ್ಮ, ಸಿಂಡಿಕೇಟ್ ಸದಸ್ಯರು
7. ಶ್ರೀಮತಿ ಶೃತಿತರುಣ್‌ಗಿರಿ, ಸಿಂಡಿಕೇಟ್ ಸದಸ್ಯರು

ಮೊದಲಿಗೆ ಸನ್ಮಾನ್ಯ ಕುಲಪತಿಗಳು ಸಿಂಡಿಕೇಟ್‌ನ ವಿಶೇಷ ಸಭೆಗೆ ಆಗಮಿಸಿದ್ದ ಎಲ್ಲಾ ಸದಸ್ಯರುಗಳನ್ನು ಹೃತ್ಪೂರ್ವಕವಾಗಿ ಆಹ್ವಾನಿಸಿದರು.

ಮುಂದುವರೆದು, ತುರ್ತಾಗಿ ಚರ್ಚಿಸಬೇಕಾದ ವಿಷಯವಿದ್ದುದರಿಂದ ವಿಶೇಷ ಸಿಂಡಿಕೇಟ್ ಸಭೆಯನ್ನು ಕರೆದಿರುವ ವಿಚಾರವನ್ನು ಸಭೆಗೆ ತಿಳಿಸಿದರು ಮತ್ತು ಅದರಂತೆ ಕಾರ್ಯಸೂಚಿಯನ್ನು ಕೈಗೆತ್ತಿಗೊಳ್ಳಲಾಯಿತು.

| | |
|---|---|
| **SPL Syn2017/9.1** | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ದೂರ ಶಿಕ್ಷಣ ಕೇಂದ್ರವನ್ನು ಸ್ಥಾಪಿಸುವ ಮತ್ತು ಈ ಕೇಂದ್ರದ ವತಿಯಿಂದ ನಡೆಸಲುದ್ದೇಶಿಸಿರುವ ವಿವಿಧ ಪದವಿಗಳಿಗೆ ವಿಶ್ವವಿದ್ಯಾನಿಲಯ ಧನಸಹಾಯ ಆಯೋಗದ ಮಾನ್ಯತೆ ಪಡೆಯುವ ಬಗ್ಗೆ. |
| ತೀರ್ಮಾನ : | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ದೂರ ಶಿಕ್ಷಣ ಕೇಂದ್ರವನ್ನು ಸ್ಥಾಪಿಸುವ ಮತ್ತು ಈ ಕೇಂದ್ರದ ವತಿಯಿಂದ ನಡೆಸಲುದ್ದೇಶಿಸಿರುವ ವಿವಿಧ ಪದವಿಗಳಿಗೆ ವಿಶ್ವವಿದ್ಯಾನಿಲಯ ಧನಸಹಾಯ ಆಯೋಗದ ಮಾನ್ಯತೆ ಪಡೆಯಲು ಅರ್ಜಿ ಸಲ್ಲಿಸುವ ಕುರಿತು ಆಗುವ ಸಾಧಕ/ಭಾದಕಗಳ ಬಗ್ಗೆ ಸಭೆಯು ಚರ್ಚಿಸಿ, ಈ ಕೆಳಗಿನಂತೆ ತೀರ್ಮಾನಿಸಲಾಯಿತು. |

1. ವಿಶ್ವವಿದ್ಯಾನಿಲಯ ಧನಸಹಾಯ ಆಯೋಗವು ಜುಲೈ 2017ರಲ್ಲಿ ದೂರ ಶಿಕ್ಷಣ ಕಾರ್ಯಕ್ರಮದ ನಿಯಮಾವಳಿಗಳನ್ನು ಭಾರತೀಯ ಗೆಜೆಟ್‌ನಲ್ಲಿ (ಎಫ್.ನಂ.74–8/2017 (ಡಿಇಬಿ–4), ದಿನಾಂಕ 28.07.2017) ಪ್ರಕಟಿಸಿದ್ದು, ಈ ನಿಯಮಾವಳಿಗಳಡಿಯಲ್ಲಿ ಮಾನ್ಯತೆ ಪಡೆಯಲಿಚ್ಛಿಸುವ ವಿಶ್ವವಿದ್ಯಾನಿಲಯಗಳು ಸೆಪ್ಟೆಂಬರ್ 23ರೊಳಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕಾಗಿರುವ ಹಿನ್ನೆಲೆಯಲ್ಲಿ, ವಿಶ್ವವಿದ್ಯಾನಿಲಯದಲ್ಲಿ ದೂರ ಶಿಕ್ಷಣ ಕೇಂದ್ರವನ್ನು ಆರಂಭಿಸಲು ಈಗಾಗಲೇ ದಿನಾಂಕ 21–09–2017ರಂದು ನಡೆದ ವಿಶೇಷ ವಿದ್ಯಾವಿಷಯಕ ಪರಿಷತ್ತು ಅನುಮೋದಿಸಿರುವುದರಿಂದ ಸಿಂಡಿಕೇಟ್ ಸಭೆಯು ಸಹ ನಿಗಧಿತ ಅವಧಿಯೊಳಗೆ ಎಲ್ಲಾ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿ ಆನ್‌ಲೈನ್ ಮೂಲಕ ವಿಶ್ವವಿದ್ಯಾನಿಲಯ ಧನಸಹಾಯ ಆಯೋಗಕ್ಕೆ ಮಾನ್ಯತೆಗಾಗಿ ಅರ್ಜಿ ಸಲ್ಲಿಸಲು;
2. ದೂರ ಶಿಕ್ಷಣ ಕೇಂದ್ರವನ್ನು ಸ್ಥಾಪಿಸುವ ಸಲುವಾಗಿ ಸೂಕ್ತವಾದ ಕಡೆಯಲ್ಲಿ ಸ್ಥಳಾವಕಾಶ ಕಲ್ಪಿಸಲು;
3. ವಿಶ್ವವಿದ್ಯಾನಿಲಯದಲ್ಲಿ ಪ್ರಾರಂಭಿಸಲಾಗುವ ದೂರ ಶಿಕ್ಷಣ ಕೇಂದ್ರಕ್ಕೆ **"Directorate of Distance Education, University of Mysore"** ಎಂದು ಹೆಸರಿಡಲು;
4. ದೂರ ಶಿಕ್ಷಣ ಕೇಂದ್ರದ ನಿರ್ದೇಶಕರನ್ನಾಗಿ ಪಿ.ಎಂ.ಇ.ಬಿ. ಬೋರ್ಡ್‌ನಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರೊ. ಯಶವಂತ ಡೋಂಗ್ರೆ ರವರನ್ನು ನೇಮಕ ಮಾಡಲು;
5. ಆನ್‌ಲೈನ್ ಕೋರ್ಸ್‌ಗಳಿಗಾಗಿ ಸಿದ್ದಪಡಿಸಿರುವ ಸಿಲಬಸ್ ಮತ್ತು ಸೆಲ್ಫ್ ಲರ್ನಿಂಗ್ ಮೆಟೀರಿಯಲ್‌ಗಳು ಈಗಾಗಲೇ ವಿಶ್ವವಿದ್ಯಾನಿಲಯದಲ್ಲಿ ಲಭ್ಯವಿರುವುದರಿಂದ, ದೂರ ಶಿಕ್ಷಣ ಕೇಂದ್ರದಲ್ಲಿ ಪ್ರಾರಂಭಿಸಲಾಗುವ ಕೋರ್ಸು/ಪ್ರೋಗ್ರಾಂಗಳ ಸಲುವಾಗಿ ಈ ಕೆಳಕಂಡಂತೆ ನಿಕಾಯಗಳಿಗೆ ಸೀನಿಯರ್ಸ್ ಪ್ರೊಫೆಸರ್‌ಗಳನ್ನು ನೇಮಕ ಮಾಡಲು

| | |
|---|---|
| Arts subject | Senior most Faculty of the Departments concerned. |
| Commerce | Two Senior most Faculties of the Departments concerned. |
| Management | Two Senior most Faculties of the Departments concerned. |
| Science and IT | Two Senior most Faculties of the Departments concerned. |
| Education | Two Senior most Faculties of the Departments concerned. |

6. ಯುಜಿಸಿಯಿಂದ ಮಾನ್ಯತೆ ದೊರಕಿದ ನಂತರ ದೂರ ಶಿಕ್ಷಣ ಕೇಂದ್ರಕ್ಕೆ ಅಗತ್ಯವಾಗಿ ಬೇಕಾದ ಸಿಬ್ಬಂದಿ ವರ್ಗದವರನ್ನು ನಿಯೋಜಿಸಲು ನಿರ್ಧರಿಸಿತು.

**SPL Syn 2017/9.2**

Specialized Programmeಗಳಿಗೆ ಸಂಬಂಧ ಪಟ್ಟಂತೆ ಮಾರ್ಗಸೂಚಿಯನ್ನು ರಚಿಸಲು ರಚಿತವಾಗಿರುವ ಸಮಿತಿ ಸಭೆಯ ನಡಾವಳಿ ಅನುಮೋದನೆಗೆ

ತೀರ್ಮಾನ :

After lengthy discussion, with small modifications, the Syndicate has approved the following recommendations of the Committee constituted to Review the Specialized Programmes.

1. Specialized Programs offered through the existing statute within the jurisdiction of University of Mysore (Mysore, Mandya, Chamarajanagar and Hassan Districts) shall be continued.
2. All Specialized programs outside the jurisdiction of the University of Mysore shall be closed and the same be notified after due approval of the syndicate.

| | |
|---|---|
| | 3. The Institutions offering Specialized programs outside the jurisdiction of the University of Mysore shall not make any admissions from the date of notification of the above decision.<br>4. For the Specialized Programs within the jurisdiction of the University of Mysore, the process of admission, determination of fee structure, constitution of Board of Studies etc. shall be done by the stipulated authorities as done for other Courses of the University of Mysore.<br>5. The calendar of events for admission, Course work and examination, the nomenclature of the Courses and such other matters for all Specialized Programs shall be streamlined by convening a meeting of representatives of all those Institutions.<br>6. In order to ensure quality of education imparted and ascertaining that the Institutions have followed all the rules and regulations, a committee consisting of the Vice-Chancellor, Registrar, Registrar (Evaluation), Dean of the relevant Faculty, a subject expert, Two Syndicate Members and Director of PMEB shall visit the Institutions which are given autonomy to offer Specialized Programs.<br>7. To make use of the existing Ordinance of offering correspondence courses that has already received Governor's assent in 2013 and also formulate relevant statutes through the Statutes Committee for offering distance programs by the University if necessary. It is recommended to amend the Sl. No. 4(i), (b) (ii), (iii) specified under **"Eligibility for admission"** clause of the Ordinance approved by His Excellency the Governor of Karnataka vide letter No. GS 10 Mum 2013 dated 9-10-2013.<br>8. To explore the possibility of applying for registration/recognition of distance education program as notified by UGC before the deadline of 31-09-2017. To facilitate this it was resolved to constitute a committee under the Chairmanship of Prof. T.K.Umesh including all Deans, Prof. B.S.Vishwanath and Director, PMEB as members.<br>9. To write to UGC, State Government and other relevant authorities seeking approval for recognition of Research Centres and Institutions for offering the Specialized Programs. |

| | |
|---|---|
| | Outreach Programs abroad and such other innovative activities.<br>10. In case of Outreach centres who have already made admission for the academic year 2017-18, the committee recommended to approve the same in the best interest of the students which supersede the decision taken in its earlier decision dated 3.8.2017. |
| **SPL Syn 2017/9.3** | ಸಂಶೋಧನಾ ವಿದ್ಯಾರ್ಥಿಗಳ ಹೆಚ್.ಆರ್.ಎ ಕಡಿತ ಹಾಗೂ ಡಿಪ್ಲೊಮಾ ವಿದ್ಯಾರ್ಥಿಗಳ ವಿದ್ಯಾರ್ಥಿವೇತನ ಪಾವತಿಯ ಬಗೆಗೆ. |
| ತೀರ್ಮಾನ : | ದಿನಾಂಕ 04-08-2017ರಂದು ನಡೆದ ಸಲಹಾ ಸಮಿತಿಯ ನಡಾವಳಿಯನ್ನು ಈ ಕೆಳಗಿನ ಅಂಶಗಳನ್ನು ಸೇರ್ಪಡೆ ಮಾಡಿಕೊಳ್ಳುವುದರೊಂದಿಗೆ ಒಪ್ಪಲಾಯಿತು.<br>ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶ ಪಡೆದು ವಿವಿಧ ಶಿಷ್ಯವೇತನದಡಿ ಶಿಷ್ಯವೇತನ ಪಡೆಯುತ್ತಿರುವ ಸಂಶೋಧನಾ ವಿದ್ಯಾರ್ಥಿಗಳು ಪಡೆಯುವ ಮನೆಬಾಡಿಗೆ ಭತ್ಯೆಯ (HRA) **ಶೇ. 50**ರಷ್ಟನ್ನು ಮನೆಬಾಡಿಗೆ ಭತ್ಯೆಯನ್ನಾಗಿ ಕಟಾವು ಮಾಡಲು ಸಿಂಡಿಕೇಟ್ ತೀರ್ಮಾನಿಸಿತು. |
| **SPL Syn 2017/9.4** | Constitution of Selection Committee for the Selection of Teachers. |
| ತೀರ್ಮಾನ : | The Syndicate has approved the panel of names for the Selection Committee for the Assistant Professors and Professors/Associate Professors recommended by the Vice-Chancellor in ANNEXURE-'A' and 'B' respectively and also authorize the Vice-Chancellor to omit/incorporate the names of the experts, if necessary. |
| **SPL Syn2017/9.5** | ವಿಶ್ವವಿದ್ಯಾನಿಲಯದ ಅರ್ಹ ಅಧ್ಯಾಪಕರಿಗೆ ಸಿಎಎಸ್ ಸ್ಕೀಂನಡಿಯಲ್ಲಿ ಪದೋನ್ನತಿಯನ್ನು ನೀಡುವ ಬಗ್ಗೆ. |
| ತೀರ್ಮಾನ : | 1. ಸಿಎಎಸ್ ಪದೋನ್ನತಿ ಸಂಬಂಧ 2015ರಂದು ಪ್ರಕಟಣೆ ಹೊರಡಿಸಿದ್ದು, ಪ್ರಕಟಣೆಯಲ್ಲಿ ದಿನಾಂಕ 10-03-2015ರವರೆಗೆ ಅರ್ಹತೆ ಹೊಂದುವ ಅಧ್ಯಾಪಕರುಗಳು ಅರ್ಜಿ ಸಲ್ಲಿಸುವಂತೆ ತಿಳಿಸಲಾಗಿತ್ತು. ಅದರಂತೆ, ಈಗಾಗಲೇ ಅಧ್ಯಾಪಕರುಗಳು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಆದರೆ, ಆಡಳಿತಾತ್ಮಕ ಕಾರಣಾಂತರಗಳಿಂದ ಸಿಎಎಸ್ ಪ್ರಕ್ರಿಯೆ ನಡೆದಿರುವುದಿಲ್ಲ. ಪ್ರಸ್ತುತ ಸಿಎಎಸ್ ಪ್ರಕ್ರಿಯೆಯನ್ನು ಪ್ರಾರಂಭಿಸಬೇಕೆಂದು ಸಿಂಡಿಕೇಟ್ ಸಭೆಯು ತೀರ್ಮಾನ ಕೈಗೊಂಡಿರುವುದರಿಂದ, ದಿನಾಂಕ 31-08-2017ರವರೆಗೆ ಅರ್ಹತೆ ಹೊಂದಿರುವ ಅಧ್ಯಾಪಕರುಗಳಿಂದ ಅರ್ಜಿಯನ್ನು ಪಡೆದು ಒಟ್ಟಾರೆಯಾಗಿ ಸಿಎಎಸ್ ಪ್ರಕ್ರಿಯೆಯನ್ನು ಪೂರ್ಣಗೊಳಿಸಬೇಕೆಂದು ಹಾಗೂ ಈ ಸಂಬಂಧ ಮತ್ತೊಂದು ಪ್ರಕಟಣೆಯನ್ನು ಹೊರಡಿಸಬೇಕೆಂದೂ<br>2. ಪಿಎಚ್.ಡಿ. ಪದವಿಯನ್ನು ಸಿಎಸ್ ಪದೋನ್ನತಿಯ ಮೊದಲ ಹಂತದಲ್ಲಿ ನಿಗದಿಪಡಿಸಿರುವ ಸೇವಾವಧಿಯಲ್ಲಿ ವಿನಾಯಿತಿ ಪಡೆಯುವ ಸಲುವಾಗಿ ಪರಿಗಣಿಸುವ ಸಂಬಂಧ ಕೆಲವು ನಿರ್ದೇಶನಗಳನ್ನು ಕಾಲೇಜು ಶಿಕ್ಷಣ ಇಲಾಖೆ ಹೊರಡಿಸಿರುವ ಸುತ್ತೋಲೆಯಲ್ಲಿ ಸರ್ಕಾರವು ತಿಳಿಸಿರುವ ಅಂಶಗಳನ್ನು ವಿಶ್ವವಿದ್ಯಾನಿಲಯದಲ್ಲಿ ಅಳವಡಿಸಿಕೊಂಡು ಸಿಎಎಸ್ ಪದೋನ್ನತಿ ನೀಡಲು<br>3. ಸರ್ಕಾರವು ದಿನಾಂಕ 21-06-2017ರ ಪತ್ರದಲ್ಲಿ ತಿಳಿಸಿರುವಂತೆ, ಪ್ರಸ್ತುತ ಚಾಲ್ತಿಯಲ್ಲಿರುವ ಪರಿನಿಯಮಾವಳಿಯಂತೆ ಹಾಗೂ ಯುಜಿಸಿ / ಕರ್ನಾಟಕ |

| | |
|---|---|
| | ಸರ್ಕಾರವು ಕಾಲದಿಂದ ಕಾಲಕ್ಕೆ ಬೋಧಕ ಮತ್ತು ತತ್ಸಮಾನ ಹುದ್ದೆಗಳ ಸಿಎಎಸ್ ಪದೋನ್ನತಿ, ನೇರ ನೇಮಕಾತಿ ಮತ್ತು ಇನ್ನಿತರ ಸೇವಾ ವಿಷಯಗಳ ಬಗ್ಗೆ ಹೊರಡಿಸಿರುವ ಅಧಿಸೂಚನೆ / ಆದೇಶ / ಸುತ್ತೋಲೆ / ನಿಯಮಗಳನ್ನು ಪರಿಪಾಲಿಸುವಂತೆ ಅನುಮತಿ ನೀಡಿ ಅದರಂತೆ ಸಿಎಎಸ್ ಪ್ರಕ್ರಿಯೆಯನ್ನು ನಡೆಸಲು ಸಿಂಡಿಕೇಟ್ ತೀರ್ಮಾನಿಸಿತು. |

**ಇತರೆ ವಿಷಯಗಳು**

ಬಾಬು ಜಗಜೀವನರಾಂ ಅಧ್ಯಯನ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಡಾ. ಶ್ರೀನಿವಾಸ್‌ರವರಿಗೆ ಸುಮಾರು 18 ತಿಂಗಳಿಂದ ಗೌರವಧನ ನೀಡದಿರುವ ಬಗ್ಗೆ ಕುಲಸಚಿವರು (ಪರೀಕ್ಷಾಂಗ) ಇವರು ಆಕ್ಷೇಪ ವ್ಯಕ್ತಪಡಿಸಿದರು.

ಸದರಿ ಕೇಂದ್ರದ ಪ್ರಾಜೆಕ್ಟ್ ಅವಧಿಯು ಮುಗಿದಿದ್ದು, ಕಾಲ ಕಾಲಕ್ಕೆ ಕೇಂದ್ರಕ್ಕೆ ಸಂಬಂಧಿಸಿದ ಬಳಕೆ ಪ್ರಮಾಣಪತ್ರಗಳನ್ನು ಸಲ್ಲಿಸದೇ ಇರುವುದಲ್ಲದೆ, ಸದರಿ ಕೇಂದ್ರದ ನಿರ್ದೇಶಕರು ಪ್ರಾಜೆಕ್ಟ್ ಕಾರ್ಯ ನಿಂತು ಹೋಗಿರುವ ಬಗ್ಗೆ ನಮ್ಮ ಗಮನಕ್ಕೆ ತಂದಿಲ್ಲದೇ ಇರುವುದು ಹಾಗು ಪ್ರಾಜೆಕ್ಟ್‌ನಲ್ಲಿ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿಗಳ ಬಗ್ಗೆಯೂ ಸಹ ತಿಳಿಸಿಲ್ಲವಾದ್ದರಿಂದ, ಸದರಿಯವರಿಗೆ ವೇತನವನ್ನು ವಿತರಿಸಿರುವುದಿಲ್ಲವೆಂಬ ಮಾಹಿತಿಯನ್ನು ಹಣಕಾಸು ಅಧಿಕಾರಿಗಳಿಂದ ಪಡೆಯಲಾಯಿತು.

ನಂತರ ಸಭೆಯು ಸುದೀರ್ಘವಾಗಿ ಚರ್ಚಿಸಿ, ಮಾನವೀಯತೆಯ ದೃಷ್ಟಿಯಿಂದ ಮೊದಲು ವೇತನವನ್ನು ಬಿಡುಗಡೆ ಮಾಡಿ, ನಂತರ ಸದರಿರವರನ್ನು ಸೇವೆಯಲ್ಲಿ ಮುಂದುವರೆಸುವುದರ ಬಗೆಗೆ ನಿಯಮಾನುಸಾರ ಕ್ರಮಕೈಗೊಳ್ಳಲು ಸಿಂಡಿಕೇಟ್ ತೀರ್ಮಾನಿಸಿತು.

ಕೊನೆಯಲ್ಲಿ ಮಾನ್ಯ ಕುಲಪತಿಗಳು, ಸಿಂಡಿಕೇಟ್ ಸಭೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಉಪಯುಕ್ತ ಸಲಹೆ ಸೂಚನೆಗಳನ್ನು ನೀಡಿ ತೀರ್ಮಾನ ಕೈಗೊಳ್ಳಲು ಸಹಕರಿಸಿದ ಎಲ್ಲಾ ಸದಸ್ಯರುಗಳಿಗೂ ವಂದನೆ ಸಲ್ಲಿಸಿದ ನಂತರ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ಕುಲಸಚಿವ ಮತ್ತು ಸದಸ್ಯ ಕಾರ್ಯದರ್ಶಿ**

**ಕುಲಪತಿ ಮತ್ತು ಅಧ್ಯಕ್ಷರು**